ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಲಾಲ್ ಸಲಾಂ
ಮದನ್ ಮಾಸ್ಟರ್

ಸಂಪುಟ 11 | ಸಂಚಿಕೆ 15 | ಏಪ್ರಿಲ್ 3-9 , 2017 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com

ಬಿಬಿಎಂಪಿ ಬಜೆಟ್ : ಭರವಸೆ ಈಡೇರುವುದೇ?





ಮನಿ ಬಿಲ್ ಕುತಂತ್ರ ನಿಲ್ಲಿಸಿ



ಬಿಜೆಪಿಗೆ ಕಾರ್ಪೊರೇಟ್ ಫಂಡಿಂಗ್ ಈಗ ನಿರಾಳ : ಕಾರಟ್



ಫ್ಯಾಸಿಸ್ಟ್-ವಿರೋಧಿ ಸಮಾವೇಶಕ್ಕೆ ಬನ್ನಿ

ಮಾಧ್ಯಮಗಳಿಗೆ ಲಗಾಮು ಬೇಕೆ?



'ಒಬಾಮಾಕೇರ್' ರದ್ದತಿ : ಟ್ರಂಪ್ ಗೆ ಸೋಲು

ಉತ್ತರಪ್ರದೇಶದಲ್ಲಿ ದಾಳಿಗಳು: ಸರಕಾರ ಇವನ್ನು ನಿಲ್ಲಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಉತ್ತರಪ್ರದೇಶದಲ್ಲಿ ಆದಿತ್ಯನಾಥ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಂದಿನಿಂದ ಅಲ್ಪಸಂಖ್ಯಾತ ಸಮುದಾಯದ ಮೇಲೆ ಕ್ರೂರ ದಾಳಿಗಳು ನಡೆಯುತ್ತಿವೆ. ಕಾನೂನುಬಾಹಿರ ಕಸಾಯಿಖಾನೆಗಳನ್ನು ಮುಚ್ಚುವ ಹೆಸರಿನಲ್ಲಿ ಉತ್ತರಪ್ರದೇಶ ಸರಕಾರ ಎಲ್ಲ ಕಸಾಯಿಖಾನೆಗಳ ಮೇಲೆ ಗುರಿಯಿಟ್ಟಿದೆ. ಇದೆಲ್ಲ ಗೋಮಾಂಸದ ಕಾನೂನುಬಾಹಿರ ವ್ಯಾಪಾರವನ್ನು ಹತೋಟಿಗೆ ತರಲಿಕ್ಕಾಗಿ ಎಂದು ನೆವ ಕೊಡಲಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಮಾಂಸದ ಅಂಗಡಿಗಳ ಮೇಲೆ ವ್ಯಾಪಕವಾದ ದಾಳಿಗಳು ನಡೆದಿರುವ ಉದಾಹರಣೆಗಳಿವೆ. ಈ ದಾಳಿಗಳನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಭಾರತದ ಒಟ್ಟು ಮಾಂಸದ ರಫ್ತಿನಲ್ಲಿ ಸುಮಾರು 50% ಉತ್ತರಪ್ರದೇಶದಿಂದಲೇ ಆಗುತ್ತಿದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ಇಂತಹ ಧೋರಣೆ ನೇರವಾಗಿ ಮತ್ತು ಪರೋಕ್ಷವಾಗಿ 25 ಲಕ್ಷ ಮಂದಿಯ ಜೀವನೋಪಾಯವನ್ನು ತಟ್ಟುತ್ತದೆ. ಅಲ್ಲದೆ ಮಾಂಸದ ಉತ್ಪಾದನೆ ಮತ್ತು ಮಾರಾಟದಲ್ಲಿ ತೊಡಗಿರುವ ಎಲ್ಲ ವಿಭಾಗಗಳ ಮೇಲೆ ಗುರಿಯಿಡಲಾಗುತ್ತಿದೆ, ದೈಹಿಕ ಹಲ್ಲೆಗಳನ್ನೂ ನಡೆಸಲಾಗುತ್ತಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಇರುವ ಸಂವಿಧಾನಿಕ ಭರವಸೆಗಳಿಗೆ ರಕ್ಷಣೆ ದೊರೆಯುವಂತೆ ಮಾಡಬೇಕು ಮತ್ತು ಉತ್ತರಪ್ರದೇಶದ ಬಿಜೆಪಿ ರಾಜ್ಯ ಸರಕಾರ ಇಂತಹ ವಿನಾಶಕಾರಿ ದಾರಿ ಹಿಡಿಯದಂತೆ ತಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಮಾರುತಿ ಕಾರ್ಮಿಕರ ಕುರಿತ ಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ
ಗುಡ್‌ಗಾಂವ್‌ನಲ್ಲಿ ವಿಶಾಲ ರ್‍ಯಾಲಿ
ಹರ್ಯಾಣದಾದ್ಯಂತ ಸಂಕಲ್ಪ ದಿನಾಚರಣೆ

ಮಾರುತಿ ಸುಝುಕಿಯ ಮಾನೆಸರ್ ಸ್ಥಾವರದ 13 ಕಾರ್ಮಿಕರಿಗೆ ಜೀವಾವಧಿ ಶಿಕ್ಷೆ ಮತ್ತು ಇತರ ಕಾರ್ಮಿಕರಿಗೆ ಶಿಕ್ಷೆ ವಿಧಿಸಿರುವುದು ನ್ಯಾಯವಲ್ಲ ಎಂದು ಮಾರ್ಚ್ 23ರಂದು ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ನೇಣುಗಂಬಗಳನ್ನು ಏರಿದ ದಿನವಾದ ಮಾರ್ಚ್23ರಂದು ಹರ್ಯಾಣದಾದ್ಯಂತ ಸಂಕಲ್ಪ ದಿನಾಚರಣೆ ನಡೆಸಲಾಗಿದೆ. ಕಂಪನಿಯ ಸ್ಥಾವರ ಇರುವ ಗುಡ್‌ಗಾಂವ್‌ನಲ್ಲಿ ಒಂದು ವಿಶಾಲ ರ್‍ಯಾಲಿ ನಡೆಯಿತು.

ಮಾರ್ಚ್ 23ರಂದು ಗುಡ್‌ಗಾಂವ್‌ನಲ್ಲಿರುವ ಉದ್ದಿಮೆಗಳ ಕಾರ್ಮಿಕರು ತಮ್ಮ ಕೆಲಸದ ಪಾಳಿ ಮುಗಿಯುತ್ತಿದ್ದಂತೆ ತಮ್ಮ ಕಾರ್ಖಾನೆ ಗೇಟುಗಳಿಂದ ಮೆರವಣಿಗೆಗಳಲ್ಲಿ ಸಾಗಿದರು. ಅತ್ಯಂತ ದೊಡ್ಡ ಮೆರವಣಿಗೆ ಮಾರುತಿಯ ಮಾನೆಸರ್ ಘಟಕದಿಂದಲೇ ಆರಂಭವಾಯಿತು. ಈ ಎಲ್ಲ ಮೆರವಣಿಗೆಗಳು ಒಂದುಗೂಡಿ 5ಕಿ.ಮೀ. ಕ್ರಮಿಸಿ ಬಹಿರಂಗ ಸಭೆ ನಡೆಯುವ ಸ್ಥಳವನ್ನು ಸೇರಿದವು. ಮಾರುತಿ ಸುಝುಕಿ ಕಾರ್ಮಿಕರ ಸಂಘದ ಮುಖಂಡರು, ಸಿಐಟಿಯುನ ಹರ್ಯಾಣ ರಾಜ್ಯಾಧ್ಯಕ್ಷ ಸತ್‌ಬೀರ್‌ಸಿಂಗ್, ಪ್ರಧಾನ ಕಾರ್ಯದರ್ಶಿ ಜಯಭಗವಾನ್, ಎಐಟಿಯುಸಿ ರಾಜ್ಯ ಉಪಪ್ರಧಾನ ಕಾರ್ಯದರ್ಶಿ ಅನಿಲ್ ಪಂವಾರ್ ಮತ್ತು ಎಐಯುಟಿಯುಸಿಯ ರಾಂಕುಮಾರ್ ಮೆರವಣಿಗೆಯ ನೇತೃತ್ವ ವಹಿಸಿದರು.

ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಮಿಕರನ್ನು ಉದ್ದೇಶಿಸಿ ಹರ್ಯಾಣದ ಕಾರ್ಮಿಕ ಮುಖಂಡರಲ್ಲದೆ, ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿಗಳಲ್ಲೊಬ್ಬರಾದ ಎ.ಆರ್.ಸಿಂಧು ಮಾತನಾಡಿ ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು ಸಾಮ್ರಾಜ್ಯಶಾಹಿ ದಮನದ ವಿರುದ್ಧ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ದಿನದಂದು ಕಾರ್ಮಿಕರು ಬಂಡವಾಳಶಾಹಿ ದಮನದ ವಿರುದ್ಧ ಹೋರಾಟದ ಸಂಕಲ್ಪ ಮಾಡುತ್ತಿರುವುದು ಅತ್ಯಂತ ಸೂಕ್ತವಾಗಿದೆ ಎಂದರು. ಅಖಿಲ ಭಾರತ ಮಟ್ಟದಲ್ಲೂ ಕಾರ್ಮಿಕ ಸಂಘಟನೆಗಳು ಈ ಹೋರಾಟವನ್ನು ಎತ್ತಿಕೊಳ್ಳುತ್ತವೆ, ಎಪ್ರಿಲ್ 5ರಂದು ದೇಶವ್ಯಾಪಿ ಪ್ರತಿಭಟನೆ ನಡೆಯಲಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಸಿಐಟಿಯು ಹರ್ಯಾಣ ರಾಜ್ಯಸಮಿತಿ ಹೊರಡಿಸಿದ ಕರಪತ್ರವನ್ನು ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯಲ್ಲಿ ಹಂಚಲಾಗುತ್ತಿದೆ.

ಮಾರುತಿ ಕಂಪನಿಯ ಕಾರ್ಮಿಕರನ್ನು ದೋಷಿಗಳೆಂದು ತೀರ್ಪಿತ್ತಿರುವುದು ಉಚಿತವಲ್ಲವೆಂದು ಹೇಳಿರುವ ಈ ಕರಪತ್ರ 117 ಕಾರ್ಮಿಕರನ್ನು ನ್ಯಾಯಾಲಯವೇ ನಿರ್ದೋಷಿಗಳೆಂದು ಬಿಡುಗಡೆ ಮಾಡಿರುವಾಗ ಅವರನ್ನು ಐದು ವರ್ಷಗಳ ಕಾಲ ಅಕಾರಣವಾಗಿ ಪೀಡಿಸಿರುವ ಮಾರುತಿ ಕಂಪನಿಯ ವ್ಯವಸ್ಥಾಪಕರು, ಸರಕಾರ ಮತ್ತು ಅದರ ಪೋಲಿಸನ್ನು ಏಕೆ ಕಾನೂನಿನ ವ್ಯಾಪ್ತಿಗೆ ತಂದಿಲ್ಲ ಎಂದೂ ಈ ಕರಪತ್ರ ಪ್ರಶ್ನಿಸಿದೆ.

ಮಾರುತಿ ಕಾರ್ಮಿಕರ ಏಕೈಕ ಅಪರಾಧವೆಂದರೆ ಅವರು ತಮ್ಮ ಆಯ್ಕೆಯ ಕಾರ್ಮಿಕ ಸಂಘವನ್ನು ರಚಿಸಿದ್ದು. ಈ ಹಕ್ಕನ್ನು ದೇಶದ ಸಂವಿಧಾನ ನೀಡಿದೆ, ಆದರೆ ಲೂಟಿಕೋರ ಬಂಡವಾಳಕ್ಕೆ ಮತ್ತು ಅವರ ಚೇಲಾಗಳಿಗೆ ಇದು ಒಪ್ಪಿಗೆಯಿಲ್ಲ ಎಂದಿರುವ ಈ ಕರಪತ್ರ 56 ಅಂಗುಲ ಎದೆಯನ್ನು ಪ್ರದರ್ಶಿಸುತ್ತಲೇ ಸಾಮ್ರಾಜ್ಯಶಾಹಿಯ ಎದುರು ಡೊಗ್ಗುಸಲಾಮು ಹೊಡೆಯುವ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರ ಕಾರ್ಮಿಕರ ಈ ಹಕ್ಕುಗಳನ್ನು ದಮನ ಮಾಡಲು ಪ್ರಯತ್ನಿಸುತ್ತಿವೆ. ಇದರ ವಿರುದ್ಧ ಹೋರಾಟಕ್ಕೆ ಐಕ್ಯತೆಯಿಂದ ಮುಂದಾಗಬೇಕೆಂದು ಸಿಐಟಿಯು ಕರಪತ್ರ ಕರೆ ನೀಡಿದೆ.

ಮಾತೆಂದರೆ ಇದು

ನಾನು ಒಂದೊಂದೇ ಸೆಲ್ ಮೂಲಕ ಹಾದು ಅವರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ವಿದಾಯ ಕೋರಿದೆ. ಅಬೂಬಕರ್‌ನ ಕೈಗಳನ್ನು ಹಿಡಿದುಕೊಂಡಾಗ ನನಗೆ ಬಿಡಲಿಕ್ಕೇ ಮನಸಾಗಲಿಲ್ಲ. ಆ ಕ್ಷಣ ಮೋಪ್ಲಾಗಳ ಧೀರೋದಾತ್ತ ಪರಂಪರೆ ಕಣ್ಮುಂದೆ ಹಾದುಹೋಯಿತು. ಈ ಮೋಪ್ಲಾ ಸಮುದಾಯ ನಮಗೆ ನಾಲ್ವರು ಹೆಮ್ಮೆಯ ಹುತಾತ್ಮರಲ್ಲಿ ಒಬ್ಬನನ್ನು ಕೊಡುಗೆಯಾಗಿ ನೀಡಿದೆ. ದುರಂತ ನೋಡಿ! ಕೆಲವು ಹಿಂದೂ ದೇಶಭಕ್ತರು ನಮ್ಮ ಮುಸ್ಲಿಮ್ ಸಹೋದರರ ದೇಶಭಕ್ತಿಯನ್ನು ಅನುಮಾನಿಸುತ್ತಾರೆ!

– ಪಿಸಿ ಜೋಶಿ,

ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ

(ಕಯ್ಯೂರು ವೀರರನ್ನು ಭೇಟಿ ಮಾಡಿ ಬರೆದ ಲೇಖನ)

ರಾಜ್ಯಸಭೆ ಭಾರತೀಯ ಸಂವಿಧಾನದ ಭಾವನೆಯನ್ನು ರಕ್ಷಿಸಬೇಕು ಕಾನೂಬಾಹಿರವಾಗಿ ಮನಿಬಿಲ್ ಎಂದು ವರ್ಗೀಕರಿಸುವ ಕುತಂತ್ರ ನಿಲ್ಲಬೇಕು –ಉಪರಾಷ್ಟ್ರಪತಿಗಳಿಗೆ 200ಕ್ಕೂ ಹೆಚ್ಚು ಪ್ರತಿಷ್ಠಿತರ ಪತ್ರ

ಪ್ರಖ್ಯಾತ ನ್ಯಾಯವಾದಿ ಫಾಲಿ ನರಿಮನ್, ನಾಟಕಕಾರ ಗಿರೀಶ ಕಾರ್ನಾಡ್, ಸಂಗೀತಜ್ಞ ಟಿ.ಎಂ. ಕೃಷ್ಣ, ಅವರೊಂದಿಗೆ ಮ್ಯಾಗಸ್ಸೆಸ್ಸೆ ಪುರಸ್ಕಾರ ಪಡೆದ ಸಾಮಾಜಿಕ ಕಾರ್ಯಕರ್ತ ಬೆಜ್ವಾಡ ವಿಲ್ಸನ್, ಅರ್ಥಶಾಸ್ತ್ರಜ್ಞರಾದ ಜಯತಿ ಘೋಷ್, ಪ್ರಭಾತ್ ಪಟ್ನಾಯಕ್ ಮತ್ತಿತರ 200ಕ್ಕೂ ಹೆಚ್ಚು ಪ್ರತಿಷ್ಠಿತ ನಾಗರಿಕರು ಹಣಕಾಸು ಮಸೂದೆ 2017ನ್ನು 'ಮನಿ ಬಿಲ್' ಎಂದು ಕಾನೂನುಬಾಹಿರವಾಗಿ ಪರಿಗಣಿಸಿರುವ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುತ್ತ ರಾಜ್ಯಸಭಾದ ಅಧ್ಯಕ್ಷರೂ ಮತ್ತು ದೇಶದ ಉಪರಾಷ್ಟ್ರಪತಿಗಳೂ ಆದ ಹಮೀದ್ ಅನ್ಸಾರಿಯವರಿಗೆ ಪತ್ರ ಬರೆದಿದ್ದಾರೆ.

ಎಲ್ಲ ನಾಗರಿಕರನ್ನು ತಟ್ಟುವ ಮಹತ್ವದ ಶಾಸನಗಳನ್ನು ರಾಜ್ಯಸಭೆಯ ಅನುಮೋದನೆಯಿಲ್ಲದೆ ತಂದು ಬಿಡಲು ಸರಕಾರ 'ಮನಿ ಬಿಲ್' ತಂತ್ರವನ್ನು ಉಪಯೋಗಿಸಲಾರಂಭಿಸಿದೆ. ಈ ಪ್ರಜಾಪ್ರಭುತ್ವ–ವಿರೋಧಿ ತಂತ್ರವನ್ನು ತೆರಿಗೆ ಮತ್ತು ಹಣ ನೀಡಿಕೆಯ ಅಗತ್ಯಕ್ಕಿಂತ ಬಹಳ ಹೆಚ್ಚಿನ ವ್ಯಾಪ್ತಿಯಿರುವ, ಕೋಟ್ಯಂತರ ನಾಗರಿಕರನ್ನು ಹಲವಾರು ವಿಧಗಳಲ್ಲಿ ತಟ್ಟುವ ಆಧಾರ್ ಮಸೂದೆಗೆ ಬಳಸಲಾಯಿತು. ಅತ್ಯಂತ ಮಹತ್ವದ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಚರ್ಚಿಸಿಯೇ ಇಲ್ಲ, ಅದನ್ನು ಸಾರ್ವಜನಿಕ ಪರೀಕ್ಷಣೆಗೆ ಒಡ್ಡಿಲ್ಲ ಎಂಬ ಸಂಗತಿಯತ್ತ ಪತ್ರ ಗಮನ ಸೆಳೆದಿದೆ.

ಇತ್ತೀಚಿನ ಬೆಚ್ಚಿ ಬೀಳಿಸುವ ಉದಾಹರಣೆ ಎಂದರೆ ಹಣಕಾಸು ಮಸೂದೆಯಲ್ಲಿ ಸೇರಿಸಬಾರದಿದ್ದ, ಸ್ವತಂತ್ರವಾಗಿ ಪರಿಶೀಲಿಸಬೇಕಾಗಿದ್ದ ಹಲವಾರು ಬಹಳ ಮಹತ್ವದ ವಿಷಯಗಳನ್ನು ಅಳವಡಿಸಿರುವುದು. ದೇಶದಲ್ಲಿ ಭ್ರಷ್ಟಾಚಾರದ ಅತ್ಯಂತ ಮಹತ್ವದ ಮೂಲವಾದ ರಾಜಕೀಯ ದೇಣಿಗೆಯ ಪ್ರಶ್ನೆಯನ್ನು ಈ ಮಸೂದೆಯಲ್ಲಿ ಸೇರಿಸಿ ಅದನ್ನು ಅತ್ಯಂತ ಅಪಾರದರ್ಶಕಗೊಳಿಸಲಾಗಿದೆ. ಇದು ದೇಶದಲ್ಲಿ ಪ್ರಜಾಪ್ರಭುತ್ವದ ಮೇಲೆ ಭಾರೀ ದುಷ್ಪರಿಣಾಮಗಳನ್ನುಂಟು ಮಾಡುವಂತದ್ದು ಎಂದು ಈ ಪತ್ರದಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ದೇಶದ ಪ್ರಜಾಸತ್ತಾತ್ಮಕ ನಿರ್ವಹಣೆ ಮತ್ತು ನಾಗರಿಕರ ಹಣಕಾಸು ಭದ್ರತೆಯ ಮೇಲೆ ದೂರಗಾಮೀ ಪರಿಣಾಮ ಬೀರುವ ಇಂತಹ ಮಸೂದೆಗಳನ್ನು ವ್ಯಾಪಕ ಸಾರ್ವಜನಿಕ ಚರ್ಚೆಗೆ ಇಡಬೇಕಾಗುತ್ತದೆ. ಅವನ್ನು ಮನಿ ಬಿಲ್ ಎಂದು ಅಂಗೀಕರಿಸುವಂತಿಲ್ಲ ಮತ್ತು ಅಂಗೀಕರಿಸಬಾರದು. ಆದ್ದರಿಂದ 2017 ರ ಮಸೂದೆ ಸಂ.12–ಸಿ ಯ ಎಲ್ಲ ಆಯಾಮಗಳ ಮೇಲೆ ವ್ಯಾಪಕ ಮತ್ತು ಅಬಾಧಿತ ಚರ್ಚೆ ನಡೆಸಲು ಅವಕಾಶ ಕೊಡಬೇಕು, ಅವನ್ನು ಮನಿಬಿಲ್ ಎಂದು ಕಾನೂನುಬಾಹಿರವಾಗಿ ವರ್ಗೀಕರಿಸಿ ಚರ್ಚೆಯಿಂದ ತಪ್ಪಿಸುವ ಆಚರಣೆಯನ್ನು ತಕ್ಷಣವೇ ನಿಲ್ಲಿಸುವಂತೆ ತಮ್ಮಿಂದ ಸಾಧ್ಯವಾದುದನ್ನೆಲ್ಲ ಮಾಡಬೇಕು ಎಂದು ಈ ಪತ್ರದಲ್ಲಿ ಉಪರಾಷ್ಟ್ರಪತಿಗಳನ್ನು ಕೋರಲಾಗಿದೆ.

ಮೋಟಾರು ವಾಹನಗಳ ಕಾಯ್ದೆ, ವಿಮಾ ಮತ್ತು ವಾಹನ ಶುಲ್ಕ ಏರಿಕೆಯ ವಿರುದ್ಧ ಸಾರಿಗೆ ಕಾರ್ಮಿಕರ ರಾಷ್ಟ್ರೀಯ ಚಳುವಳಿ

ಅಖಿಲ ಭಾರತ ಸಾರಿಗೆ ಕಾರ್ಮಿಕರ ಒಕ್ಕೂಟದ ಕರೆಯ ಮೇರೆಗೆ ದೇಶದ ವಿವಿಧ ಭಾಗಗಳಲ್ಲಿ ಮೋಟಾರು ವಾಹನಗಳ ಕಾಯ್ದೆ(ತಿದ್ದುಪಡಿ) ಮಸೂದೆ, 2016ನ್ನು ಸಂಸತ್ತು ಪಾಸು ಮಾಡುವುದರ ವಿರುದ್ಧ, ಹಾಗೂ ವಿಮಾ ಪ್ರೀಮಿಯಂ ಮತ್ತು ವಾಹನಗಳ ನೊಂದಾವಣಿ ಶುಲ್ಕ, ಪರವಾನಿಗೆ ಶುಲ್ಕ ಇತ್ಯಾದಿಗಳಲ್ಲಿ ವಿಪರೀತ ಹೆಚ್ಚಳ ಮಾಡುವುದರ ವಿರುದ್ಧ ರಾಷ್ಟ್ರವ್ಯಾಪಿ ಚಳುವಳಿಗೆ ಕರೆ ನೀಡಿದೆ. ಕೇಂದ್ರ ಸರಕಾರ ಈಗಾಗಲೇ ಕಳೆದ ಎರಡು ವರ್ಷಗಳಲ್ಲಿ ಇವುಗಳಲ್ಲಿ 200% ಹೆಚ್ಚಳ ಮಾಡಿದೆ. ಈಗ ಐಆರ್‌ಡಿಎ ಥರ್ಡ್ ಪಾರ್ಟಿ ವಿಮಾ ಪ್ರೀಮಿಯಂಗಳಲ್ಲಿ 30% ದಿಂದ 50% ಹೆಚ್ಚಳ ಮಾಡಬೇಕು ಎಂದು ಆದೇಶಿಸಿದೆ. ಜಂಟಿ ಮುಷ್ಕರವೂ ಸೇರಿದಂತೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕೆಂದು ಒಕ್ಕೂಟ ಕರೆ ನೀಡಿದೆ.

ಬಿಹಾರದಲ್ಲಿ ಮಾರ್ಚ್ 27ರಂದು ಸಂಪೂರ್ಣ ಮುಷ್ಕರ ನಡೆದಿದೆ. ಆಟೋಗಳು, ಬಸ್ಸುಗಳು, ಟ್ಯಾಕ್ಸಿಗಳು, ಲಾರಿಗಳು ಸಂಚರಿಸದೆ ಬಂದ್‌ನಂತಹ ವಾತಾವರಣ ಸೃಷ್ಟಿಯಾಯಿತು.

ಕೇರಳದಲ್ಲಿ ಮಾರ್ಚ್ 31ರಂದು ವಾಹನ ಬಂದ್ ಆಚರಿಸಲಾಗುತ್ತಿದೆ.

ಅಸ್ಸಾಂ ನಲ್ಲಿ ಎಪ್ರಿಲ್ 8ರಂದು ಮುಷ್ಕರ ನಡೆಸಲು ನಿರ್ಧರಿಸಲಾಗಿದೆ.

ದಕ್ಷಿಣ ಭಾರತ ಸಾರಿಗೆ ನಿರ್ವಾಹಕರ ಕಲ್ಯಾಣ ಸಂಘ ಮಾರ್ಚ್ 30ರಿಂದ ಅನಿರ್ದಿಷ್ಟ ಕಾಲ ವಾಹನ ಬಂದ್ ನಡೆಸಲು ನಿರ್ಧರಿಸಿದೆ. ಅಖಿಲ ಭಾರತ ಸಾರಿಗೆ ಕಾರ್ಮಿಕರ ಒಕ್ಕೂಟ ಈ ಎಲ್ಲ ಹೋರಾಟಗಳಿಗೆ ತನ್ನ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಮಹಿಳೆಯರ ಕುರಿತು ಕೇರಳ ಕಾಂಗ್ರೆಸ್ ಮುಖಂಡರ ಪ್ರತಿಗಾಮಿ ಹೇಳಿಕೆ: ಎಐಡಿಡಬ್ಲ್ಯುಎ ಖಂಡನೆ

ಕೇರಳ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಂ.ಎಂ. ಹಸ್ಸನ್ ಕೇರಳ ರಾಜ್ಯ ಯುವಜನ ಕಲ್ಯಾಣ ಮಂಡಳಿಯ ಶಿಬಿರವೊಂದರಲ್ಲಿ ಪತ್ರಕರ್ತ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಮುಟ್ಟಾಗಿರುವ ಮಹಿಳೆಯರು 'ಅಶುದ್ಧ'ರು , ಅವರು ದೇವಸ್ಥಾನಗಳಿಗೆ ಹೋಗಬಾರದು, ಮುಟ್ಟಿನ ಅವಧಿ ಅಶುದ್ಧತೆಯ ದಿನಗಳಾದ್ದರಿಂದ ಮನೆಯಲ್ಲೇ ಇರಬೇಕು ಎಂದು ಹೇಳಿರುವುದಾಗಿ ವರದಿಯಾಗಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಇಂತಹ ಹೇಳಿಕೆ ಆಘಾತಕಾರಿ ಎಂದು ಬಣ್ಣಿಸಿದೆ.

ಶಿಬಿರದಲ್ಲಿ ಭಾಗವಹಿಸಿದ್ದ ಮಹಿಳೆಯರು ಇದನ್ನು ಪ್ರತಿಭಟಿಸಿ ಅವರನ್ನು ಪ್ರಶ್ನಿಸಿದಾಗ ಅವರು ಖೇದ ವ್ಯಕ್ತಪಡಿಸುವ ಬದಲು ತನ್ನ ಟಿಪ್ಪಣಿಗೇ ಅಂಟಿಕೊಂಡರು.

ನಮ್ಮ ಚುನಾಯಿತ ಪ್ರತಿನಿಧಿಗಳು ಇಂತಹ ಮಹಿಳಾ–ವಿರೋಧಿ ನಿಲುವುಗಳನ್ನು ತಳೆಯುವುದು ಬಹಳಷ್ಟು ಆತಂಕದ ಸಂಗತಿ. ಇಂದಿನ ದಿನಗಳಲ್ಲಿ ದೇಶದಲ್ಲಿ ಮಹಿಳೆಯರು ಅತ್ಯಂತ ಕೆಟ್ಟ ರೀತಿಯ ದಾಳಿಗಳನ್ನು ಎದುರಿಸಬೇಕಾಗಿ ಬರುತ್ತಿದೆ. ಮಹಿಳೆಯರ ವಿರುದ್ಧ ಹಿಂಸಾಚಾರದ ಘಟನೆಗಳು ಆತಂಕಕಾರಿ ರೀತಿಯಲ್ಲಿ ಹೆಚ್ಚುತ್ತಿವೆ. ಇಂತಹ ಟಿಪ್ಪಣಿಗಳು ಮಹಿಳೆಯರ ಮೇಲೆ ಗುರಿಯಿಟ್ಟಿರುವ ಪ್ರತಿಗಾಮಿ ಪಾಳೆಯಗಾರಿ ಮತ್ತು ಪಿತೃಪ್ರಧಾನತೆಯ ಶಕ್ತಿಗಳನ್ನು ಮತ್ತಷ್ಟು ಹುರಿದುಂಬಿಸುತ್ತವೆ ಎಂದಿರುವ ಎಐಡಿಡಬ್ಲ್ಯುಎ ಈ ಹೇಳಿಕೆಯನ್ನು ಖಂಡಿಸುತ್ತ ಎಂಎಂ ಹಸ್ಸನ್ ಅವರು ಈ ಬಗ್ಗೆ ಬೇಷರತ್ ಕ್ಷಮೆ ಕೇಳಬೇಕೆಂದು ಆಗ್ರಹಿಸಿದೆ.

ಸಂಪಾದಕೀಯ

ಮಾಧ್ಯಮಗಳಿಗೆ ಲಗಾಮು ಬೇಕೆ?

ರಾಜ್ಯ ವಿಧಾನಮಂಡಲದಲ್ಲಿ ಮಾಧ್ಯಮಗಳ ಬಗ್ಗೆ ಬಜೆಟ್ ಅಧಿವೇಶನದಲ್ಲಿ ಸುದೀರ್ಘ ಬಿಸಿ ಬಿಸಿ ಚರ್ಚೆ ನಡೆದಿದೆ. ಮೂರೂ ಪಕ್ಷಗಳ ಶಾಸಕರು ನಾಯಕರು ಮಾಧ್ಯಮಗಳ ಖಾರವಾದ ಟೀಕೆಯಲ್ಲಿ ಅಪರೂಪದ ಐಕ್ಯತೆ ಪ್ರದರ್ಶಿಸಿದರು. "ಮಾಧ್ಯಮಗಳು ಲಂಗುಲಗಾಮಿಲ್ಲದೆ ಚಾರಿತ್ರ್ಯಹರಣ ಮಾಡುತ್ತಿವೆ. ವ್ಯಕ್ತಿಗಳ ಖಾಸಗಿ ಬದುಕಿನಲ್ಲಿ ಕೈ ಹಾಕುತ್ತಿವೆ." ಎಂಬ ದೂರುಗಳು ಕೇಳಿ ಬಂದವು. "ಮಾಧ್ಯಮಗಳನ್ನು ನಿಯಂತ್ರಿಸಲು ಏನು ಮಾಡಬೇಕೆಂದು ಗೊತ್ತು" ಎಂಬ ಬೆದರಿಕೆಯ ಮಾತುಗಳು ಕೇಳಿ ಬಂದವು. ಸದನ ಸಮಿತಿಯೊಂದರ ನೇಮಕದ ಬಗ್ಗೆ ನಿರ್ಧರಿಸಲಾಯಿತು. "ಟಿವಿ ಮತ್ತು ಮುದ್ರಣ ಮಾಧ್ಯಮಗಳ ಸ್ವೇಚ್ಛಾಚಾರ ತಡೆದು ಸ್ವಾತಂತ್ರ್ಯ ಎತ್ತಿ ಹಿಡಿಯಲು ಈಗಿರುವ ಕಾನೂನು ಬಿಗಿಗೊಳಿಸಬೇಕಾಗಿದೆ. ಅದಕ್ಕಾಗಿ 15 ದಿನಗಳ ಒಳಗೆ ವರದಿ ಕೊಡುವಂತೆ ಸದನ ಸಮಿತಿಗೆ ಸೂಚಿಸಲಾಗುವುದು" ಎಂದು ಸಭಾಧ್ಯಕ್ಷರು ಹೇಳಿದರು. ಮಾಧ್ಯಮಗಳಿಗೆ ಲಗಾಮು ಹಾಕುವುದು ಎಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಮೊಟಕು ಮಾಡಿದಂತೆ ಎಂದು 'ಅಪಸ್ವರ' ಎತ್ತಿದ ಮಂತ್ರಿಯೊಬ್ಬರ ಬಾಯಿಯನ್ನು ಮುಚ್ಚಿಸಲಾಯಿತು.

ಶಾಸಕರು, ಮಂತ್ರಿಗಳು ಮತ್ತು ಮಾಧ್ಯಮಗಳ ನಡುವೆ ಸರಸ–ವಿರಸ, ಘರ್ಷಣೆಗಳೂ ಹೊಸದೇನಲ್ಲ. ರಾಜಕೀಯ ಅಧಿಕಾರದಲ್ಲಿ ಇದ್ದವರು ತಮ್ಮ ಸಾಧನೆಗಳನ್ನು ಮಾಧ್ಯಮಗಳು ಪ್ರಚಾರ ಮಾಡಬೇಕೆಂದು ಬಯಸುತ್ತಾರೆ. ಅದಕ್ಕಾಗಿ ಮಾಧ್ಯಮಗಳನ್ನು ಓಲೈಸುತ್ತಾರೆ. ತಮ್ಮ ವೈಫಲ್ಯಗಳು, ಹಗರಣಗಳು, ಭ್ರಷ್ಟಾಚಾರಗಳು, ಜನ–ವಿರೋಧಿ ಕ್ರಮಗಳನ್ನು ಮಾಧ್ಯಮಗಳು ಬಯಲು ಮಾಡಿದಾಗ ಕೋಪಗೊಳ್ಳುವುದು ಅವನ್ನು ದಮನ ಮಾಡಲು ಪ್ರಯತ್ನಿಸುವುದು ಸಹ ಹೊಸತೇನಲ್ಲ. ಮಾಧ್ಯಮಗಳ ಮೇಲೆ ಲಗಾಮು ಹಾಕುವ ಪ್ರಯತ್ನಗಳೂ ಹಿಂದಿನಿಂದಲೂ ಸತತವಾಗಿ ನಡೆದಿವೆ. ತುರ್ತು ಪರಿಸ್ಥಿತಿಯಲ್ಲಿ ಅದು ಸಾರ್ವತ್ರಿಕ ಸಾಂಸ್ಥಿಕ ಸ್ವರೂಪ ಪಡೆದಿತ್ತು. ಇತ್ತೀಚೆಗೆ ತೆಲಂಗಾಣದಲ್ಲಿ ಸರಕಾರದ ಟೀಕೆ ಮಾಡಿದ ಮಾಧ್ಯಮಗಳ ಮೇಲೆ ಗದಾಪ್ರಹಾರದ ಪ್ರಯತ್ನ ನಡೆಯಿತು.

ನಮ್ಮ ಸಂವಿಧಾನ ವ್ಯವಸ್ಥೆ ಈ ಬಗ್ಗೆ ಸ್ಪಷ್ಟವಿದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಂತೆ ಮಾಧ್ಯಮಗಳನ್ನು ಸ್ವತಂತ್ರ ಅಂಗವೆಂದೂ, ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಸ್ತಂಭವೆಂದೂ ಪರಿಗಣಿಸಿದೆ. ಉಳಿದ ಮೂರೂ ಅಂಗಗಳನ್ನು ಟೀಕಿಸುವುದು, ವಿಮರ್ಶೆ ಮಾಡುವ ಹಕ್ಕು ಅದ–ಕ್ಕೆ ಇದೆ ಮಾತ್ರವಲ್ಲ. ಅದು ಅದರ ಕರ್ತವ್ಯ ಕೂಡಾ. ಅದರ ಬದ್ಧತೆ ಜನತೆ, ಕಾನೂನು ಮತ್ತು ಸಂವಿಧಾನಕ್ಕೆ ಮಾತ್ರ. ಮಾಧ್ಯಮಗಳು ಅದಕ್ಕೆ ಸಂಬಂಧಿಸಿದ ಕಾನೂನುಗಳಿಂದ ನಿಬಂಧಿಸಲ್ಪಡುತ್ತವೆ. ಮಾಧ್ಯಮಗಳು ತಪ್ಪು ಮಾಡಿದಾಗ ಸ್ವೇಚ್ಛಾಚಾರದಲ್ಲಿ ತೊಡಗಿದಾಗ ಅವನ್ನು ನಿಯಂತ್ರಿಸಲು ಪ್ರೆಸ್ ಕೌನ್ಸಿಲ್ ಇತ್ಯಾದಿಗಳಿಗೆ ದೂರು ಕೊಡಬಹುದು. ಶಾಸಕರ ವಿರುದ್ಧ ಹಕ್ಕು ಚ್ಯುತಿಯಾದಾಗ ಶಾಸನ ಸಭೆಗಳೂ ಕ್ರಮ ಕೈಗೊಳ್ಳಬಹುದು. ವ್ಯಕ್ತಿಗಳ ವಿರುದ್ಧ ದ್ವೇಷ–ಪ್ರಚಾರ ಕೈಗೊಂಡಾಗ ಮಾನನಷ್ಟ ಮೊಕದ್ದಮೆ ಹೂಡಬಹುದು. ಇವೆಲ್ಲವನ್ನೂ ಬಿಟ್ಟು ಬೇರೆ ಕ್ರಮಗಳು ಬೇಕೆ? ಸಾಧ್ಯವೇ? ಅವು ಸಂವಿಧಾನಬದ್ಧವಾಗಿರುತ್ತವೆಯೇ? ಎಂಬುದು ಪ್ರಶ್ನೆ. ಕರ್ನಾಟಕ ವಿಧಾನಮಂಡಲದ ಸದನ ಸಮಿತಿ ವರದಿ ನೀಡಿ ಯಾವ ರೀತಿಯ ಬಿಗಿ ಕಾನೂನುಗಳ ಶಿಫಾರಸು ಮಾಡುತ್ತದೆ ಎಂದು ಕಾದು ನೋಡಬೇಕು. ಆದರೆ ಈ ನಡೆ ಸಾಂವಿಧಾನಿಕ ಮತ್ತು ಸಾರ್ವಜನಿಕ ಹಿತಾಸಕ್ತಿ ಎತ್ತಿ ಹಿಡಿಯುವ ನಡೆಯಾಗಿರುವುದಿಲ್ಲ. ಅದು ಖಂಡಿತ ಸಾರ್ವಜನಿಕ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಮಾಧ್ಯಮಗಳ ಜವಾಬ್ದಾರಿಗೆ ಮಾರಕವಾಗಿರುತ್ತದೆ. ಆದ್ದರಿಂದ ಕರ್ನಾಟಕ ವಿಧಾನಮಂಡಲದ ಈ ನಡೆಯನ್ನು ಬಲವಾಗಿ ವಿರೋಧಿಸಬೇಕಾಗಿದೆ.

ದೇಶದ ಮತ್ತು ನಿರ್ದಿಷ್ಟವಾಗಿ ಕರ್ನಾಟಕದ ಮಾಧ್ಯಮ ಕ್ಷೇತ್ರದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂಬುದು ನಿಜ. ಕರ್ನಾಟಕದ ಟಿವಿ ವಾಹಿನಿಗಳು ಪ್ರಮುಖ ರಾಜಕೀಯ ಪಕ್ಷಗಳ ಒಡೆತನದಲ್ಲಿ ಇದ್ದು, ಸ್ವತಂತ್ರ ಪಕ್ಷಪಾತರಹಿತ ವಾಸ್ತವಿಕ ವರದಿ–ವಿಶ್ಲೇಷಣೆಯ ಸಾಮರ್ಥ್ಯವನ್ನೇ ಕಳೆದುಕೊಂಡಿವೆ. ಮಾಧ್ಯಮಗಳು ಪ್ರಧಾನವಾಗಿ ಬಿಜೆಪಿ–ಬೆಂಬಲಿಗವಾಗಿದ್ದು ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಪಕ್ಷಪಾತದ ದಾಳಿಯನ್ನು ಮಾಡುತ್ತಿರುತ್ತವೆ. ಡಿ.ಕೆ.ರವಿ ಪ್ರಕರಣದಲ್ಲಿ ಅವುಗಳ ಪಿತೂರಿ, 'ಇಲಿಯನ್ನು ಹುಲಿ ಮಾಡಿದ್ದು' ಮಾಧ್ಯಮ ಆಚಾರಸಂಹಿತೆಗೆ ಅಪಚಾರ ಮಾಡುವಂಥದ್ದು. ಅದೇ ರೀತಿಯಲ್ಲಿ ಹಿಂದೂ ಕೋಮುವಾದಿ ಧೋರಣೆ ಸಹ ಅವುಗಳ ಪ್ರಧಾನ ಧೋರಣೆಯಾಗಿ ಬಿಟ್ಟಿದೆ. ವಿಚಾರಸಂಕಿರಣವೊಂದರಲ್ಲಿ ಡಾ. ಕಲಬುರ್ಗಿ ಅವರ ಹೇಳಿಕೆಗಳನ್ನು ತಿರುಚಿ ಅವರ ವಿರುದ್ಧ ತೀವ್ರ ಅಪಪ್ರಚಾರ ನಡೆಸಿ ಅವರ 'ವೈಚಾರಿಕ ಕೊಲೆ' ಮಾಡಿ ದೈಹಿಕ ಕೊಲೆಗೆ ಜನಮಾನಸ ಸಿದ್ಧ ಮಾಡಿದ್ದಂತೂ ಮರೆಯುವಂತೆಯೇ ಇಲ್ಲ. ಮೇಟಿ ಪ್ರಕರಣದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅಗತ್ಯಗಳನ್ನು ಮೀರಿ ಚಾರಿತ್ರ್ಯ ಹರಣ ಖಾಸಗಿ ಬದುಕಿನ ಅತಿಕ್ರಮಣ, ಅದೇ ಸಮಯದಲ್ಲಿ ರಾಘವೇಶ್ವರ ಸ್ವಾಮಿಯ ಅತ್ಯಾಚಾರ ಕೇಸುಗಳಿಗೆ ಅಗತ್ಯ ಪ್ರಚಾರವನ್ನು ಕೊಡದಿರುವ ಅನೈತಿಕ ನಿಲುವು ಪ್ರದರ್ಶಿಸಿವೆ. ಡಿ.ಕೆ.ರವಿ ಪ್ರಕರಣದಲ್ಲಿ ಸೇರಿದಂತೆ ಹಲವು ಪ್ರಕರಣಗಳಲ್ಲಿ ತಾವೇ ವಕೀಲರು, ಪೋಲಿಸರು, ನ್ಯಾಯಾಧೀಶರೂ ಎಲ್ಲವೂ ಆಗಿ ತೀರ್ಪು ಕೊಡುವ ಚಾಳಿ ಪ್ರದರ್ಶಿಸಿವೆ. ಟಿವಿ ಚರ್ಚೆಯ ನೆಪದಲ್ಲಿ ಏಕಪಕ್ಷೀಯವಾಗಿ ತಮ್ಮ ಅಭಿಪ್ರಾಯವನ್ನು ಸಾರ್ವಜನಿಕರ ಮೇಲೆ ಹೇರುತ್ತಿವೆ. ಮಹಿಳೆಯರ ಮೇಲೆ ದೌರ್ಜನ್ಯಗಳು, ಇತರ ಅಪರಾಧಗಳನ್ನು ವರದಿ ಮಾಡುವ ತೋರಿಸುವ ವಿಧಾನದಲ್ಲಿ ಸಾರ್ವಜನಿಕ ಹಿತಾಸಕ್ತಿ ಹೋಗಲಿ ಮತ್ತು ಕನಿಷ್ಠ ಮಾನವೀಯತೆಯ ಲವಲೇಶವೂ ಇಲ್ಲ. ಜ್ಯೋತಿಷದಿಂದ ಹಿಡಿದು ಎಲ್ಲಾ ರೀತಿಯ ಮೌಢ್ಯಗಳನ್ನು ಜನತೆಯ ಮೇಲೆ ಹೇರುವ ಮತ್ತು ಅವನ್ನು ವ್ಯಾಪಕವಾಗಿ ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಿವೆ. ಇವೆಲ್ಲದರ ಮತ್ತು ಟಿ.ಆರ್.ಪಿ.ಯ ಭರಾಟೆಯಲ್ಲಿ ನಿಜವಾದ ಸಾರ್ವಜನಿಕ ಹಿತಾಸಕ್ತಿಯ (ಬರ, ರೈತರ ಆತ್ಮಹತ್ಯೆಗಳು ಇತ್ಯಾದಿ) ವಿಷಯಗಳ ಹತ್ತಿರವೂ ಇವು ಹೋಗುವುದಿಲ್ಲ.

ಮಾಧ್ಯಮಗಳ ಈ ಅಗಾಧ ನ್ಯೂನತೆಗಳನ್ನು ಸರಿಪಡಿಸುವುದು ಹೇಗೆ? ಮಾಧ್ಯಮಗಳು ಕೆಲವು ನಿರ್ದಿಷ್ಟ ತಪ್ಪು ಮಾಡಿದಾಗ ಈಗ ಇರುವ ಪತ್ರಿಕಾ ಕೌನ್ಸಿಲ್, ಕೋರ್ಟುಗಳ ಮೂಲಕ ಅವುಗಳ ಮೇಲೆ ಕ್ರಮಕೈಗೊಳ್ಳುವ ಸಾಧ್ಯತೆ, ಸಾಮರ್ಥ್ಯ ವ್ಯಕ್ತಿಗಳಿಗಂತೂ ಇಲ್ಲ. ಕ್ರಮಕೈಗೊಂಡರೂ ಸಕಾಲದಲ್ಲಿ ನ್ಯಾಯ ಸಿಗುವ ಸಾಧ್ಯತೆಯಂತೂ ಇಲ್ಲ. ಇದಕ್ಕೆ ಮಾಧ್ಯಮಗಳ ಸ್ವಯಂ–ಪ್ರೇರಿತ ಆಚಾರ ಸಂಹಿತೆಯ ಪಾಲನೆ ಒಂದೇ ದಾರಿ ಎನ್ನಲಾಗುತ್ತದೆ. ಇಂತಹ ಆಚಾರ ಸಂಹಿತೆಯನ್ನು ಪಾಲಿಸುವುದು ಒತ್ತಟ್ಟಿಗಿರಲಿ, ಅವನ್ನು ಖಾಸಗಿ ಟಿವಿ ವಾಹಿನಿಗಳಂತೂ ಅಂಗೀಕರಿಸಿಯೂ ಇಲ್ಲ. ಹಾಗಾದರೆ ಈ ಗಂಭೀರ ಪರಿಸ್ಥಿತಿಯ ಸುಧಾರಣೆ ಹೇಗೆ ಸಾಧ್ಯ?

ಮಾಧ್ಯಮಗಳ ಈ ಅಗಾಧ ನ್ಯೂನತೆಗಳ ಮೂಲಕಾರಣ ಅವುಗಳ ಒಡೆತನದ ಸ್ವರೂಪ, ಮತ್ತು ಒಡೆಯರ (ಹೆಚ್ಚಾಗಿ ಜನ–ವಿರೋಧಿಯಾದ) ಹಿತಾಸಕ್ತಿಗಳು. ಹೆಚ್ಚಿನ ಮಾಧ್ಯಮಗಳ ಒಡೆತನ ಕಾರ್ಪೊರೆಟ್ ಕಂಪನಿಗಳು–ರಾಜಕಾರಣಿಗಳ ದುಷ್ಟಕೂಟದ ಬಳಿಯಲ್ಲಿದೆ. ಮಾಧ್ಯಮಗಳ ಒಡೆತನ ಹೆಚ್ಚೆಚ್ಚು ಏಕಸ್ವಾಮ್ಯಕ್ಕೆ ಒಳಗಾಗುತ್ತಿದೆ. ಅಂಬಾನಿ ಗುಂಪು ವೇಗವಾಗಿ ಮಾಧ್ಯಮ ಸಾಮ್ರಾಜ್ಯದ ಬಹುಭಾಗವನ್ನು ಕಬಳಿಸಿದೆ. ಇಂತಹ ಇತರ ಏಕಸ್ವಾಮ್ಯ ಗುಂಪುಗಳು (ಝೀ, ಸ್ಟಾರ್, ಸನ್ ಇತ್ಯಾದಿ) ಮಾಧ್ಯಮಗಳನ್ನು ಆವರಿಸಿವೆ. ಮಾಧ್ಯಮಗಳ ಒಡೆತನದ ಏಕಸ್ವಾಮ್ಯ ಮುರಿಯುವ ಸುಧಾರಣೆಗಳು ಅಗತ್ಯವಾಗಿ ಬೇಕಾಗಿದೆ. ವೈವಿಧ್ಯಮಯ ಒಡೆತನ ಮಾಧ್ಯಮಗಳಲ್ಲಿ ವೈವಿಧ್ಯ ನಿಲುವುಗಳಿಗೆ ಅಗತ್ಯ. ಮಾಧ್ಯಮಗಳ ಸ್ವಾತಂತ್ರ್ಯಕ್ಕೆ ನಿಜವಾದ ಬೆದರಿಕೆ ಇರುವುದು ಅವುಗಳ ಒಡೆಯರಿಂದಲೇ. ಮಾಧ್ಯಮಗಳಲ್ಲಿ ಜಾಹೀರಾತಿನ ವ್ಯಾಪ್ತಿಯ ಮೇಲೂ ಮಿತಿಗಳನ್ನು ಹೇರಬೇಕಾಗಿದೆ. ಕನಿಷ್ಠ ಸಾರ್ವಜನಿಕ ಹಿತಾಸಕ್ತಿ ವಿಷಯಗಳ ಕವರೇಜ್ ಬಗ್ಗೆ ನಿರ್ಬಂಧಗಳನ್ನು ಹೇರಬೇಕಾಗಿದೆ. ಪ್ರೆಸ್ ಕೌನ್ಸಿಲ್ ಮಾದರಿಯಲ್ಲಿ ಬ್ರಾಡ್ ಕಾಸ್ಟಿಂಗ್ ಕೌನ್ಸಿಲ್ ಗಳನ್ನು ರಚಿಸಬೇಕಾಗಿದೆ. ಅವುಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಿ, ಸ್ವತಂತ್ರ ವ್ಯಕ್ತಿಗಳನ್ನು ನೇಮಿಸಿ ಅವುಗಳು ಸಾರ್ವಜನಿಕರಿಗೆ ಬದ್ಧವಾಗಿರುವಂತೆ ನೋಡಿಕೊಳ್ಳಬೇಕಾಗಿದೆ.

ಮಾಧ್ಯಮಗಳ ಅಗಾಧ ನ್ಯೂನತೆಗಳನ್ನು ಹೋಗಲಾಡಿಸಲು ಇಂತಹ ಮಾಧ್ಯಮ ಒಡೆತನ ಮುಂತಾದವುಗಳ ಸುಧಾರಣೆಗಳನ್ನು ತರುವ ಕಾನೂನುಗಳು ಬೇಕಾಗಿವೆ. ಬೇಕಾಗಿರುವುದು ಶಾಸಕರ, ಸರಕಾರದ ಮೂಗುದಾರ ಲಗಾಮುಗಳಲ್ಲ. ■

ಈ ವಾರ ಚರಿತ್ರೆಯಲ್ಲಿ

5 ಏಪ್ರಿಲ್ 1957

ದೇಶದ ಮೊದಲ ಕಮ್ಯುನಿಸ್ಟ್ ಸರಕಾರ ರಚನೆ



ಈ ದಿನ 60 ವರ್ಷಗಳ ಹಿಂದೆ 'ಐಕ್ಯ ಕೇರಳ'ದಲ್ಲಿ ನಡೆದ ಮೊದಲ ವಿಧಾನಸಭೆ ಚುನಾವಣೆಗಳಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷ ನಿಚ್ಚಳ ಬಹುಮತ ಪಡೆದು ಸರಕಾರ ರಚಿಸಿತು. ಆಗ ಜಗತ್ತಿನಲ್ಲೇ ಮೊದಲ ಚುನಾಯಿತ ಕಮ್ಯುನಿಸ್ಟ್ ಸರಕಾರವೆಂಬ ಹೆಗ್ಗಳಿಕೆಗೆ ಪಾತ್ರವಾದ ಇ.ಎಂ.ಎಸ್ ನಂಬೂದ್ರಿಪಾದ್ ಸರಕಾರ 'ಉಳುವವನೇ ಹೊಲದೊಡೆಯ" ಘೋಷಣೆ ಜಾರಿ ಮಾಡಿ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತೀವ್ರಗಾಮಿ ಸುಧಾರಣೆಗಳನ್ನು ತಂದಿತು. ಎರಡು ವರ್ಷಗಳ ನಂತರ ಅದನ್ನು ನೆಹರೂ ಕೇಂದ್ರ ಸರಕಾರ ಅಪ್ರಜಾಸತ್ತಾತ್ಮಕವಾಗಿ ವಜಾ ಮಾಡಿತು.

ನಾಳಿನ ಕಾರ್ಯಕ್ರಮಗಳು

- ❒ **ರಾಜ್ಯ ಮಟ್ಟದ ಉದ್ಯೋಗ ಖಾತ್ರಿ ಸಮಾವೇಶ: ಏಪ್ರಿಲ್ 3,** ಬೆಂಗಳೂರು
  ಕರ್ನಾಟಕ ಪ್ರಾಂತ ರೈತ ಸಂಘ, ಇತರ ಸಂಘಟನೆಗಳ ಜತೆ ಜಂಟಿಯಾಗಿ
- ❒ "ಸಮಾನ ಕೆಲಸಕ್ಕೆ ಸಮಾನ ವೇತನ" ಕುರಿತು ವಿಚಾರ ಸಂಕಿರಣ 9 ಏಪ್ರಿಲ್ 2017, ಸಿಐಟಿಯು ಬೆಂಗಳೂರು
- ❒ ಜನಶಕ್ತಿ ಪ್ರಸಾರಾಂದೋಲ ಏಪ್ರಿಲ್ 10 –23
- ❒ **ದಲಿತ ಹಕ್ಕುಗಳ ಸಮಿತಿಯ ರಾಜ್ಯಮಟ್ಟದ ರ್‍ಯಾಲಿ ಮತ್ತು ಶಾಲೆ, ಎಪ್ರಿಲ್ 14–16,**
  ಹೊಸಪೇಟೆ (ಬಳ್ಳಾರಿ)
- ❒ **ಸಾಮಾಜಿಕ ನ್ಯಾಯ ಮತ್ತು ಸಮಾಜವಾದಿ ಕ್ರಾಂತಿ, ಏಪ್ರಿಲ್ 23**
  ದಲಿತ ಹಕ್ಕುಗಳ ಸಮಿತಿ ಇತರ ಸಂಘಟನೆಗಳ ಜತೆ
- ❒ **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25–27,** ಹುಬ್ಬಳ್ಳಿ

ಬೆಲೆ ಏರಿಕೆ ನಿಯಂತ್ರಣಕ್ಕೆ ಆಗ್ರಹಿಸಿ ದ.ಕ.ಜಿಲ್ಲಾದ್ಯಂತ ಪ್ರತಿಭಟನೆ

ವರದಿ: ವಾ.ಉ.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ತೈಲದ ಬೆಲೆ ಪದೇ ಪದೇ ಕಡಿಮೆಯಾಗುತ್ತಿದ್ದರೂ, ಮೋದಿ ಪ್ರಧಾನಿತ್ವದ ಎನ್‌ಡಿಎ ಕೇಂದ್ರ ಸರಕಾರದ ಆಳ್ವಿಕೆಯಲ್ಲಿ ಪೆಟ್ರೋಲ್, ಡೀಸಿಲ್ ಮತ್ತು ಅಡುಗೆ ಅನಿಲದ ದರಗಳು ಏರುತ್ತಲೇ ಹೋಗುತ್ತಿವೆ. ಇದ–ರಿಂದ ಸರಕು ಸಾಗಣೆ ದರಗಳೂ, ಸರಕು ಹಾಗೂ ಆಹಾರ ವಸ್ತುಗಳ ಮಾರಾಟ ದರಗಳೂ ಹೆಚ್ಚಿವೆ. ಬಡವರಿಗೆ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದೇ ಸಾಧ್ಯವಾಗದಾಗಿದೆ. ಈ ಹಿನ್ನೆಲೆಯಲ್ಲಿ ದ.ಕ.ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಮಾರ್ಚ್ 27 ರಂದು ಪ್ರತಿಭಟನಾ ಪ್ರದರ್ಶನವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿಯ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ರಾಜ್ಯ ಸರಕಾರದ ಪಡಿತರ ನೀತಿಯಿಂದಾಗಿ ಆಹಾರ ಧಾನ್ಯ ಖರೀದಿಸುವ ಬಡವರು ಪಡಿತರ ಕೂಪನ್‌ಗಾಗಿ ಒಂದೆಡೆ, ಆಹಾರ ಪಡೆಯಲು ಇನ್ನೊಂದೆಡೆಗೆ ಅಲೆಯುವುವಂತಾಗಿದೆ. ಕೂಪನ್ನಿನೊಂದಿಗೆ ಪಡಿತರ ಆಹಾರ ವಿತರಣಾ ಕೇಂದ್ರಕ್ಕೆ ಹೋದಾಗ ದಾಸ್ತಾನು ಇರುವುದಿಲ್ಲ. ಪಡಿತರ ತೀರಾ ಅವ್ಯವಸ್ಥಿತವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳು ಬರಪೀಡಿತವೆಂದು ಸರಕಾರವೇ ಘೋಷಿಸಿದೆ. ಕುಡಿಯುವ ನೀರಿನ ಕೊರತೆ ತುಂಬಾ ಮೊದಲೇ ಈ ವರ್ಷ ಉಂಟಾಗಿದೆ. ಇದಕ್ಕೆ ಜಿಲ್ಲಾಡಳಿತವಾಗಲೀ ನಗರಾಡಳಿತವಾಗಲೀ ಸೂಕ್ತ ಪರ್ಯಾಯಗಳನ್ನು ಸಿದ್ಧಪಡಿಸಿರುವುದಿಲ್ಲ.

ಕಸ್ತೂರಿರಂಗನ್ ವರದಿಯ ಜಾರಿಯನ್ನು ಮತ್ತೆ ಕೇಂದ್ರ ಸರಕಾರ ಘೋಷಿಸಿದ್ದು, ಪರಿಷ್ಕೃತ ವರದಿಯಲ್ಲಿಯೂ ಪರಿಹಾರ ಕೋರಿರುವ ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲೂಕುಗಳ ಗ್ರಾಮಗಳಿಗೆ ರಿಯಾಯತಿ ದೊರೆತಿರುವುದಿಲ್ಲ. ಈ ಗ್ರಾಮಗಳಿಗೆ ಸಂಬಂಧಿಸಿದಂತೆ ಕಸ್ತೂರಿರಂಗನ್ ವರದಿಯನ್ನೇ ತಡೆಹಿಡಿಯಬೇಕಾಗಿದೆ.



ಈ ಮೇಲಿನ ವಿಚಾರಗಳನ್ನು ಮುಂದಿಟ್ಟು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಒಂದು ಪ್ರತಿಭಟನಾ ಅಭಿಯಾನವನ್ನು ಮಾರ್ಚ್ 27 ರಂದು ಹಮ್ಮಿಕೊಂಡಿತ್ತು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿಯು ಈ ಅಭಿಯಾನಕ್ಕೆ ಮುಂಚಿತವಾಗಿ ಮಾರ್ಚ್ 24 ರಂದು ಮಂಗಳೂರು ನಗರದಾದ್ಯಂತ ಒಂದು ವಾಹನ ಪ್ರಚಾರಾಂದೋಲನ ಜಾಥಾವನ್ನು ಏರ್ಪಡಿಸಿತ್ತು. ನಗರ ಸಮಿತಿ ಸದಸ್ಯರಾದ ವಾಸುದೇವ ಉಚ್ಚಿಲ್, ಯೋಗೀಶ್ ಜಪ್ಪಿನಮೊಗರು , ಸಂತೋಷ್ ಶಕ್ತಿನಗರ , ಭಾರತಿ ಬೋಳಾರ್ ಇವರ ಜಾಥಾ ತಂಡಕ್ಕೆ ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ನಾಯಕರಾಗಿದ್ದರು. ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಜಾಥಾವನ್ನು ಸೆಂಟ್ರಲ್ ಮಾರ್ಕೆಟ್ ಬಳಿ ಉದ್ಘಾಟಿಸಿದರು. ಜಾಥಾವು ಮಂಗಳೂರು ಬಂದರ, ಕುದ್ರೋಳಿ, ಉರ್ವಮಾರ್ಕೆಟ್, ಉರ್ವಸ್ಟೋರ್, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣ, ಕಂಕನಾಡಿ, ಅತ್ತಾವರ, ಜೆಪ್ಪುಮಾರ್ಕೆಟ್ ಮೂಲಕ ಸಾಗಿ ಕೇಂದ್ರ ಖಾಸಗಿ ಬಸ್ ನಿಲ್ದಾಣದಲ್ಲಿ ಸಮಾಪನಗೊಂಡಿತು. ಪಕ್ಷದ ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ ಸಮಾರೋಪ ಭಾಷಣ ಮಾಡಿದರು.

ಮಾರ್ಚ್ 27ರ ಜಿಲ್ಲಾ ಪ್ರತಿಭಟನಾ ಅಭಿಯಾನದಂದು ಮಂಗಳೂರು ಮಿನಿವಿಧಾನಸೌಧದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಕ್ಷದ ಕಾರ್ಯಕರ್ತರು ಕಾಲ್ನಡಿಗೆ ಜಾಥ ನಡೆಸಿದರು. ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಪಕ್ಷದ ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ರಾಜ್ಯಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಬಿ.ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಪಕ್ಷದ ನಗರ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಮಂಗಳೂರು ನಗರ ಉತ್ತರ ಸಮಿತಿ ವತಿಯಿಂದ ಅದೇ ದಿನ ಸಂಜೆ ಕಾವೂರು ಜಂಕ್ಷನ್ನಿನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ನಗರ ಉತ್ತರ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ನಗರಪಾಲಿಕೆ ಕಾರ್ಪರೇಟರ್ ದಯಾನಂದ ಶೆಟ್ಟಿ ಮಾತನಾಡಿದರು. 500ಕ್ಕೂ ಮೀರಿ ಸಾರ್ವಜನಿಕರು ಈ ಸಭೆಯ ಶ್ರೋತೃಗಳಾಗಿದ್ದರು.

ಮೂಡಬಿದ್ರೆ ತಹಶೀಲ್ದಾರ್ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಮೂಡಬಿದ್ರೆ ವಲಯ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ವಲಯ ಸಮಿತಿ ಸದಸ್ಯರಾದ ರಮಣಿ, ರಾಧಾ, ಗಿರಿಜ, ಸುಂದರ ಶೆಟ್ಟಿ ಭಾಗವಹಿಸಿದ್ದರು.

ಗುರುಪುರ ಕೈಕಂಭದಲ್ಲಿ ಸಿಪಿಐ(ಎಂ) ಗುರುಪುರ ವಲಯ ಸಮಿತಿ ವತಿಯಿಂದ ನಡೆದ ಪ್ರತಿಭಟನಾ ಸಭೆಯಲ್ಲಿ 200ಕ್ಕೂ ಮೀರಿ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯ ಯು.ಬಿ.ಲೋಕಯ್ಯ, ಗುರುಪುರ ವಲಯ ಕಾರ್ಯದರ್ಶಿ ಸದಾಶಿವದಾಸ್, ವಲಯ ಸಮಿತಿ ಸದಸ್ಯ ಗಂಗಯ್ಯ ಅಮೀನ್ ಮಾತನಾಡಿದರು.

ಬಿಸಿರೋಡ್ ವೃತ್ತದಲ್ಲಿ ಸಿಪಿಐ(ಎಂ) ಬಂಟ್ವಾಳ ತಾಲೂಕು ಸಮಿತಿ ವತಿಯಿಂದ ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸೆಕ್ರಟಾರಿಯಟ್ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ತಾಲೂಕು ಸಮಿತಿ ಕಾರ್ಯದರ್ಶಿ ರಾಮಣ್ಣ ವಿಟ್ಲ ಮಾತನಾಡಿದರು. ತಾಲೂಕು ಸಮಿತಿ ಸದಸ್ಯ ಬಿ.ನಾರಾಯಣ ವಂದಿಸಿದರು.

ಬೆಳ್ತಂಗಡಿ ತಹಶೀಲ್ದಾರ್ ಕಚೇರಿ ಎದುರು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ವತಿಯಿಂದ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ತಾಲೂಕು ಸಮಿತಿ ಕಾರ್ಯದರ್ಶಿ ಎಸ್. ಎಂ.ಶಿವಕುಮಾರ್ ಮಾತನಾಡಿದರು.



ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿಯಿಂದ ತೊಕ್ಕೋಟಿನಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ:

ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ವತಿಯಿಂದ ಮಾರ್ಚ್ 23 ರಂದು ಭಗತ್‌ಸಿಂಗ್ ಹುತಾತ್ಮ ದಿನವನ್ನು ತೊಕ್ಕೋಟಿನಲ್ಲಿ ಆಚರಿಸಲಾಯಿತು. ಅದರ ಭಾಗವಾಗಿ ಕಲ್ಲಾಪು ಎಂಬಲ್ಲಿಂದ ತೊಕ್ಕೋಟು ಬಸ್ ನಿಲ್ದಾಣದ ವರೆಗೆ ನಡೆದ ಯೂತ್ ಮಾರ್ಚ್ ಘೋಷಣೆಗಳು ಆ ಪ್ರದೇಶದಲ್ಲಿ ಮತ್ತೆ ಮತ್ತೆ ಅನುರಣಿಸಿತು.

ತೊಕ್ಕೋಟಿನಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಮಾಜಿ ರಾಜ್ಯಾದ–ಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಜಿಲ್ಲಾಧ್ಯಕ್ಷ ದಯಾನಂದ ಶೆಟ್ಟಿ ಮಾತನಾಡಿದರು. ಡಿವೈಎಫ್ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಸ್ವಾಗತಿಸಿದರು. ಜೀವನ್‌ರಾಜ್ ಕುತ್ತಾರು ವಂದಿಸಿದರು. ಜಿಲ್ಲಾ ಸಮಿತಿ ಸದಸ್ಯರಾದ ಬಿ.ಕೆ.ಇಮ್ತಿಯಾಜ್, ಆಶಾ ಬೋಳೂರ್, ನವೀನ್ ಕೊಂಚಾಡಿ ಭಾಗವಹಿಸಿದ್ದರು.

ಬೆಂಗಳೂರು ಹಾಸನ ನೂತನ ರೈಲು ಪ್ರಾರಂಭಕ್ಕೆ ಸಿಪಿಐ(ಎಂ) ಸ್ವಾಗತ

ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಾಸನ ಬೆಂಗಳೂರು ನೇರ ರೈಲು ಮಾರ್ಗ ಪೂರ್ಣಗೊಂಡು ಹೊಸ ರೈಲು ಸಂಚಾರಕ್ಕೆ ಚಾಲನೆ ಸಿಕ್ಕಿರುವುದು ಹಾಸನ ಜಿಲ್ಲೆಯ ಜನತೆಗೆ ಸಂತಸ ತಂದಿದೆ. ಈ ಮೂಲಕ ಈ ರೈಲು ಪ್ರಯಾಣ ಜಿಲ್ಲೆಯ ಜನತೆಯ ಬದುಕಿನ ಮೇಲೆ ಮತ್ತು ಜಿಲ್ಲೆಯ ಆರ್ಥಿಕ ಚಟುವಟಿಕೆ ಹಾಗು ಪ್ರವಾಸೋಧ್ಯಮದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ. ನೂತನ ರೈಲು ಮಾರ್ಗದ ಅನುಷ್ಠಾನಕ್ಕೆ ಸಹಕರಿಸಿದ ಕೇಂದ್ರ, ರಾಜ್ಯ ಸರ್ಕಾರಗಳನ್ನು ಅಭಿನಂದಿಸುತ್ತಲೇ ಈ ಯೋಜನೆಯ ಜಾರಿಗಾಗಿ ಹಲವು ವರ್ಷಗಳಿಂದ ನಿರಂತರವಾಗಿ ಹೋರಾಟಗಳನ್ನು ನಡೆಸಿದ ಜಿಲ್ಲೆಯ ಸಂಘ ಸಂಸ್ಥೆಗಳಿಗೂ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹಾಸನ ಜಿಲ್ಲಾ ಸಮಿತಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಹಾಸನ ರೈಲ್ವೇ ನಿಲ್ದಾಣದಲ್ಲಿ ಮೊದಲ ದಿನವೇ ಪ್ರಯಾಣಿಕರ ಸಂಖ್ಯೆ ಎತೇಚವಾಗಿದ್ದು ಟಿಕೇಟ್ ಪಡೆಯಲು ಜನರ ನೂಕು ನುಗ್ಗಲು ಆರಂಬವಾಗಿತ್ತು ಆದ್ದರಿಂದ ರೈಲ್ವೇ ಇಲಾಖೆಯ ಸಂಭಂದಪಟ್ಟ ಅಧಿಕಾರಿಗಳು ಕೂಡಲೇ ಈ ಅವ್ಯವಸ್ಥೆಯನ್ನು ಸರಿಪಡಿಸಿ ಜನರಿಗೆ ಅನುಕೂಲವಾಗುವಂತೆ ಟಿಕೇಟ್ ಕೌಂಟರ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಮತ್ತು ಪ್ರಸ್ತುತ ಯಶವಂತಪುರದಿಂದ ಹೊರಟು ಯಶವಂತಪುರಕ್ಕೆ ಕೊನೆಗೊಳ್ಳುವ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲನ್ನು ಬೆಂಗಳೂರು ಸಿಟಿ ರೈಲ್ವೇ ನಿಲ್ದಾಣದವರೆಗೂ ವಿಸ್ತರಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಹಾಸನದಲ್ಲಿ ಹೊಸ ಬಸ್ ನಿಲ್ದಾಣ ಆರಂಬವಾದಾಗಿನಿಂದ ಅಲ್ಲಿಗೆ ರೈಲ್ವೇ ಮೇಲ್ಸೇತುವೆಗಾಗಿ ಹೋರಾಟಗಳು ನಡೆಯುತ್ತಲೇ ಇವೆ. ಪ್ರಸ್ತುತ ಹೊಸ ರೈಲು ಮಾರ್ಗ ಆರಂಬವಾಗಿರುವುದರಿಂದ ಈ ರಸ್ತೆಯಲ್ಲಿ ಮತ್ತಷ್ಟು ವಾಹನ ದಟ್ಟಣೆಯಾಗಲಿದ್ದು ಇದನ್ನು ಸರಿಪಡಿಸಲು ಕೂಡಲೇ ರೈಲ್ವೇ ಮೇಲ್ಸೇತುವೆ ಕಾಮಗಾರಿಯನ್ನು ಆರಂಬಿಸಬೇಕೆಂದು ಸಿಪಿಐ(ಎಂ) ಹಾಸನ ಜಿಲ್ಲಾ ಸಮಿತಿ ಒತ್ತಾಯಿತ್ತದೆ.

ಜೂಜಾಟದ ಜಗಳ : ಕಠಿಣಕ್ರಮಕ್ಕೆ ಒತ್ತಾಯ : ಶಾಂತಿ ಕಾಪಾಡಲು ಸಿಪಿಐ(ಎಂ) ಮನವಿ

ಜೂಜಾಟದಲ್ಲಿ ಆರಂಭವಾದ ಜಗಳವು–ಗುಂಪು ಘರ್ಷಣೆಗೆ ತಿರುಗಿದ್ದು ಖಂಡನಾರ್ಹವಾದುದು, ಪೊಲೀಸ್ ಇಲಾಖೆ ಯುಗಾದಿ ಹಬ್ಬದ ಜೂಜಾಟಕ್ಕೆ ಕಡಿವಾಣ ಹಾಕಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ಗುಂಪು ಘರ್ಷಣೆಯಲ್ಲಿ ಕುರಿಪಾಳ್ಯದ ಕಾಲೋನಿಗೆ ಗುಂಪೊಂದು ನುಗ್ಗಿ ಮಕ್ಕಳು–ಮಹಿಳೆಯರನ್ನು ಬೆದರಿಸಿ ಕಲ್ಲುತೂರಾಟ ನಡೆಸಿ ದಾಂಧಲೆ ನಡೆಸಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಸಿಪಿಐ(ಎಂ) ನಗರ ಸಮಿತಿ ಈ ದಾಂದಲೆ ನಡೆಸಿರುವ ಎಲ್ಲರ ಮೇಲೂ ತೀವ್ರ ಕಾನೂನು ಕ್ರಮ ಕೈಗೊಳ್ಳುವಂಥೆ ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ಘಟನೆಯನ್ನು ಬಳಸಿಕೊಂಡು ಊರಿನ ನೆಮ್ಮದಿ ಹಾಳುಮಾಡಲು ಹೊರಟಿರುವ ಕೆಲವು ಶಕ್ತಿಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಸಿಪಿಐ(ಎಂ) ವಿನಂತಿಸುತ್ತದೆ ಯಾವುದೇ ವದಂತಿಗಳಿಗೆ ಕಿವಿಗೊಡದೆ ಶಾಂತಿ ಸೌಹರ್ದತೆ ಕಾಪಾಡಿಕೊಳ್ಳುವಂತೆ ಒತ್ತಾಯಿಸಿರುವ ಸಿಪಿಐ(ಎಂ) ಈ ಬಾಗದ ಎಲ್ಲಾ ಸಮುದಾಯದ ಮುಖಂಡರನ್ನು ಕ–ರೆದು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಶಾಂತಿ ಸಭೆಯೊಂದನ್ನು ನಡೆಸುವಂಥೆ ಕೋರಿದೆ.

ಈ ಘಟನೆ ನೆಪದಲ್ಲಿ ಪೊಲೀಸರು ಅಮಾಯಕರನ್ನು ಬಂದಿಸಿ ತೊಂ ದರೆ ನೀಡದಂತೆ ಸಹ ಸಿಪಿಐ(ಎಂ) ಒತ್ತಾಯಿಸುತ್ತದೆ.

ಉಡುಪಿ ಜಿಲ್ಲಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ನೂತನ ಸ್ವಂತ ಕಛೇರಿ ಉದ್ಘಾಟನೆ ಹಾಗೂ 15ನೇ ವಾರ್ಷಿಕ ಮಹಾಸಭೆ

ನೋಟು ರದ್ಧತಿಯಿಂದ ಕಾರ್ಮಿಕರು ಅತಂತ್ರ – ಮಹಾಂತೇಶ



ಕೇಂದ್ರ ಸರಕಾರ ನೋಟು ರದ್ದು ಮಾಡಿದ ಪರಿಣಾಮ ದೇಶಾದ್ಯಂತ 35 ಲಕ್ಷ ಕಟ್ಟಡ ಕಾರ್ಮಿಕರು ಕೆಲಸವಿಲ್ಲದೆ ಅತಂತ್ರರಾಗಿದ್ದಾರೆ. ದೇಶದ ಬ್ಯಾಂಕ್‌ಗಳಲ್ಲಿದ್ದ ಒಟ್ಟು ರೂ. 16.5 ಲಕ್ಷ ಕೋಟಿ ಹಣದಲ್ಲಿ 11.5 ಲಕ್ಷ ಕೋಟಿ ಹಣವನ್ನು ಶ್ರೀಮಂತರು ಸಾಲದ ರೂಪದಲ್ಲಿ ಪಡೆದುಕೊಂಡಿದ್ದಾರೆ. ಇವರು ಇದನ್ನು ಮರುಪಾವತಿಸದೆ ಬ್ಯಾಂಕ್‌ಗಳ ಹಣವನ್ನು ಲೂಟಿ ಮಾಡಿದ್ದಾರೆ. ಇದನ್ನು ಸರಿದೂಗಿಸಲು ಕೇಂದ್ರ ಸರಕಾರ ನೋಟು ರದ್ದುಗೊಳಿಸಿ ಬಡವರ ಹಣವನ್ನು ಸುಲಿಗೆ ಮಾಡಿದೆ. ಈ ರಾಜಕೀಯವನ್ನು ಕಾರ್ಮಿಕರು ಅರ್ಥಮಾಡಿಕೊಳ್ಳಬೇಕು ಎಂದು ಸಿಐಟಿಯು ರಾಜ್ಯ ಸಮಿತಿಯ ಕಾರ್ಯದರ್ಶಿ ಕೆ. ಮಹಾಂತೇಶ್ ಹೇಳಿದರು.

ಉಡುಪಿಯ ಸಾಯಿ ರೆಸಿಡೆನ್ಸಿ ಸಭಾಂಗಣದಲ್ಲಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ (CWFI) (ಸಿಐಟಿಯು ಸಂಯೋಜಿತ) ನೂತನ ಸ್ವಂತ ಕಛೇರಿಯ ಉದ್ಘಾಟನೆ ಸಮಾರಂಭ ಮತ್ತು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸೆಸ್ ಮೂಲಕ ಹಣ ಒಟ್ಟು ರೂ. 5400 ಕೋಟಿ ಸಂಗ್ರಹವಾಗಿದ್ದು, ಅದರಲ್ಲಿ ಕಳೆದ 10 ವರ್ಷಗಳಲ್ಲಿ ಕೇವಲ ರೂ. 93 ಕೋಟಿ ವ್ಯಯವಾಗಿದ್ದು, ಅದರಲ್ಲೂ ಕಾರ್ಮಿಕರ ಕಲ್ಯಾಣಕ್ಕಾಗಿ 12 ರೀತಿಯ ಸೌಲಭ್ಯಗಳನ್ನು ನೀಡಲು ರೂ. 33 ಕೋಟಿ ಮಾತ್ರ ಖರ್ಚು ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಹಣದಲ್ಲಿ ರೂ. 750 ಕೋಟಿ ಕೌಶಲ್ಯ ಅಭಿವೃದ್ಧಿ ಕಟ್ಟಡದ ಭವನಕ್ಕೆ ವಿನಿಯೋಗಿಸಲು ಕಲ್ಯಾಣ ಮಂಡಳಿ ತೀರ್ಮಾನಿಸಿದೆ. ಕಲ್ಯಾಣ ಭವನ, ವಿದೇಶ ಪ್ರವಾಸ ನಿಗದಿಯಾಗಿತ್ತು. ಆದರೆ ನಮ್ಮ ಸಂಘಟನೆಯ ತೀವ್ರವಾದ ಪ್ರತಿಭಟನೆಯಿಂದಾಗಿ ಈ ಯೋಜನೆ ಕೈಬಿಡಲಾಯಿತು. ರಾಜ್ಯ ಸರಕಾರದ ಕಾರ್ಮಿಕ ಇಲಾಖೆಯ ಅಂಕಿ ಅಂಶಗಳ ಪ್ರಕಾರ 2013 ರಿಂದ ಕಳೆದ 5 ವರ್ಷಗಳಲ್ಲಿ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು 185 ಅವಘಡಗಳು ಸಂಭವಿಸಿದ್ದು, ಅದರಲ್ಲಿ 195 ಮಂದಿ ಕಟ್ಟಡ ಕಾರ್ಮಿಕರು ವಿವಿಧ ಅವಘಡಗಳಿಂದ ಸಾವನ್ನಪ್ಪಿದ್ದಾರೆ. ದೇಶದಲ್ಲಿ ಒಟ್ಟು 3 ಕೋಟಿಗೂ ಹೆಚ್ಚಿನ ಕಟ್ಟಡ ಕಾರ್ಮಿಕರಿದ್ದು ಕೆಲಸದ ವೇಳೆ ಅವರಿಗೆ ಯಾವುದೇ ಸುರಕ್ಷಿತ ಕ್ರಮಗಳನ್ನು ತೆಗೆದುಕೊಳ್ಳದೇ ನಿರ್ಲಕ್ಷ ವಹಿಸುತ್ತಿರುವುದರಿಂದ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಮಿಕರು ಸಾವನ್ನಪ್ಪಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ಜೀವಕ್ಕೆ ಬೆಲೆ ಇಲ್ಲವಾಗಿದೆ ಎಂದು ಮಹಾಂತೇಶ್ ದೂರಿದರು.

ಪ್ರಸ್ತುತ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಯಾವುದೇ ಹಣದ ಕೊರತೆ ಇಲ್ಲ. ಇರುವ ಹಣವನ್ನು ಅನುಷ್ಠಾನಗೊಳಿಸಲು ಅಧಿಕಾರಿಗಳಲ್ಲಿ ಇಚ್ಚಾಶಕ್ತಿಯ ಕೊರತೆ ಇದೆ. ಕಟ್ಟಡ ಕಾರ್ಮಿಕರು ತಮ್ಮ ಸೌಲಭ್ಯಕ್ಕಾಗಿ ಹೋರಾಟ ನಡೆಸುವುದರ ಜೊತೆಗೆ ಸರಕಾರದ ನೀತಿಯ ವಿರುದ್ಧವೂ ಬೀದಿಗೆ ಇಳಿಯಬೇಕು ಎಂದು ಮಹಾಂತೇಶ್ ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಉಡುಪಿಯ ಕೆ.ಎಸ್. ಆರ್.ಟಿ.ಸಿ. ಬಸ್ಸ್ ನಿಲ್ದಾಣ ಬಳಿಯ ಕೃಷ್ಣಾ ಕೃಪಾ ಕಟ್ಟಡದಲ್ಲಿ ಆರಂಭಿಸಲಾದ ಜಿಲ್ಲಾ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ (CWFI) (ಸಿಐಟಿಯು ಸಂಯೋಜಿತ) ನೂತನ ಸ್ವಂತ ಕಛೇರಿಯನ್ನು ತಾಲೂಕು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಸ್ಥಾಪಕ ಅಧ್ಯಕ್ಷ ರಾಮ ಪೂಜಾರಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಘದ ಜಿಲ್ಲಾಧ್ಯಕ್ಷ ಶೇಖರ ಬಂಗೇರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಶಂಕರ, ಸಿಐಟಿಯು ಮುಖಂಡರಾದ ಎಚ್. ನರಸಿಂಹ, ಯು. ದಾಸಭಂಡಾರಿ, ಸುರೇಶ ಕಲ್ಲಾಗರ, ಜಗದೀಶ ಆಚಾರ್, ವೆಂಕಟೇಶ ಕೋಣಿ, ಉಮೇಶ್ ಕುಂದರ್, ಗಣೇಶ ನಾಯ್ಕ, ಕವಿರಾಜ ಎಸ್. ಉಪಸ್ಥಿತರಿದ್ದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಎಚ್. ವಿಠಲ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

ವಾರ್ಷಿಕ ಮಹಾಸಭೆಯಲ್ಲಿ ಮುಂದಿನ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಶೇಖರ ಬಂಗೇರ (ಅ ಧ್ಯಕ್ಷ) ದಯಾನಂದ ಕೋಟ್ಯಾನ್ (ಗೌರವ ಅಧ್ಯಕ್ಷ) ಬಾಲಕೃಷ್ಣ ಶೆಟ್ಟಿ (ಪ್ರಧಾನ ಕಾರ್ಯದರ್ಶಿ), ಗಣೇಶ ನಾಯ್ಕ (ಕೋಶಾಧಿಕಾರಿ), ವಾಮನ ಪೂಜಾರಿ, ಶೇಕರ ಕುಲಾಲ್, ರಾಘವ ದೇವಾಡಿಗ, ಎಚ್. ವಿಠಲ ಪೂಜಾರಿ, ಸುಭಾಶ್‌ನಾಯಕ್, ಉದಯ ಎಂ. ಪೂಜಾರಿ, ಕೆ. ರಮ ಕರ್ಕಡ, ಸುಂದರ ಕೋಟ್ಯಾನ್, ಇವರನ್ನೊಳಗೊಂಡ 25 ಮಂದಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ವರದಿ : ವೆಂಕಟೇಶ ಕೋಣಿ



ತ್ರಾಸಿ : ಮನೆ ನಿವೇಶನ ಹಕ್ಕು ಪತ್ರಕ್ಕಾಗಿ – ಶಾಸಕರ ಮನೆ ಚಲೋ ಹೋರಾಟಕ್ಕೆ ಕರೆ – ಶೀಲಾವತಿ

ಪುರುಷರಿಗಿಂತ ಹೆಚ್ಚಾಗಿ ಮಹಿಳೆ ಒಂದು ಸ್ವಂತ ಮನೆಗಾಗಿ ಹಾತೊರೆಯುತ್ತಾಳೆ. ಮಕ್ಕಳಿಗೆ ಜನ್ಮ ನೀಡಲು, ಅವರ ಲಾಲನೆ ಪಾಲನೆ ಪೋಷಣೆ ಮಾಡಲು ತಾಯಿಗೆ ಮನೆ ಬಹಳ ಮುಖ್ಯವಾಗುತ್ತದೆ. ಮನೆ ನಿವೇಶನದ ಪ್ರಶ್ನೆ, ದುಬಾರಿ ಮನೆ ಬಾಡಿಗೆಯ ಪ್ರಶ್ನೆ ಇಂದು ತುಂಬಾ ಮಹತ್ವವನ್ನು ಪಡೆಯುತ್ತಿದೆ. ಮನೆ, ನಿವೇಶನಕ್ಕಾಗಿ ಒತ್ತಾಯಿಸಿ ನಡೆಯುವ ಹೋರಾಟಗಳಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದನ್ನು ನೋಡಬಹುದು. ಈ ಹಿನ್ನಲೆಯಲ್ಲಿ ಏಪ್ರಿಲ್ 18 ರಂದು ಬೈಂದೂರು ಶಾಸಕರ ಮನೆ ಚಲೋ ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರೂ, ಸಿಐಟಿಯು ತಾಲೂಕು ಕೋಶಾಧಿಕಾರಿ, ಶೀಲಾವತಿಯವರು ನಿವೇಶನ ರಹಿತ ಅರ್ಜಿದಾರರಿಗೆ ಸಮಾವೇಶದಲ್ಲಿ ಕರೆಕೊಟ್ಟರು.

ತ್ರಾಸಿ ಅಣ್ಣಪ್ಪಯ್ಯ ಸಭಾಭವನದಲ್ಲಿ ಜರಗಿದ ತ್ರಾಸಿ, ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತ ಅರ್ಜಿದಾರರ ಬೃಹತ್ ಸಮಾವೇಶದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಕೃಷಿ ಕೂಲಿಕಾರರ ಸಂಘದ ಮುಖಂಡರಾದ ನಾಗರತ್ನ ನಾಡ, ಶೀಲಾವತಿ ಪದ್ಮಾವತಿ ಶೆಟ್ಟಿ, ರಾಜೀವ ಪಡುಕೋಣೆ ಹಾಗೂ ವಿಘ್ನೇಶ ಖಾರ್ವಿ ಕಂಚಗೊಡ ಉಪಸ್ಥಿತರಿದ್ದರು.



ತಲ್ಲೂರು : ಮನೆ ನಿವೇಶನ ರಹಿತರ ಭೂಮಿ ಹಕ್ಕಿನ ಹೋರಾಟಕ್ಕೆ ಕರೆ – ಕುಶಲ

ಹುಟ್ಟಿ ಬಂದಾಗ ಭೂಮಿ ತಂದಿಲ್ಲ–ಸಾಯುವಾಗ ಕೊಂಡೊಯ್ಯುತ್ತಿಲ್ಲ. ಭೂಮಿ ಎಲ್ಲರಿಗೂ ಸೇರಿದ್ದು, ದೇಶದ ಕಾನೂನು ಎಲ್ಲರಿಗೂ ಒಂದೇ ಅದಾನಿ ಅಂಬಾನಿಗೆ ಭೂಮಿ ಕೊಡುತ್ತಾರೆ. ಬಡವರಿಗೆ ಭೂಮಿ ಕೊಡುತ್ತಿಲ್ಲ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕುಶಲ ಹೇಳಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಅಧ್ಯಕ್ಷ ಯು. ದಾಸಭಂಡಾರಿ, ಸಮಾವೇಶದಲ್ಲಿ ಮಾತನಾಡುತ್ತಾ ಕಾಂಗ್ರೇಸ್, ಬಿಜೆಪಿ ಎರಡೂ ಪಕ್ಷ ಒಂದೇ. ಒಂದೇ ನಾಣ್ಯದ ಎರಡು ಮುಖವಾಗಿದ್ದು, ಅಧಿಕಾರಕ್ಕಾಗಿ ಹೊಡೆದಾಟ ಮಾಡುವುದನ್ನು ಬಿಟ್ಟರೆ ಬಡನಿವೇಶನ ರಹಿತರ ಮೂಲಭೂತ ಹಕ್ಕು– ಮನೆ, ನಿವೇಶನ, ಕುಡಿಯುವ ನೀರಿಗೆ ಶಾಶ್ವತ ಯೋಜನೆ ವಿದ್ಯುತ್ ಆರೋಗ್ಯ ಶಿಕ್ಷಣದ ಬಗ್ಗೆ ಕಾಳಜಿ ಹೊಂದಿಲ್ಲ ಎಂದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ನಾಗರತ್ನ ನಾಡ, ಶೀಲಾವತಿ, ಪದ್ಮಾವತಿ ಶೆಟ್ಟಿ, ಲಕ್ಷ್ಮಣ ನೆರಳಕಟ್ಟೆ, ಮತ್ತು ಜಗದೀಶ ಆಚಾರ್ ಹೆಮ್ಮಾಡಿ ಉಪಸ್ಥಿತರಿದ್ದರು.

ವರದಿ : ವೆಂಕಟೇಶ ಕೋಣಿ

ಗದ್ದರ್ ರವರ ದೇವಾಲಯ ಭೇಟಿ ಇತ್ಯಾದಿ ಮತ್ತು ಅದನ್ನು ಸಮರ್ಥಿಸಿಕೊಳ್ಳಲು ಸ್ಪಿರಿಚುಯಲ್ ಡೆಮೊಕ್ರಸಿ ಎಂಬ ಬಗ್ಗೆ ಬಹಳ ಚರ್ಚೆ ನಡೆದಿದೆ. ಅಸ್ಪೃಶ್ಯರಾದ ಅವರನ್ನು ದೇವಾಲಯದೊಳಗೆ ಬಿಟ್ಟುಕೊಂಡರೆಂಬುದು ಬದಲಾವಣೆಯಲ್ಲವೇ ಎಂದು ಅವರ ಪ್ರಶ್ನೆ. ತೆಲಂಗಾಣದ, ದೇಶದ ಎಲ್ಲ ದಲಿತರನ್ನೂ ಅವರು ತಮ್ಮೊಡನೆ ದೇವಾಲಯದೊಳಗೆ ಕರೆದುಕೊಂಡು ಹೋದಾಗ ಅದು ಬದಲಾವಣೆ. ಅವರೊಬ್ಬರೇ ಹೋದಾಗ ಅಲ್ಲ. ಸ್ಪಿರಿಚುಯಲ್ ಡೆಮಾಕ್ರಸಿ ಎಂಬುದು ಸಮಾನತೆಯ ಆಧಾರದ ಮೇಲೆ ದಕ್ಕಬೇಕಾದದು. ಅಧೀನತೆ, ಶರಣಾಗತಿಯ ಆಧಾರದ ಮೇಲಲ್ಲ.

ಜನ ಸಾಮಾನ್ಯರಿಗೆ ಆಧ್ಯಾತ್ಮ ಬೇಕು ಎನ್ನುತ್ತಿದ್ದಾರೆ ಸರಿ, ಜನರಿಗೆ ಜಾತಿ ಬೇಕು, ದಲಿತರನ್ನು ದೂರ ಇಡಬೇಕು, ಮೀಸಲಾತಿ ಕಿತ್ತು ಹಾಕಬೇಕು, ಓಟಿಗಿಷ್ಟು ಎಂದು ಹಣ ಬೇಕು ಎಂದು ಇವರೂ ಅದನ್ನೆಲ್ಲಾ ಮಾಡುವುದಾದರೆ ಬೇರೆಯೆಲ್ಲಾ ಪಕ್ಷಗಳಂತೆ ಇವರೂ ಎಂದರ್ಥ.


ಆದ್ದರಿಂದ ಅವರ ವಾದಗಳು ಕೇವಲ ಸಮರ್ಥನೆಯಷ್ಟೇ .ಕಮ್ಯೂನಿಸ್ಟ್ ಚಳುವಳಿ ಇಂತಹ ಸಂದರ್ಭಗಳನ್ನು ಆಗಾಗ್ಗೆ ಎದುರಿಸಿದೆ. ಆಳುವವರೊಡನೆ ಸಂಘರ್ಷದಲ್ಲಿ ಇಂತಹವು ಸಂಭವಿಸಿವೆ. ಕೆಲವರು ಕಾಂಗ್ರೆಸ್, ಇತರ ಪಕ್ಷಗಳನ್ನು, ಒಬ್ಬಿಬ್ಬರು ಬಿಜೆಪಿ ಸೇರುವುದು ನಡೆದಿದೆ. ಇದು ಸಹಜ. ಸಂಘರ್ಷ ದೀರ್ಘ ಹಾಗೂ ತೀವ್ರವಾದಷ್ಟೂ ಇಂತಹವು ಹೆಚ್ಚುತ್ತವೆ. .

ಗದ್ದರ್ ನಂತಹ ಸಾಂಸ್ಕೃತಿಕ ರಂಗದವರಲ್ಲಿ ಇದು ಮತ್ತಷ್ಟು ಹೆಚ್ಚು .ಅಲ್ಲಿ ವ್ಯಕ್ತಿ ಪ್ರಸಿದ್ಧಿ ಮತ್ತು ಪ್ರಾಧಾನ್ಯತೆಗೆ ಒತ್ತು. ಕರ್ನಾಟಕದ್ದೇ ಹಲವು ಉದಾಹರಣೆಗಳಿವೆ. ಗದ್ದರ್ ಜನಪ್ರಿಯತೆ ಮತ್ತು ಅವರು ಅತ್ಯಂತ ಕೆಳ ವಿಭಾಗವಾದ ದಲಿತ ಸಮುದಾಯದವರು , ಅದರಿಂದ ಅವರನ್ನು ಪ್ರೀತಿಸುವವರ ಮೇಲೆ ಬೀಳುವ ಪರಿಣಾಮದ ಬಗ್ಗೆ ಅಷ್ಟೇ ಪರಿಗಣಿಸಬೇಕಾದ ವಿಷಯ.

– ಜಿ ಎನ್ ನಾಗರಾಜ್

ಏಪ್ರಿಲ್–8ರಂದು ದಕ್ಷಿಣಾಯಣ ಕರ್ನಾಟಕ ಸಹಚಿಂತನೆ, ಸಮಾಲೋಚನೆ

ಶಿವಮೊಗ್ಗ ಫ್ಯಾಸಿಸ್ಟ್–ವಿರೋಧಿ ಸಮಾವೇಶಕ್ಕೆ ಬನ್ನಿ!



ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ಅದರ ಮೌಲ್ಯಗಳನ್ನು ನಾಶಪಡಿಸಿ ಫ್ಯಾಸಿಸ್ಟ್ ವ್ಯವಸ್ಥೆಯೊಂದನ್ನು ತರಲು ಹೊರಟಿರುವ ಮತ್ತು ಈ ಕೆಲಸಕ್ಕೆ ಅನುವಾಗುವಂತೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನೇಕ ಪ್ರಕಾರದ ಹಿಂಸೆಗಳ ಮೂಲಕ ಹತ್ತಿಕ್ಕುವ ಉದ್ದೇಶವುಳ್ಳ ರಾಜಕೀಯ ಶಕ್ತಿಗಳು, ಪಕ್ಷಗಳು ಹಾಗೂ ಸಂಸ್ಥೆಗಳು ಇಂದು ಪ್ರಬಲಗೊಳ್ಳುತ್ತಿವೆ. ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಚುನಾವಣ ರಾಜಕೀಯದಿಂದಾಗಿ ಅಧಿಕಾರಕ್ಕೆ ಬಂದ ಕೂಡಲೇ ಈ ಪ್ರಜಾಪ್ರಭುತ್ವದ ಜೀವಾಳವೇ ಆಗಿರುವ ಮೌಲ್ಯಗಳನ್ನು ಹಾಗೂ ಸಂಸ್ಥೆಗಳನ್ನು ನಾಶಮಾಡಲು ತೊಡಗುವುದು ಫ್ಯಾಸಿಸಮ್‌ನ ಲಕ್ಷಣವಾಗಿದೆ. ಇದಕ್ಕೆ ಬೆಂಬಲವಾಗುವ ರೀತಿಯಲ್ಲಿ ಕೋಮುವಾದಿ, ಹುಸಿ ರಾಷ್ಟ್ರವಾದಿ, ಸ್ತ್ರೀ ಹಾಗೂ ದಲಿತ ವಿರೋಧಿ ಸಿದ್ಧಾಂತಗಳನ್ನು ನಾಗರೀಕ ಸಮಾಜದಲ್ಲಿ ವ್ಯವಸ್ಥಿತವಾಗಿ ಹರಿಬಿಡಲಾಗುತ್ತಿದೆ. ಈಗ ನಾವು ಮಾಡಬೇಕಾಗಿರುವುದು ಏನು? ಫ್ಯಾಸಿಜಮ್ ವಿರುದ್ಧವಿರುವ, ಪ್ರಜಾಪ್ರಭುತ್ವ ಹಾಗೂ ಅಭಿವ್ಯಕ್ತಿ ಸ್ವಾತಂತ್ರದ ಬಗ್ಗೆ ನಂಬಿಕೆ ಇರುವ ಎಲ್ಲಾ ಬರಹಗಾರರು, ಕಲಾವಿದರು, ಕ್ರಿಯಾಶೀಲರು, ಮಾಧ್ಯಮದವರು ಒಂದುಗೂಡೋಣ.

ಗೆಳೆಯರೆ,

ಇದು ನಮ್ಮ ಕಾಲದ ಕರೆಯಾಗಿದೆ. ನಾವು ಬರಹಗಾರರು, ಕಲಾವಿದರು, ಮಾಧ್ಯಮಗಳಲ್ಲಿ ಕೆಲಸಮಾಡುವವರು, ಕ್ರಿಯಾಶೀಲರು ಎಲ್ಲರೂ ಒಂದುಗೂಡಲೇಬೇಕಾದ ಕಾಲವು ಬಂದಿದೆ. ಏಕೆಂದರೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ಅದರ ಮೌಲ್ಯಗಳನ್ನು ನಾಶಪಡಿಸಿ ಫ್ಯಾಸಿಸ್ಟ್ ವ್ಯವಸ್ಥೆಯೊಂದನ್ನು ತರಲು ಹೊರಟಿರುವ ಮತ್ತು ಈ ಕೆಲಸಕ್ಕೆ ಅನುವಾಗುವಂತೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನೇಕ ಪ್ರಕಾರದ ಹಿಂಸೆಗಳ ಮೂಲಕ ಹತ್ತಿಕ್ಕುವ ಉದ್ದೇಶವುಳ್ಳ ರಾಜಕೀಯ ಶಕ್ತಿಗಳು, ಪಕ್ಷಗಳು ಹಾಗೂ ಸಂಸ್ಥೆಗಳು ಇಂದು ಪ್ರಬಲಗೊಳ್ಳುತ್ತಿವೆ. ನಿಜಕ್ಕೂ ಇದು ತಲ್ಲಣಗೊಳಿಸುವಂತಿದೆ. ದಾಬೋಲ್ಕರ್, ಪಾನ್ಸರೆ ಮತ್ತು ಕಲಬುರ್ಗಿಯವರ ಹತ್ಯೆಗಳ ಮೂಲಕ ಚಿಂತನೆಮಾಡುವ, ಪ್ರಶ್ನೆಗಳನ್ನು ಕೇಳುವ ಹಾಗೂ ಭಿನ್ನಮತವನ್ನು ಧೈರ್ಯವಾಗಿ ಮಂಡಿಸುವ ವಿಚಾರವಂತರನ್ನೂ ಸುಮ್ಮನಾಗಿಸುವ ಪ್ರಯತ್ನವನ್ನು ಮಾಡಲಾಯಿತು. ಆದರೆ ಈ ಹತ್ಯೆಗಳು ಭೀತಿಯ ಬದಲಾಗಿ ಬರಹಗಾರರಲ್ಲಿ, ವಿಚಾರವಂತರಲ್ಲಿ ಒಗ್ಗಟ್ಟು ಹಾಗೂ ಪ್ರತಿಭಟನೆಯನ್ನು ತಂದವು. ಪ್ರಶಸ್ತಿವಾಪಸಿಯಂಥ ಸಾರ್ವಜನಿಕ ಪ್ರತಿರೋಧದ ಮೂಲಕ ಒಂದು ಮಹತ್ವಪೂರ್ಣ ಸಂಚಲನವು ಆರಂಭವಾಯಿತು. ಆದರೆ ಇನ್ನೊಂದೆಡೆಗೆ ದಲಿತ ವಿದ್ಯಾರ್ಥಿ ರೋಹಿತ್ ವೇಮುಲನ ಆತ್ಮಹತ್ಯೆ, ಜೆ.ಎನ್.ಯು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆಗಳ, ಗೋಮಾಂಸದ ನೆಪದಲ್ಲಿ ಅಖ್ಲಾಕ್‌ನ ಕೊಲೆ, ದೇಶದುದ್ದಕ್ಕೂ ದೈಹಿಕ ಹಲ್ಲೆಗಳು ಇವುಗಳು ತಡೆಯಿಲ್ಲದೆ ನಡೆಯುತ್ತ ಬಂದವು. ಇವು ಬಿಡಿಬಿಡಿಯಾಗಿ ನಡೆದ ಘಟನೆಗಳಾಗಿದ್ದರೂ ಅವು ಸ್ಪಷ್ಟವಾಗಿಯೇ ಒಂದು ಬಗೆಯ ಸಿದ್ಧಾಂತ, ಒಂದು ಬಗೆಯ ರಾಜಕೀಯದ ಬೆಳವಣಿಗೆಯ ಪರಿಣಾಮಗಳಾಗಿರುವುದು ಸ್ಪಷ್ಟವಾಗಿದೆ. ಇಂದು ಸಂದರ್ಭದ ವಿಶಿಷ್ಟತೆಯನ್ನು ಒಟ್ಟುಗೂಡಿಸಿ ನೋಡಿದರೆ ಈ ವಿದ್ಯಮಾನದ ಚಿತ್ರವು ಸಮಗ್ರವಾಗಿ ಕಾಣತೊಡಗುತ್ತದೆ. ಈ ವಿಶಿಷ್ಟತೆಗಳು ಹೀಗಿವೆ:

- ಕೋಮುವಾದಿ ಗಲಭೆ ಹಾಗೂ ಹಿಂಸೆಗಳ ಮೂಲಕ ದೇಶದ ಜನರನ್ನು ಒಡೆದು, ಆಕ್ರಾಮಕವಾದ ಹುಸಿ ರಾಷ್ಟ್ರವಾದದ ಮೂಲಕ ಅಪನಂಬಿಕೆ ಹಾಗೂ ದ್ವೇಷಗಳನ್ನು ಹುಟ್ಟುಹಾಕಿ ಅವುಗಳ ಮೂಲಕ ಚುನಾವಣಾ ರಾಜಕೀಯದಲ್ಲಿ ಅಧಿಕಾರಕ್ಕೆ ಬಂದ ರಾಜಕೀಯ ಶಕ್ತಿಯು ಪ್ರಜಾಪ್ರಭುತ್ವದಿಂದ ತನಗೆ ಇರುವ ಅಪಾಯಗಳನ್ನು ಅರ್ಥಮಾಡಿಕೊಂಡಿದೆ. ಜನರು ನಿರ್ಭೀತರಾಗಿ ಚಿಂತನೆಮಾಡಿ ತಮ್ಮ ನಿಲುವುಗಳನ್ನು ಯಾವ ಭೀತಿಯು ಇಲ್ಲದೇ ಅಭಿವ್ಯಕ್ತಿಸಿ ಒಂದುಗೂಡತೊಡಗಿದರೆ ಪ್ರಜಾಪ್ರಭುತ್ವವು ಗಟ್ಟಿಗೊಳ್ಳುತ್ತದೆ. ಹಾಗೆ ಆದರೆ ಫ್ಯಾಸಿಸ್ಟ್ ರಾಜಕೀಯವು ಬೆಳೆಯಲಾಗದು.
- ಆದ್ದರಿಂದಾಗಿ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಚುನಾವಣ ರಾಜಕೀಯದಿಂದಾಗಿ ಅಧಿಕಾರಕ್ಕೆ ಬಂದ ಕೂಡಲೇ ಈ ಪ್ರಜಾಪ್ರಭುತ್ವದ ಜೀವಾಳವೇ ಆಗಿರುವ ಮೌಲ್ಯಗಳನ್ನು ಹಾಗೂ ಸಂಸ್ಥೆಗಳನ್ನು ನಾಶಮಾಡಲು ತೊಡಗುವುದು ಫ್ಯಾಸಿಸಮ್‌ನ ಲಕ್ಷಣವಾಗಿದೆ.
- ಅದರ ಪ್ರಮುಖ ಗುರಿಗಳೆಂದರೆ ಶಿಕ್ಷಣವಲಯ (ಅದರಲ್ಲೂ ವೈಚಾರಿಕ ಮುಂದಾಳತ್ವವನ್ನು ಕೊಡಬಲ್ಲ ವಿಶ್ವವಿದ್ಯಾನಿಲಯಗಳು), ಮಾಧ್ಯಮಗಳು, ಸರಕಾರೇತರ ನಾಗರೀಕ ಸಂಸ್ಥೆಗಳು, ವೈಚಾರಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಮತ್ತು ಪ್ರಮುಖವಾಗಿ ತನ್ನ ವಿರುದ್ಧ ಯಾವುದೇ ಬಗೆಯ ಪ್ರತಿಭಟನೆ ಮಾಡುವ ರಾಜಕೀಯ ಪಕ್ಷಗಳು ಹಾಗೂ ಚಳುವಳಿಗಳು.
- ಇವುಗಳನ್ನು ಗುರಿಯಾಗಿಟ್ಟುಕೊಂಡು ಅದು ಬಳಸುವ ಮುಖ್ಯ ಸಾಧನವೆಂದರೆ ಹಿಂಸೆಯ ಅನೇಕ ಬಗೆಗಳು. ಉದಾಹರಣೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ತನ್ನ ಪರವಾಗಿರುವವರು ಹಾಗೂ ಬಾಡಿಗೆ ಬಂಟರ ಮೂಲಕ ಬಳಸುವ ಶಾಬ್ದಿಕ ಹಾಗೂ ಮಾನಸಿಕ ಹಿಂಸೆ, ಎರಡನೇಯದು ಬೆದರಿಕೆ. ವಿಶೇಷವಾಗಿ ವಿರೋಧಿ ದನಿಯು ಮಹಿಳೆಯರದ್ದಾಗಿದ್ದರೆ ಅವರ ಮೇಲೆ ಮಾನಭಂಗ ಮಾಡುವ ಬೆದರಿಕೆಗಳು, ಅವರನ್ನು ಅವಮಾನಗೊಳಿಸುವ ರೀತಿಯಲ್ಲಿ troll ಮಾಡಲಾಗುತ್ತಿದೆ. ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ಈ ರಾಜಕೀಯ ಪಕ್ಷದ ವಿದ್ಯಾರ್ಥಿ ಸಂಘಟನೆಯು ಇತ್ತೀಚಿನ ದಿನಗಳಲ್ಲಿ ನೇರವಾಗಿ ದೈಹಿಕ ಹತ್ಯೆಗಳಲ್ಲಿ ತೊಡಗಿದೆ. ಜೆ.ಎನ್.ಯು. ಹಾಗೂ ಇತ್ತೀಚೆಗೆ ದೆಹಲಿ ವಿಶ್ವವಿದ್ಯಾಲಯದ ರಾಜಮಾಸ್ ಕಾಲೇಜಿನಲ್ಲಿ ಇದನ್ನು ನೋಡಿದ್ದೇವೆ. ವಿಚಾರವಂತ ಅಧ್ಯಾಪಕರು, ಬರಹಗಾರರ ಮೇಲೆ ರಾಷ್ಟ್ರದ್ರೋಹ ಮುಂತಾದ ಕೇಸುಗಳನ್ನು ಹಾಕುವುದು, ಅವರ ಕಾರ್ಯಕ್ರಮಗಳನ್ನು ರದ್ದು ಮಾಡುವುದು, ಅವರನ್ನು ಆಹ್ವಾನಿಸಿದವರನ್ನು ಪೀಡಿಸುವುದು ಇದು ಇನ್ನೊಂದು ಬಗೆಯ ಹಿಂಸೆ.
- ಇದಕ್ಕೆ ಬೆಂಬಲವಾಗುವ ರೀತಿಯಲ್ಲಿ ಕೋಮುವಾದಿ, ಹುಸಿ ರಾಷ್ಟ್ರವಾದಿ, ಸ್ತ್ರೀ ಹಾಗೂ ದಲಿತ ವಿರೋಧಿ ಸಿದ್ಧಾಂತಗಳನ್ನು ನಾಗರೀಕ ಸಮಾಜದಲ್ಲಿ ವ್ಯವಸ್ಥಿತವಾಗಿ ಹರಿಬಿಡಲಾಗುತ್ತಿದೆ. ಇಂಥ ದುಷ್ಟ ಚಿಂತನೆಗಳನ್ನು ನಮ್ಮ ಜನರ ಕಾಮನ್ ಸೆನ್ಸ್ ಆಗಿ ಪರಿವರ್ತಿಸುವ ಯಶಸ್ವಿ ಪ್ರಯೋಗಗಳು ನಡೆಯುತ್ತಿವೆ.

ಇವೆಲ್ಲವುಗಳನ್ನು ನೋಡಿದರೆ ನಮ್ಮ ಕಾಲದ ಗೋಡೆಯ ಮೇಲಿನ ಬರಹವು ಅತಿ ಸ್ಪಷ್ಟವಾಗಿದೆ. ಫ್ಯಾಸಿಜಮ್ ಅಂದರೆ ಏನು ಎನ್ನುವ ಚರ್ಚೆ ಆರಂಭವಾಗುವ ಮೊದಲೇ ಅದು ಸಾಂಸ್ಥಿಕವಾಗಿ, ರಾಜಕೀಯವಾಗಿ ಸಾಮಾಜಿಕವಾಗಿ ಪ್ರಬಲವಾಗಿ ಬೆಳೆಯುತ್ತಿದೆ. ಈ ಸನ್ನಿವೇಶದಲ್ಲಿ ನಾವೆಲ್ಲ ಒಂದುಗೂಡದಿದ್ದರೆ ನಮಗೆ ಉಳಿಗಾಲವಿಲ್ಲ. ಈ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ. ಆದ್ದರಿಂದ ಇದು ಒಂದು ರೀತಿಯಲ್ಲಿ ಕೊನೆಯ ಹೋರಾಟವೂ ಹೌದು. ಕೊನೆಯಿಲ್ಲದ ಹೋರಾಟವೂ ಹೌದು. ಘೋಷಣೆಯ ಶೈಲಿಯಲ್ಲಿ ಈ ಮಾತುಗಳನ್ನು ಹೇಳಬೇಕಾಗಿ ಬಂದಿರುವುದು ನಮ್ಮ ಕಾಲದ ಅನಿವಾರ್ಯತೆಯಾಗಿದೆ.


ಈಗ ನಾವು ಮಾಡಬೇಕಾಗಿರುವುದು ಏನು? ಫ್ಯಾಸಿಜಮ್ ವಿರುದ್ಧವಿರುವ, ಪ್ರಜಾಪ್ರಭುತ್ವ ಹಾಗೂ ಅಭಿವ್ಯಕ್ತಿ ಸ್ವಾತಂತ್ರದ ಬಗ್ಗೆ ನಂಬಿಕೆ ಇರುವ ಎಲ್ಲಾ ಬರಹಗಾರರು, ಕಲಾವಿದರು, ಕ್ರಿಯಾಶೀಲರು, ಮಾಧ್ಯಮದವರು ಒಂದುಗೂಡೋಣ. ನಾವು ಅನೇಕ ಸಂಘಟನೆಗಳಿಗೆ ಸೇರಿರಬಹುದು. ರಾಜಕೀಯ ಪಕ್ಷಗಳ ಸದಸ್ಯರಾಗಿರಬಹುದು ಅಥವಾ ಬೆಂಬಲಿಗರಾಗಿರಬಹುದು. ಈಗಾಗಲೇ ಅರ್ಥಪೂರ್ಣವಾಗಿ ನಡೆಯುತ್ತಿರುವ ಚಳುವಳಿಗಳಲ್ಲಿ ಭಾಗಿಯಾಗಿರಬಹುದು. ಇದಾವುದನ್ನೂ ಬಿಟ್ಟುಕೊಡದೇ ಫ್ಯಾಸಿಜಮ್‌ನ ವಿರುದ್ಧ ಪ್ರಜಾಪ್ರಭುತ್ವವಾದಿ ಹೋರಾಟಕ್ಕಾಗಿ ದಕ್ಷಿಣಾಯಣದ ಹೆಸರಲ್ಲಿ ಒಂದುಗೂಡೋಣ. ದಕ್ಷಿಣಾಯಣ ಏಕೆ ಎಂದರೆ ಅದು ಒಂದು ಸಂಸ್ಥೆಯಲ್ಲ. ಸಂಘಟನೆಯಲ್ಲ. ಅದು ಫ್ಯಾಸಿಜಮ್ ವಿರುದ್ಧ ಪ್ರಜಾಪ್ರಭುತ್ವದ ಪರವಾಗಿರುವ, ಅಭಿವ್ಯಕ್ತಿ ಸ್ವಾತಂತ್ರವನ್ನು ಉಳಿಸ ಬಯಸುವ ಬರಹಗಾರ, ಕಲಾವಿದರ ಒಂದು ಚಳುವಳಿ ಮಾತ್ರ. ಇದರಲ್ಲಿ ಈಗಾಗಲೇ ಭಾರತದ ಅನೇಕ ಭಾಷೆಗಳ ಬರಹಗಾರರು ಸೇರಿಕೊಂಡು ಅನೇಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇದರ ಬಗ್ಗೆ ದೇಶದ ಪ್ರಮುಖ ಬರಹಗಾರರು, ಚಿಂತಕರು ಆಗಿರುವ ಶ್ರೀ ಗಣೇಶ್ ದೇವಿಯವರ ಟಿಪ್ಪಣಿಯನ್ನು ನೋಡಿ.

ಜನಪರ ಚಳುವಳಿಗಳಲ್ಲಿ ಯಾವಾಗಲೂ ಮುಂಚೂಣಿಯಲ್ಲಿರುವ ಕನ್ನಡದ ಬರಹಗಾರರು ಕಲಾವಿದರು ಕ್ರಿಯಾಶೀಲರು ಸೇರಿ ದಕ್ಷಿಣಾಯಣ ಕರ್ನಾಟಕದ ಹೆಸರಿನಲ್ಲಿ ಒಂದುಗೂಡಬೇಕಿದೆ. ಅದಕ್ಕಾಗಿ ಏಪ್ರಿಲ್ 8 ರಂದು ಶಿವಮೊಗ್ಗದಲ್ಲಿ ಸಮಾವೇಶವನ್ನು ಏರ್ಪಡಿಸುತ್ತಿದ್ದೇವೆ. ಇದು ವಿಚಾರಸಂಕಿರಣವಲ್ಲ; ಅತಿಥಿಗಳೂ ಇರುವುದಿಲ್ಲ. ಇದು ಒಂದು ಸಹಚಿಂತನೆ ಹಾಗೂ ಸಮಾಲೋಚನೆಯ ಸ್ವರೂಪದ್ದು. ನಾವು ತುರ್ತಾಗಿ, ಅಗತ್ಯವಾಗಿ ನಮ್ಮೆಲ್ಲ ಶಕ್ತಿಗಳನ್ನು ಬಳಸಿಕೊಂಡು ಮಾಡಬೇಕಾದುದರ ಬಗ್ಗೆ ಸ್ಪಷ್ಟತೆ ಪಡೆದುಕೊಂಡು ಮಾಡಬೇಕಾದ ಕೆಲಸಗಳನ್ನು ಆರಂಭಿಸಲು ಒಂದು ವೇದಿಕೆ. ದಯವಿಟ್ಟು ಬನ್ನಿ. ನಾವು ಅಂದುಕೊಂಡಿದ್ದುದು ಸರಿಯೆನಿಸಿದರೆ, ನೀವು ಸಹಭಾಗಿಯಾಗಬೇಕೆನಿಸಿದರೆ ನಮಗೆ ಬರೆಯಿರಿ. ಇ–ಮೈಲ್ ಮಾಡಿ. ಸಮಾವೇಶದ ವಿವರಗಳನ್ನು ಕಳಿಸುತ್ತೇವೆ.

ದಕ್ಷಿಣಾಯಣ ಕರ್ನಾಟಕದ ಪರವಾಗಿ

ರಾಜೇಂದ್ರ ಚೆನ್ನಿ

ಸಂಪರ್ಕಕ್ಕಾಗಿ:
ರಾಜೇಂದ್ರ ಚೆನ್ನಿ, ಇಂಗ್ಲಿಷ್ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451
rajendrachenni@gmail.com
ಮೊಬೈಲ್ : 9449553349



ಪ್ರಶ್ನೆ: ಬಹುಜನ ಸಮಾಜ ಪಾರ್ಟಿ ನಾಯಕಿ ಮಾಯಾವತಿ ಮತ್ತು ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ಪಂಜಾಬ್ ಮತ್ತು ಉತ್ತರ ಪ್ರದೇಶದ ಚುನಾವಣೆಯಲ್ಲಿ ವಿದ್ಯುನ್ಮಾನ ಮತಪೆಟ್ಟಿಗೆ (ಇ.ವಿ.ಎಂ.– ಇಲೆಕ್ಟ್ರಾನಿಕ್ ವೋಟಿಂಗ್ ಮಶೀನ್)ಗಳನ್ನು ಅಕ್ರಮವಾಗಿ ದುರುಪಯೋಗ ಪಡೆಯಲು ವಿರೂಪಗೊಳಿಸಲಾಗಿದೆಯೆಂದು ಅಪಾದಿಸಿದ್ದು, ಈ ಅಪಾದನೆ ಬಗ್ಗೆ ಸಿಪಿಐ(ಎಂ) ಪಕ್ಷದ ನಿಲುವೇನು ?



ಇ.ವಿ.ಎಂ. ವ್ಯವಸ್ಥೆ ಹಿಂದಿನ ಮತಪತ್ರ ಆಧಾರಿತ ಹಿಂದಿನ ಪದ್ಧತಿಗಿಂತ ಉತ್ತಮವಾಗಿದೆ. ಮತಪತ್ರಗಳನ್ನು ಅಕ್ರಮವಾಗಿ ಹಾಕುವುದು, ಬೂತ್‌ಗಳನ್ನು ಆಕ್ರಮಿಸುವುದು ಇವೆಲ್ಲ ಹಿಂದಿನ ಪದ್ಧತಿಯಲ್ಲಿ ಸುಲಭವಾಗುತಿದ್ದವು.

ಇ.ವಿ.ಎಂ ಸ್ವತಂತ್ರವಾದ ಯಂತ್ರವಾಗಿದ್ದು ಯಾವುದೇ ಕೇಂದ್ರ ಜಾಲದ ಭಾಗವಾಗಿರುವುದಿಲ. ಆದ್ದರಿಂದ ಅವುಗಳನ್ನು ಅಕ್ರಮವಾಗಿ ವಿರೂಪಗೊಳಿಸುವುದು ಸುಲಭಸಾಧ್ಯವಲ್ಲ ಹಾಗೂ ಮಾಡಬೇಕಿದ್ದರೆ ಪ್ರತಿಯೊಂದು ಮತ ಪೆಟ್ಟಿಗೆಯಲ್ಲೂ ಅಕ್ರಮ ಸಾಫ್ಟ್‌ವೇರ್ ಇಡಬೇಕಾಗುತ್ತದೆ. ಮತ್ತು ಅದಕ್ಕೆ ಹಲವು ಮಟ್ಟದ ಅಧಿಕಾರವರ್ಗ ಮತ್ತು ಚುನಾವಣಾ ಸಿಬ್ಬಂದಿ ಶಾಮೀಲಾಗಬೇಕಾಗುತ್ತದೆ.

ಇ.ವಿ.ಎಂ.ನಲ್ಲಿ ಅಕ್ರಮ ನಡೆಸಲು ಅಭ್ಯರ್ಥಿಗಳ ಕ್ರಮಸಂಖ್ಯೆ ಗೊತ್ತಿರಬೇಕು. ಅಭ್ಯರ್ಥಿಗಳ ಅಂತಿಮಪಟ್ಟಿ ತಿಳಿಯುವುದು ಉಮೇದುವಾರಿಕೆ ಹಿಂಪಡೆಯಲು ನಿರ್ಧಾರವಾದ ದಿನಾಂಕದ ನಂತರವೇ. ಈ ಪಟ್ಟಿ ಚುನಾವಣಾ ಅಧಿಕಾರಿಗಳಿಗೆ ಲಭ್ಯವಾಗುವುದು ಕೆಲವೇ ದಿನಗಳಿರುವಾಗ. ಹೀಗಿರುವಾಗ ಅಕ್ರಮ ಸಾಫ್ಟ್‌ವೇರ್ ಬಳಸಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ನಡೆಸುವುದು ಹೆಚ್ಚುಕಡಿಮೆ ಅಸಾಧ್ಯ.

ಆದರೂ ಸಂಶಯ ಮತ್ತು ಅನುಮಾನಗಳು ಪ್ರತಿ ಚುನಾವಣೆ ನಂತರ ಹಿಂದೆಯೂ ಹಲವು ಬಾರಿ ಎದ್ದಿರುವುದರಿಂದ, ಸಿಪಿಐ(ಎಂ) ಯಾವುದಾದರೂ ಕ್ರಮದಿಂದ ಪ್ರತಿಯೊಬ್ಬ ಮತದಾರ ಮಾಡಿರುವ ಮತವನ್ನು ಪರೀಕ್ಷಿಸಲು ಅವಕಾಶವಿರಬೇಕೆಂದು ಪ್ರತಿಪಾದಿಸುತ್ತದೆ. ಇ.ವಿ.ಎಂ.ನಲ್ಲಿ ಮತದಾರನಿಗೆ ತಾನು ನೀಡಿದ ಮತ ನಿಖರವಾಗಿ ಗಣನೆಗೆ ಬರುವುದರ ಬಗ್ಗೆ ಖಾತ್ರಿಯಿರಲಿಲ್ಲ. ಚುನಾವಣಾ ಆಯೋಗದ ಮುಂದೆ ಹಲವಾರು ಪಕ್ಷಗಳು ಹಲವು ಸುತ್ತಿನ ಮಾತುಕತೆ ನಡೆಸಿ ಇ.ವಿ.ಎಂ.ನಲ್ಲಿ ಮತದಾನ ಮಾಡಿದ ನಂತರ ಮತವನ್ನು ಪೇಪರ್‌ನಲ್ಲಿ ಮುದ್ರಿಸುವ ಸೂಚನೆ ನೀಡಿರುತ್ತದೆ.

ಇಂತಹ ವ್ಯವಸ್ಥೆ ಮತ ಇ.ವಿ.ಎಂ.ನಲ್ಲಿ ಸರಿಯಾಗಿ ದಾಖಲಿಸಲಾಗಿದೆ ಎಂಬ ಖಾತ್ರಿಯನ್ನು ಮತದಾರನಿಗೆ ನೀಡುತ್ತದೆ. ಈ ರೀತಿ ಪೇಪರ್‌ನಲ್ಲಿ ಮುದ್ರಿತವಾದ ಮತದಾನದಿಂದ ಮುಂದೆ ಉಂಟಾಗಬಹುದಾದ ವ್ಯತ್ಯಾಸಗಳು, ತಪ್ಪುಗಳನ್ನು ಪುನಃ ಪರಿಶೀಲಿಸಲು ಆಡಿಟ್ ಮಾಡುವ ಅವಕಾಶವಿರುತ್ತದೆ. ಇಂತಹ (ವಿ,ವಿ,ಪಿ.ಎ.ಟಿ. – ವೋಟರ್ ವೆರಿಫೈಡ್ ಪೇಪರ್ ಅಡಿಟ್ ಟ್ರೈಲ್) ಪೇಪರ್ ಸಹಿತ ಇ.ವಿ.ಎಂ ವ್ಯವಸ್ಥೆ, 2014 ಚುನಾವಣೆಯಲ್ಲಿ 8 ಪಾರ್ಲಿಮೆಂಟ್ ಕ್ಷೇತ್ರದಲ್ಲೂ ಮತ್ತು ಇತ್ತೀಚಿನ 5 ರಾಜ್ಯ ಚುನಾವಣೆಯಲ್ಲಿ ಗೋವಾದ ಎಲ್ಲ ವಿಧಾನಸಭಾ ಕ್ಷೇತ್ರದಲ್ಲೂ ಬಳಸಲಾಗಿತ್ತು.

ಚುನಾವಣಾ ಆಯೋಗ 2019 ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಎಲ್ಲ ಲೋಕಸಭಾ ಕ್ಷೇತ್ರದಲ್ಲೂ ಪೇಪರ್ ಸಹಿತ ಇ.ವಿ.ಎಂ ವ್ಯವಸ್ಥೆ ಲಭ್ಯವಿರುವುದಾಗಿ ತಿಳಿಸಿರುತ್ತದೆ. ಆದರೆ ಇದು ಅಸಂಭವನೀಯ. ಏಕೆಂದರೆ ಪೇಪರ್ ಸಹಿತ ಇ.ವಿ.ಎಂ ವ್ಯವಸ್ಥೆ ಪೂರ್ಣವಾಗಿ ಒದಗಿಸಲು ಆಯೋಗಕ್ಕೆ ಬೇಕಾಗಿರುವ ಹಣವನ್ನು ಸರ್ಕಾರ ಒದಗಿಸಿರುವುದಿಲ್ಲ. ಈ ವ್ಯವಸ್ಥೆ ಮಾಡಲು ಬೇಕಾಗಿರುವುದು ರೂ. 3100 ಕೋಟಿ. ಸಿಪಿಐ(ಎಂ) ಕೇಂದ್ರ ಸರ್ಕಾರವನ್ನು ಈ ಮೊಬಲಗನ್ನು ಚುನಾವಣಾ ಆಯೋಗಕ್ಕೆ ಬಿಡುಗಡೆ ಮಾಡಲು ಆಗ್ರಹಪಡಿಸುತ್ತದೆ. ಇದರಿಂದ ಪೂರ್ಣ ಪ್ರಮಾಣದ ಪೇಪರ್ ಸಹಿತ ಇ.ವಿ.ಎಂ ವ್ಯವಸ್ಥೆಯನ್ನು ಅಳವಡಿಸಬಹುದು.

ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಲಂಗುಲಗಾಮಿಲ್ಲದ ಕಾರ್ಪೋರೇಟ್ ದೇಣಿಗೆ



ಹಣಕಾಸು ಮಸೂದೆಯಲ್ಲಿ ಆಳುವ ಪಕ್ಷಕ್ಕೆ ಕಾರ್ಪೋರೇಟ್‌ಗಳು ಹೇರಳ ಹಣ ನೀಡಲು, ಆಮೂಲಕ ಕಪ್ಪು ಹಣವನ್ನು ಬಿಳಿಮಾಡಲು ಅನುಕೂಲವಾಗುವ ತಿದ್ದುಪಡಿಯನ್ನು ತೂರಿಸಿ ಲೋಕಸಭೆಯ ಅಂಗೀಕಾರ ಪಡೆಯಲಾಗಿದೆ. ಈ ಮೂಲಕ ಮೋದಿ ಸರಕಾರ, ಸಂಸದೀಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ವ್ಯವಸ್ಥೆಯನ್ನು ಕಾರ್ಪೋರೇಟ್‌ಗಳೇ ವಹಿಸಿಕೊಳ್ಳಲು ಹೆಚ್ಚೆಚ್ಚು ಅನುಕೂಲಗಳನ್ನು ಕಲ್ಪಿಸುತ್ತಿರುವಂತೆ ಕಾಣುತ್ತಿದೆ.

ಪ್ರಕಾಶ್ ಕಾರಟ್



ನರೇಂದ್ರ ಮೋದಿ ಸರಕಾರ ಬಿಜೆಪಿಗೆ ಕಾರ್ಪೊರೇಟ್ ನಿಧಿಯನ್ನು ಹರಿಸಿಕೊಳ್ಳಲು ಹಾಗೂ ರಾಜಕೀಯ ವ್ಯವಸ್ಥೆಯನ್ನು ದೊಡ್ಡ ಹಣವಂತರ ತೊತ್ತನ್ನಾಗಿ ಮಾಡಲು ಅನುವಾಗುವ ಇನ್ನೊಂದು ಕ್ರಮವನ್ನು ಗುಟ್ಟಾಗಿ ಕೈಗೊಂಡಿದೆ.

ಕೇಂದ್ರ ಬಜೆಟ್ ಮಂಡಿಸುವಾಗ ಹಣಕಾಸು ಸಚಿವರು ರಾಜಕೀಯ ಪಕ್ಷಗಳಿಗೆ ನಿಧಿಯನ್ನು ಸಂಗ್ರಹಿಸುವ ವಾರ್ಗವಾಗಿ ಸರಕಾರವು 'ಚುನಾವಣಾ ಬಾಂಡ್'ಗಳನ್ನು ಪರಿಚಯಿಸಲಿದೆ ಎಂದು ಘೋಷಿಸಿದ್ದರು. ಈ ಪರಿಕಲ್ಪನೆಯ ಪ್ರಕಾರ ಯಾರಾದರೂ ಒಂದು ರಾಜಕೀಯ ಪಕ್ಷಕ್ಕೆ ಹಣ ದೇಣಿಗೆಯಾಗಿ ನೀಡಬಯಸಿದರೆ ಅಂಥವರು ಬ್ಯಾಂಕ್ ಮೂಲಕ ನಿರ್ದಿಷ್ಟ ಮೊತ್ತದ ಚುನಾವಣಾ ಬಾಂಡ್ ಖರೀದಿಸಬೇಕು. ಆ ಬಾಂಡ್‌ನ್ನು ಆ ರಾಜಕೀಯ ಪಕ್ಷದ ಖಾತೆಗೆ ಹಾಕಬಹುದು. ಈ ಬಾಂಡ್‌ನ ಒಂದು ಪ್ರಮುಖ ಲಕ್ಷಣವೆಂದರೆ ದೇಣಿಗೆ ಕೊಡುವವರ ಗುರುತನ್ನು ಅದು ಬಹಿರಂಗ ಪಡಿಸುವುದಿಲ್ಲ. ರಾಜಕೀಯ ಪಕ್ಷಗಳು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುವ ರಿಟರ್ನ್ಸ್‌ನಲ್ಲಿ ತಾವು ಯಾರಿಂದ ಈ ಬಾಂಡ್ ಪಡೆದೆವು ಎಂಬುದನ್ನು ಕೂಡ ಬಹಿರಂಗಪಡಿಸಬೇಕೆಂದಿಲ್ಲ.

ಈ ರೀತಿಯಲ್ಲಿ ಅನಾಮಧೇಯರಿಂದ ಬೇರರ್ ಬಾಂಡ್‌ಗಳ ಮೂಲಕ ನಿಧಿಯನ್ನು ವರ್ಗಾಯಿಸುವುದರಿಂದ ಕಪ್ಪು ಹಣವೂ ಸೇರಿದಂತೆ ದೊಡ್ಡ ಶ್ರೀಮಂತರ ಹಣವು ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಸಂದಾಯ ಮಾಡಿ ಬಿಳಿ ಮಾಡಲು ಅನುಕೂಲವಾಗುತ್ತದೆ. ಹಣಕಾಸು ಮಸೂದೆಯನ್ನು ಮಂಡಿಸಿದಾಗ, ಅದು ರಾಜಕೀಯ ದೇಣಿಗೆಯಲ್ಲಿ ಇಂಥದ್ದೊಂದು ಬದಲಾವಣೆ ತರುವ ನಿಟ್ಟಿನಲ್ಲಿ ಆದಾಯ ತೆರಿಗೆ ಕಾನೂನಿಗೆ ಮತ್ತು ಜನತಾ ಪ್ರಾತಿನಿಧ್ಯ ಕಾನೂನಿಗೆ ತಿದ್ದುಪಡಿಗಳನ್ನು ಒಳಗೊಂಡಿತ್ತು.

ಆದರೆ ಲೋಕಸಭೆ ಮಾರ್ಚ್ 22ರಂದು ಹಣಕಾಸು ಮಸೂದೆಯನ್ನು ಪರಿಶೀಲಿಸುವ ಕೆಲವೇ ಗಂಟೆಗಳ ಮುನ್ನ ಸರಕಾರ ಅದಕ್ಕೆ ಅನೇಕ ತಿದ್ದುಪಡಿಗಳನ್ನು ಮಂಡಿಸಿತು. ಅಂದರೆ ಹಣಕಾಸು ಮಸೂದೆಯೊಂದಿಗೆ ಕೈಗೆತ್ತಿಕೊಳ್ಳಬೇಕಾದ ತಿದ್ದುಪಡಿಗಳ ಅಧ್ಯಯನಕ್ಕೆ ಸದನಕ್ಕೆ ಅಕ್ಷರಶಃ ಸಮಯವನ್ನೇ ಕೊಡಲಿಲ್ಲ.

ಕಂಪೆನಿ ಕಾನೂನಿಗೆ ತಿದ್ದುಪಡಿ ಅಂಥ ತಿದ್ದುಪಡಿಗಳಲ್ಲಿ ಒಂದಾಗಿದೆ. ಸದ್ಯ, ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಸರಾಸರಿಯ ಶೇಕಡಾ 7.5ರಷ್ಟರ ವರೆಗೆ ಕಂಪೆನಿಗಳು ರಾಜಕೀಯ ಪಕ್ಷಗಳಿಗೆ ದೇಣಿಗೆಗಳನ್ನು ಕೊಡಬಹುದು. ಈ 7.5% ಮಿತಿಯನ್ನು ತೆಗೆದು ಹಾಕುವುದು ಈ ತಿದ್ದುಪಡಿಯ ಉದ್ದೇಶ. ಎರಡನೆಯದಾಗಿ, ಪ್ರಸಕ್ತ ಕಾನೂನಿನಲ್ಲಿ ಯಾವ ರಾಜಕೀಯ ಪಕ್ಷಕ್ಕೆ ಕಂಪನಿ ದೇಣಿಗೆ ಕೊಡುತ್ತದೆ ಎಂದು ತಿಳಿಸಬೇಕು. ಈ ತಿದ್ದುಪಡಿ ಅದನ್ನು ಕೂಡ ಕೈಬಿಡುವ ಸೂಚನೆ ಇಟ್ಟಿದೆ.

ಈ ತಿದ್ದುಪಡಿಯ ಒಟ್ಟು ಫಲಿತಾಂಶವೆಂದರೆ, ಯಾವುದೇ ರಾಜಕೀಯ ಪಕ್ಷಕ್ಕೆ ಕಂಪೆನಿಗಳು ಲೆಕ್ಕವಿಲ್ಲದಷ್ಟು ಹಣವನ್ನು ದೇಣಿಗೆಯಾಗಿ ಕೊಡಬಹುದು ಎಂದಾಗುತ್ತದೆ ಇದನ್ನು ಈಗ ಲೋಕಸಭೆ ಅಂಗೀಕರಿಸಿದೆ . ನಿವ್ವಳ ಲಾಭದ ಶೇಕಡಾ 7.5 ಮಿತಿಯೂ ಇರುವುದಿಲ್ಲ, ಮತ್ತು ಯಾವ ರಾಜಕೀಯ ಪಕ್ಷಕ್ಕೆ ದೇಣಿಗೆ ನೀಡಲಾಗಿದೆ ಎಂಬುದನ್ನೂ ಆ ಕಂಪೆನಿ ಲೆಕ್ಕಪತ್ರದಲ್ಲಿ ತೋರಿಸುವುದಿಲ್ಲ. ಇದು ಲೆಕ್ಕದಲ್ಲಿ ತೋರಿಸದ ಹಣವನ್ನು ಒಂದು ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಹರಿಸಲೆಂದೇ ಕಂಪನಿಗಳನ್ನು ರಚಿಸಲು ದಾರಿ ತೆರೆದು ಕೊಡುತ್ತದೆ.

ಈ ಬದಲಾವಣೆಯನ್ನು ಆಳುವ ಪಕ್ಷವಾದ ಬಿಜೆಪಿಗೆ ಕಾರ್ಪೊರೇಟ್ ದೇಣಿಗೆಗಳನ್ನು ಧಾರಾಳವಾಗಿ ನೀಡಲು ಅನುಕೂಲ ಕಲ್ಪಿಸುವುದಕ್ಕಾಗಿ ಮಾಡಲಾಗಿದೆ. ಇದೀಗ ಕಂಪನಿಗಳಿಗೆ ಸರಕಾರದ ಕೃಪಾಕಟಾಕ್ಷ ಪಡೆಯಲಿಕ್ಕಾಗಿ ಆಳುವ ಪಕ್ಷಕ್ಕೆ ಹೇರಳ ಹಣ ನೀಡುವುದಕ್ಕೆ ಉತ್ತೇಜನೆ ಒದಗಿಸಿದೆ. ಆಳುವ ಪಕ್ಷಕ್ಕೆ ಇನ್ನೊಂದು ಅನುಕೂಲವೂ ಇದೆ. ಚುನಾವಣೆ ಬಾಂಡ್‌ಗಳ ಮೂಲಕ ದೇಣಿಗೆಯನ್ನು ಬ್ಯಾಂಕ್‌ಗಳ ಮೂಲಕ ನೀಡಬೇಕು. ದೇಣಿಗೆ ನೀಡಿದ ಕಂಪನಿಯ ಅಥವ ದೇಣಿಗೆದಾರರ ಗುರುತನ್ನು ಬಹಿರಂಗವಾಗಿ ತಿಳಿಸುವುದಿಲ್ಲವಾದರೂ ಅಂಥ ದೇಣಿಗೆಗಳ ವಿವರಗಳನ್ನು ಗೊತ್ತು ಮಾಡಿಕೊಳ್ಳಲು ಸರಕಾರದ ಬಳಿ ಸಾಧನಗಳಿವೆ. ಏಕೆಂದರೆ ಅದು ಬ್ಯಾಂಕುಗಳ ಮಾಹಿತಿಗಳನ್ನು ಸರಕಾರೀ ಅಧಿಕಾರಿಗಳ ಮೂಲಕ ಪಡೆಯ ಬಲ್ಲದು. ಯಾವ ಕಂಪನಿಯೂ ಪ್ರತಿಪಕ್ಷಗಳಿಗೆ ದೇಣಿಗೆಗಳನ್ನು ನೀಡುವ ಮೂಲಕ ಆಳುವ ಪಕ್ಷದ ಹುತ್ತು ಸರಕಾರದ ಕೋಪಕ್ಕೆ ಗುರಿಯಾಗುವ ಅಪಾಯವನ್ನು ಎಳೆದುಕೊಳ್ಳಲಾರದು.

ಮೋದಿ ಸರಕಾರ ಲಂಚ ಮತ್ತು ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲೂ ಹಾದಿಯನ್ನು ಸುಗಮಗೊಳಿಸಿದೆ. ಇದುವರೆಗೆ, ಯಾವುದೇ ಒಂದು ಕಂಪೆನಿಗೆ ಗುತ್ತಿಗೆ ಸಿಕ್ಕರೆ ಅದು ಟೇಬಲ್ ಕೆಳಗಡೆಯಿಂದ ಕಪ್ಪು ಹಣವನ್ನು ಲಂಚವಾಗಿ ಕೊಡುತ್ತಿತ್ತು. ಇದೀಗ ಆ ರೀತಿಯ ಎಲ್ಲಾ ಲಂಚರುಷುವತ್ತುಗಳನ್ನು ಕಾನೂನುಬದ್ಧವಾಗಿಯೇ ಕೊಡಬಹುದಾಗಿದೆ. ಯಾವುದಾದರೂ ಒಂದು ಕಂಪೆನಿ ಸರಕಾರಿ ಸಂಸ್ಥೆಯಿಂದ 500 ಕೋಟಿ ರೂಪಾಯಿಗಳ ಗುತ್ತಿಗೆ ಪಡೆಯಿತು ಎಂದುಕೊಳ್ಳಿ, ಹತ್ತು ಶೇಕಡಾ ಕಮಿಷನ್ ಎಂದರೆ 50 ಕೋಟಿ ರೂಪಾಯಿ ಆಗುತ್ತದೆ. ಹಿಂದೆ ಅದನ್ನು ಲಂಚವಾಗಿ ಅಕ್ರಮ ಹಣದ ಮೂಲಕ ಪಾವತಿಸಬೇಕಾಗುತ್ತಿತ್ತು. ಆದರೆ ಈಗ ಈ ತಿದ್ದುಪಡಿ ಮೂಲಕ ಕಂಪೆನಿಯೊಂದು ಆಳುವ ಪಕ್ಷಕ್ಕೆ 50 ಕೋಟಿ ರೂಪಾಯಿಗಳನ್ನು ದೇಣಿಗೆಯಾಗಿ ನೀಡಬಹುದಾಗಿದೆ, ಈ ಬಗ್ಗೆ ಯಾರೂ ಯಾವುದೇ ಪ್ರಶ್ನೆ ಕೇಳಲು ಅವಕಾಶವೇ ಇಲ್ಲ. ಈ ವ್ಯವಹಾರವನ್ನು ಅನಾಮಧೇಯವಾಗಿ ಇಡಲಾಗುತ್ತದೆ ಹಾಗೂ ಇದು ಕಾನೂನುಬದ್ಧವಾಗಿರುತ್ತದೆ.

ಈ ಒಂದೇ ಒಂದು ಕ್ರಮದ ಮೂಲಕ ಮೋದಿ ಸರಕಾರವು ಆಳುವ ಪಕ್ಷದ ಖಜಾನೆಗೆ ಕಾರ್ಪೊರೇಟ್ ಹಣ ಪ್ರವಾಹದೋಪಾದಿಯಲ್ಲಿ ಹರಿದುಬರಲು ಹೆಬ್ಬಾಗಿಲುಗಳನ್ನು ತೆರೆದಿದೆ. ಇದು ಕಾರ್ಪೊರೇಟ್‌ಗಳು ಮತ್ತು ರಾಜಕೀಯ ಪಕ್ಷಗಳ ದುಷ್ಟಕೂಟವನ್ನು ಕಾನೂನುಸಮ್ಮತಗೊಳಿಸುವ ಮೂಲಕ ನವ-ಉದಾರವಾದಿ ರಾಜಕೀಯ ತುತ್ತ ತುದಿ ತಲುಪಿರುವುದನ್ನೂ ತೋರಿಸುತ್ತದೆ,

ಕಳೆದ ವರ್ಷ, ಹಣಕಾಸು ಮಸೂದೆ 2016ರ ಮೂಲಕ ಸರಕಾರವು ವಿದೇಶಿ ದೇಣಿಗೆ ನಿಯಂತ್ರಣ ಕಾನೂನಿಗೆ (ಎಫ್‌ಸಿಆರ್‌ಎ) ತಿದ್ದುಪಡಿ ತಂದಿತ್ತು. ವಿದೇಶಿ ಕಂಪೆನಿಗಳ ಭಾರತೀಯ ಸಹವರ್ತಿ ಕಂಪೆನಿಗಳ ದೇಣಿಗೆಯನ್ನು ಭಾರತೀಯ ಮೂಲದ ದೇಣಿಗೆ ಎಂದೇ ಪರಿಗಣಿಸಲು ಈ ತಿದ್ದುಪಡಿ ಅನುಕೂಲ ಕಲ್ಪಿಸಿತ್ತು. ಈ ರೀತಿಯಾಗಿ ರಾಜಕೀಯ ಪಕ್ಷಗಳಿಗೆ ವಿದೇಶಿ ಕಾರ್ಪೊರೇಟ್ ದೇಣಿಗೆಯನ್ನು ಒಂದೇ ಏಟಿಗೆ ಕಾನೂನುಸಮ್ಮತಗೊಳಿಸಲಾಗಿತ್ತು. ಇದೀಗ ಈ ಹಣಕಾಸು ಮಸೂದೆಯ ಮೂಲಕ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆ ಮೇಲಿನ ಎಲ್ಲಾ ಮಿತಿಗಳನ್ನು ತೆಗೆದುಹಾಕಲಾಗಿದೆ.

ಮೋದಿ ಸರಕಾರ ಇನ್ನೊಂದು ಅಪಾಯಕಾರಿ ಹಾಗೂ ಪ್ರಜಾಪ್ರಭುತ್ವ-ವಿರೋಧಿ ಪೂರ್ವ ನಿದರ್ಶನವನ್ನೂ ಹಾಕಿಕೊಟ್ಟಿದೆ. ಬಜೆಟ್ ಪ್ರಸ್ತಾವನೆಗಳು ಅಥವಾ ಒಂದು ಮನಿ ಬಿಲ್‌ಗೆ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲದ ಕಾನೂನುಗಳಿಗೆ ತಿದ್ದುಪಡಿ ತರಲು ಹಣಕಾಸು ಮಸೂದೆಯನ್ನು ಬಳಸಿಕೊಳ್ಳುವ ಚಾಳಿಯನ್ನು ತೋರಿಸಿಕೊಡಲಾಗಿದೆ. ಬಜೆಟ್‌ಗೆ ಯಾವುದೇ ಸಂಬಂಧವಿರದ ಪ್ರಸಕ್ತ ಕಾನೂನುಗಳಿಗೆ ತಿದ್ದುಪಡಿಗಳನ್ನು ಹಣಕಾಸು ಮಸೂದೆಗೆ ಲಗತ್ತಿಸಲಾಗಿದೆ. ಹಣಕಾಸು ಮಸೂದೆ ಒಂದು 'ಮನಿ ಬಿಲ್'(ಹಣಸಂಬಂಧಿ ಮಸೂದೆ) ಆಗಿರುವುದರಿಂದ ಅವುಗಳ ಮೂಲಕ ಕಾನೂನುಗಳಿಗೆ ತರಲಾದ ತಿದ್ದುಪಡಿಗಳನ್ನು ರಾಜ್ಯಸಭೆಯ ಪರೀಕ್ಷಿಸುವಂತಿಲ್ಲ ಅಥವ ಅದರ ಅಂಗೀಕಾರದ ಅಗತ್ಯವಿರುವುದಿಲ್ಲ. ಆಳುವ ಮೈತ್ರಿಕೂಟಕ್ಕೆ ರಾಜ್ಯಸಭೆಯಲ್ಲಿ ಬಹುಮತ ಇಲ್ಲದಿರುವುದರಿಂದ ಅದು ಈ ಮಾರ್ಗದ ಮೂಲಕ ಮನಿ ಬಿಲ್‌ಗೆ ಸಂಬಂಧವಿಲ್ಲದ ಶಾಸನಾತ್ಮಕ ತಿದ್ದುಪಡಿಗಳನ್ನು ಮಾಡಿಸಿಕೊಳ್ಳುತ್ತಿದೆ.

ಹಣಕಾಸು ಮಸೂದೆಗೆ ಮಂಡಿಸಲಾದ ಬಹುತೇಕ ತಿದ್ದುಪಡಿಗಳು ಬಜೆಟ್ ಪ್ರಸ್ತಾವನೆಗಳಿಗೆ ಸಂಬಂಧಿಸಿದ್ದಾಗಿರಲಿಲ್ಲ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಆಧಾರ್ ಕಡ್ಡಾಯಗೊಳಿಸುವುದು ಇಂತಹ ತಿದ್ದುಡಿಗಳಲ್ಲೊಂದು; ಆಧಾರ್‌ಗೆ ಪಾನ್ ಕಾರ್ಡ್ ಜೋಡಿಸುವುದು ಇನ್ನೊಂದು; ಇತರ ತೀವ್ರ ಸ್ವರೂಪದ ತಿದ್ದುಪಡಿಗಳೆಂದರೆ, ಕೆಲವು ನಿಯಂತ್ರಣಾತ್ಮಕ ಟ್ರಿಬ್ಯುನಲ್‌ಗಳನ್ನು ರದ್ದು ಮಾಡುವುದು ಅಥವಾ ವಿಲೀನಗೊಳಿಸುವುದು.

ಈ ಎಲ್ಲಾ ಕ್ರಮಗಳು ಸಂಸದೀಯ ಪ್ರಜಾಪ್ರಭುತ್ವ ಮತ್ತು ಶಾಸನ ರೂಪಿಸುವ ರಾಜ್ಯಸಭೆಯ ಅಧಿಕಾರಗಳನ್ನು ಅಣಕಿಸುವಂತಿವೆ.

ಮೋದಿ ಸರಕಾರ, ಸಂಸದೀಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ವ್ಯವಸ್ಥೆಯನ್ನು ಕಾರ್ಪೊರೇಟ್‌ಗಳೇ ವಹಿಸಿಕೊಳ್ಳುವಂತೆ ಹೆಚ್ಚೆಚ್ಚು ಅನುಕೂಲಗಳನ್ನು ಕಲ್ಪಿಸುತ್ತಿರುವಂತೆ ಕಾಣುತ್ತಿದೆ. ಹಿಂದುತ್ವವಾದಿ ಶಕ್ತಿಗಳ ಪೂರ್ಣ ಶಾಮೀಲಿನೊಂದಿಗೆ ಇದನ್ನು ಮಾಡಲಾಗುತ್ತಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಅನು: ವಿಶ್ವ

ರಾಜ್ಯಸಭೆಯಲ್ಲಿ ಮೋದಿ ಸರಕಾರಕ್ಕೆ ಮುಖಭಂಗ

ಮಾರ್ಚ್ 29ರಂದು ರಾಜ್ಯಸಭೆ ಮೋದಿ ಸರಕಾರ ಮಂಡಿಸಿದ ಹಣಕಾಸು ಮಸೂದೆಗೆ ಪ್ರತಿಪಕ್ಷಗಳು ಐದು ತಿದ್ದುಪಡಿಗಳನ್ನು ಶಿಫಾರಸು ಮಾಡುವಲ್ಲಿ ಯಶಸ್ವಿಯಾದವು. ಸಿಪಿಐ(ಎಂ)ನಿಂದ ಸೀತಾರಾಮ್ ಯೆಚೂರಿ ಮತ್ತು ಕಾಂಗ್ರೆಸ್‌ನಿಂದ ದಗ್ವಿಜಯ್ ಸಿಂಗ್ ಸೂಚಿಸಿದ ತಿದ್ದುಪಡಿಗಳನ್ನು ಆಳುವ ಬೆಂಚ್‌ಗಳ ವಿರೋದದ ನಡುವೆಯೂ ಅಂಗೀಕರಿಸಲಾಯಿತು.

ಯೆಚುರಿಯವರು ರಾಜಕೀಯ ಪಕ್ಷಗಳಿಗೆ, ವಾಸ್ತವವಾಗಿ ಆಳುವ ಪಕ್ಷಕ್ಕೆ ಹೇರಳ ಕಾರ್ಪೊರೇಟ್ ಹಣ ಹರಿದು ಬರಲು ಅನುಕೂಲ ಕಲ್ಪಿಸಲು ಕಂಪನಿ ಕಾನೂನನ್ನು ತಿದ್ದುಪಡಿ ಮಾಡುವುದರ ವಿರುದ್ಧ ಎರಡು ತಿದ್ದುಪಡಿಗಳನ್ನು ಮಂಡಿಸಿದರು.

ದಿಗ್ವಿಜಯ್ ಸಿಂಗ್ ಆದಾಯ ತೆರಿಗೆ ಅಧಿಕಾರಿಗಳಿಗೆ ಲಂಗುಲಗಾಮಿಲ್ಲದ ಅಧಿಕಾರಗಳನ್ನು ಕೊಡುವುದರ ವಿರುದ್ಧ ಹಾಗೂ ಧರ್ಮಾರ್ಥ ಸಂಸ್ಥೆಗಳನ್ನು ಕುರಿತಾದ ಮೂರು ತಿದ್ದುಪಡಿಗಳನ್ನು ಮಂಡಿಸಿದರು.

ಈ ತಿದ್ದುಪಡಿಗಳನ್ನು ಬಿಜೆಪಿಯ ಮಿತ್ರಪಕ್ಷವಾದ ಶಿರೋಮಣಿ ಅಕಾಲಿ ದಳ ಸೇರಿದಂತೆ ಎಲ್ಲ ಪ್ರತಿಪಕ್ಷಗಳು ಬೆಂಬಲಿಸಿದರೂ ಮತದಾನದ ವೇಳೆಯಲ್ಲಿ ಟಿಎಂಸಿ ಸದಸ್ಯರು ಸದನದಿಂದ ಹೊರನಡೆದರು, ಎಐಎಡಿಎಂಕೆ ಹಾಗೂ ಬಿಜೆಡಿ ಸದಸ್ಯರು ಗೈರು ಹಾಜರಾದರು. ಆದರೂ ಈ ತಿದ್ದುಪಡಿಗಳು 27 ರಿಂದ 34 ಮತಗಳ ಅಂತರದಲ್ಲಿ ಅಂಗೀಕಾರವಾಗಿ ಸರಕಾರಕ್ಕೆ ಮುಖಭಂಗವಾಯಿತು.

ಆದರೆ ಇದನ್ನು ದುರುದ್ದೇಶಪೂರ್ವಕವಾಗಿಯೇ 'ಮನಿಬಿಲ್' ಎಂದು ತೂರಿಸಿದ್ದರಿಂದಾಗಿ ರಾಜ್ಯಸಭೆ ಈ ಮಸೂದೆಯನ್ನು ತಿರಸ್ಕರಿಸುವಂತಿಲ್ಲ, ಶಿಫಾರಸುಗಳೊಂದಿಗೆ ಲೋಕಸಭೆಗೆ ಹಿಂದಕ್ಕೆ ಕಳಿಸಬಹುದು. ನಿರೀಕ್ಷೆಯಂತೆ ಲೋಕಸಭೆ ಈ ಶಿಫಾರಸುಗಳನ್ನು ಒಪ್ಪದೆ ಮಸೂದೆಯನ್ನು ಸರಕಾರ ಬಯಸಿದ ರೀತಿಯಲ್ಲೇ ಪಾಸು ಮಾಡಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಅದರ ಸಂಸದೀಯ ಪ್ರಜಾಪ್ರಭುತ್ವ-ವಿರೋಧಿ ಚಹರೆ ಬಯಲಾಗಿದೆ.

> ಬಿಜೆಪಿ ಸರಕಾರ ಸಂವಿಧಾನ ಮತ್ತು ಸಂಸತ್ತನ್ನು ಬುಡಮೇಲು ಮಾಡಿ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದೆ.
> –ಸೀತಾರಾಮ್ ಯೆಚುರಿ

"ಸರಕಾರ ಉನ್ನತ ಸ್ಥಾನಗಳಲ್ಲಿ ರಾಜಕೀಯ ಭ್ರಷ್ಟಾಚಾರಕ್ಕೆ ಅನುವು ಮಾಡಿ ಕೊಟ್ಟಿದೆ. ನಾವು ಅದನ್ನು ತಡೆಯಲು ಪ್ರಯತ್ನಿಸಿದೆವು. ಅದಕ್ಕೆ ಮತನೀಡದವರು ತಾವು ಎಲ್ಲಿ ನಿಂತಿದ್ದೇವೆ ಎಂದು ತೋರಿಸಿದ್ದಾರೆ" ಎಂದು ಸೀತಾರಾಮ್ ಯೆಚುರಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

ಬಿಜೆಪಿ ಸರಕಾರ ಸಂವಿಧಾನ ಮತ್ತು ಸಂಸತ್ತನ್ನು ಬುಡಮೇಲು ಮಾಡಿ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿದೆ, ಮತ್ತು ರಾಜಕೀಯ ದೇಣಿಗೆಯನ್ನು ಗುಪ್ತಗೊಳಿಸಿದೆ ಎಂದು ಅವರು ಮುಂದುವರೆದು ಅವರು ಹೇಳಿದ್ದಾರೆ.

ಜಗತ್ತಿನ ಅತ್ಯಂತ ಕ್ರಿಯಾಶೀಲ ನಗರವಾಗಿರುವ ಬೆಂಗಳೂರಿನಲ್ಲಿ ಆಸ್ತಿ ತೆರಿಗೆ ಮೂಲದಿಂದ ನಿರೀಕ್ಷಿಸಿರುವ ಆದಾಯ 3726.25 ಕೋಟಿ ರೂಗಳಾಗಿದೆ. ಅದು ಪ್ರಾಯೋಗಿಕವಾಗಿ ಸಂಗ್ರಹವಾಗುವುದೆ ಎಂಬ ದೊಡ್ಡ ಪ್ರಶ್ನೆ ಎಲ್ಲರದಾಗಿದೆ. ಮೊದಲ ಬಾರಿಗೆ ಮಹಾನಗರದ ಒಟ್ಟು ಆಸ್ತಿಗಳನ್ನು 19 ಲಕ್ಷ ಎಂದು ಅಂದಾಜಿಸಿದೆ. ಕಳೆದ ಸಾಲಿನ 8994 ಕೋಟಿ ರೂಗಳ ಬಜೆಟ್‌ನ ಪರಿಷ್ಕೃತ ವಾಸ್ತವ 31 ಶೇಕಡ ಕಡಿಮೆ ಇತ್ತು ಅಂದರೆ ವಾಸ್ತವದಲ್ಲಿ ಅದು ಕೇವಲ 6819 ಕೋಟಿ ರೂಗಳು ಮಾತ್ರವಾಗಿದೆ ಎಂಬುದು ಇಂದಿನ ವಾಸ್ತವ. ಇಂತಹ ಪರಿಸ್ಥಿತಿಯಲ್ಲಿ ಕಳೆದ ಸಾಲಿನ ಹಲವು ಬಾಕಿ ಯೋಜನೆಗಳು ಮುಂದಿನ ಸಾಲಿಗೂ ಮುಂದುವರಿದಿರುವಾಗ, ಎಲ್ಲರ ಗಮನ ಸೆಳೆದಿದ್ದ ಅಕ್ಕ ಯೋಜನೆಯ ಪ್ರಸ್ತಾವ ಮಾತ್ರ ಬಜೆಟ್‌ನಲ್ಲಿ ಸ್ಥಾನ ಪಡೆದಿಲ್ಲ. ಅಂತೆಯೆ ನಗರದ ಅಸಂಘಟಿತ ಜನವಿಭಾಗಗಳಿಗೆ ವಸತಿ, ಮೂಲ ಸೌಕರ್ಯ ಕಲ್ಪಿಸುವ ಯಾವುದೇ ಯೋಜನೆ ಬಜೆಟ್‌ನಲ್ಲಿ ಇಲ್ಲದಾಗಿದೆ.

ಚುನಾವಣೆಯತ್ತ ಬಿಬಿಎಂಪಿ ಬಜೆಟ್ ಚಿತ್ತ ಈಡೇರುವುದೆ ಅದರ ಭರವಸೆಯ ಮೊತ್ತ

ಕೆ.ಎನ್. ಉಮೇಶ್



2017–2018ರ ಬಿಬಿಎಂಪಿಯಲ್ಲಿನ ಕಾಂಗ್ರೆಸ್ – ಜೆಡಿ(ಎಸ್) ಜಂಟಿ ಆಡಳಿತ ತನ್ನ ಎರಡನೇ ಬಜೆಟನ್ನು ಮಂಡಿಸಿದೆ. ರೂ. 2 ಕೋಟಿ ಉಳಿತಾಯದ ಒಟ್ಟು 9241.04 ಕೋಟಿ ರೂಗಳ ಬಜೆಟ್‌ನ್ನು ಮೈತ್ರಿ ಆಡಳಿತದ ಪರವಾಗಿ ಮಂಡಿಸಿದ್ದಾರೆ. ಹಿಂದಿನ ಬಿಜೆಪಿ ದುರಾಡಳಿತದ ಫಲವಾಗಿ ಬಿಬಿಎಂಪಿಯ ಮೇಲಿದ್ದ 1434 ಕೋಟಿ ರೂಗಳ ಪ್ರಸಕ್ತ ಸಾಲವನ್ನು ಪುನರಚಿಸುವ ಮೂಲಕ 112 ಕೋಟಿ ರೂಗಳನ್ನು ಉಳಿತಾಯ ಮಾಡುವ ಗುರಿಯನ್ನು ಹೊಂದಿದೆ

ರಾಜ್ಯ ಸರ್ಕಾರದ ಬಜೆಟ್‌ನಂತೆಯೇ ಬಿಬಿಎಂಪಿಯ ಬಜೆಟ್ ಸಹಾ ಮುಂಬರುವ ವಿಧಾನಸಭಾ ಚುನಾವಣೆಯತ್ತವೆ ತನ್ನ ಚಿತ್ತವನಿರಿಸಿದೆ. ಆ ನಿಟ್ಟಿನಲ್ಲೆ ತನ್ನ ಒಟ್ಟು ಬಜೆಟ್‌ನ 46 ಶೇಕಡ ಆದಾಯವನ್ನು ರಾಜ್ಯ ಸರ್ಕಾರದ 4249 ಕೋಟಿ ರೂ.ಗಳನ್ನು ಒಟ್ಟು ಅನುದಾನದ ಮೂಲಕ ಪಡೆಯಲು ಮುಂದಾಗಿದೆ. ಅದರ ನಿರೀಕ್ಷೆಯಲ್ಲೆ ರಸ್ತೆ, ಮೂಲ ಸೌಕರ್ಯ ಮತ್ತು ಅದರ ನಿರ್ವಹಣ ಕೆಲಸಗಳಿಗೆ 45 ಶೇ. (4118 ಕೋಟಿ ರೂ) ; ತೆ–ೂಟಗಾರಿಕೆ, ಪಾರ್ಕ್‌ಗಳು ಮತ್ತು ಸಾಮಾಜಿಕ ಅರಣ್ಯೀಕರಣಕ್ಕೆ 15 ಶೇ. (1397 ಕೋಟಿ ರೂ); ಮತ್ತು ಘನ ತ್ಯಾಜ್ಯ ನಿರ್ವಹಣೆಗೆ 10 ಶೇ. (ರೂ. 898 ಕೋಟಿ) ಮೀಸಲಿರಿಸಿದೆ.

ಆದರೆ ಕಳೆದ ಸಾಲಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರದಿಂದ ನಿರೀಕ್ಷಿಸಿದ್ದ ರೂ. 7300 ಕೋಟಿಗಳಲ್ಲಿ ವಾಸ್ತವದಲ್ಲಿ ಬಿಬಿಎಂಪಿಗೆ ಬಂದ ಅನುದಾನವೆಷ್ಟು ಎಂಬ ಪ್ರಶ್ನೆಗೆ ಮಾತ್ರ ಸಮಾದಾನಕರ ಉತ್ತರವಂತೂ ಇಲ್ಲದಾಗಿದೆ. ಜಗತ್ತಿನ ಅತ್ಯಂತ ಕ್ರಿಯಾಶೀಲ ನಗರವಾಗಿರುವ ಬೆಂಗಳೂರಿನಲ್ಲಿ ಆಸ್ತಿ ತೆರಿಗೆ ಮೂಲದಿಂದ ನಿರೀಕ್ಷಿಸಿರುವ ಆದಾಯ 3726.25 ಕೋಟಿ ರೂ.ಗಳಾಗಿದೆ. ಅದು ಪ್ರಾಯೋಗಿಕವಾಗಿ ಸಂಗ್ರಹವಾಗುವುದೇ ಎಂಬ ದೊಡ್ಡ ಪ್ರಶ್ನೆ ಎಲ್ಲರದಾಗಿದೆ.

ಮೊದಲ ಬಾರಿಗೆ ಮಹಾನಗರದ ಒಟ್ಟು ಆಸ್ತಿಗಳನ್ನು 19 ಲಕ್ಷ ಎಂದು ಅಂದಾಜಿಸಿದೆ. ಬಜೆಟ್, ಮಹಾನಗರ ವ್ಯಾಪ್ತಿಯ ಮಾಲ್‌ಗಳು, ಟೆಕ್ ಪಾರ್ಕ್‌ಗಳು, ಕೈಗಾರಿಕಾ ಘಟಕಗಳು ತಮ್ಮ ಆಸ್ತಿಗಳ ಘೋಷಣೆಯನ್ನು ಕಡಿಮೆ ಮಾಡಿ ಘೋಷಿಸಿವೆ ಎಂದು ಟೋಟಲ್ ಸ್ಟೇಷನ್ ಸರ್ವೆ ತೋರಿದೆ ಎಂದಿರುವ ಬಜೆಟ್ ಅಂತಹ ಎಲ್ಲಾ ಆಸ್ತಿಗಳ ಟೋಟಲ್ ಸ್ಟೇಷನ್ ಸರ್ವೆ ನಡೆಸುವುದಾಗಿ ಪ್ರಕಟಿಸಿದೆ. ಅದಕ್ಕಾಗಿ ಪಪ್ರತಿ ಆಸ್ತಿಗೂ "ವಿಶಿಷ್ಟ ಡಿಜಿಟಲ್ ಗುರುತಿನ ಸಂಖ್ಯೆ" ನೀಡುವ ಯೋಜನೆಯನ್ನ ಪ್ರಕಟಿಸಿವೆ. (Unique Digital Identitication Number-UDIN) ಅದಕ್ಕಾಗಿ ಹಣವನ್ನು ಮೀಸಲಿರಿಸಿದೆ. ಬಿಬಿಎಂಪಿ ಕೌನ್ಸಿಲ್ ಸಭೆ ತೀರ್ಮಾನಗಳ ಜಾರಿ ನಿರ್ವಹಣೆಗೆ "ಪೌರವಾಹಿನಿ ತಂಡ" ರಚನೆಯ ಘೋಷಣೆ ಮಾಡಿದೆ.

ಸ್ಟೀಲ್ ಬ್ರಿಡ್ಜ್‌ಗಾಗಿ ಸಾವಿರಾರು ಮರಕ್ಕೆ ಕೊಡಲಿ ಪೆಟ್ಟು ನೀಡಲಿದೆ ಎಂಬ ಟೀಕೆಗೆ ಗು–ರಿಯಾಗಿದ್ದ ರಾಜ್ಯ ಸರ್ಕಾರದ ಅಪಕೀರ್ತಿ ಅಳಿಸಲು ಬಿಬಿಎಂಪಿಗೆ ನೂತನವಾಗಿ ಸೇರ್ಪಡೆ ಆಗಿರುವ ಪ್ರದೇಶಗಳಲ್ಲಿ 210 ನೂತನ ಪಾರ್ಕ್‌ಗಳು, 10 ಲಕ್ಷ ಗಿಡ ನೆಡುವ, ಬಿಬಿಎಂಪಿ ಶಾಲೆ–ಕಾಲೇಜುಗಳಲ್ಲಿ ಟ್ರೀ ಪಾರ್ಕ್‌ಗಳನ್ನು ಸ್ಥಾಪಿಸುವ ಘೋಷಣೆ ಮಾಡಿದೆ. ಗಿಡಗಳನ್ನು ಕೇಳುವ ನಾಗರಿಕರಿಗಾಗಿ ಮೊಬೈಲ್ ಆಪ್ ಸ್ಥಾಪಿಸುವ ಪ್ರಕಟಣೆ ಮಾಡಿದೆ. ಟ್ರೀ ವಾರ್ಡ್‌ನ್ಸ್ ಹಾಗೂ ಸ್ವಯಂ ಸೇವಕರನ್ನು ನೇಮಿಸುವುದಾಗಿ ಘೋಷಿಸಿದೆ.

ಅಂತೆಯೆ ಒತ್ತುವರಿ ತೆರವಿಗಾಗಿ ಕೆಡವಿದ ಕಟ್ಟಡಗಳಿಂದ ಮತ್ತು ಅದರ ಸುತ್ತ ಉಂಟಾಗಿದ್ದ ವಿವಾದಗಳನ್ನು ಮರೆಮಾಚುವ ನಿಟ್ಟಿನಲ್ಲಿ ನಗರ ಕಟ್ಟಡಗಳ ಬೈಲಾಗೆ ತಿದ್ದುಪಡಿ ಮಾಡುವ ಪ್ರಸ್ತಾಪವಿರಿಸಿದೆ. ಅದಕ್ಕೆ ರಾಜ್ಯ ಸರ್ಕಾರದ ಅನುಮೋದನೆ ಬೇಕಾಗಿದೆ. ಹೊಸ ಪ್ರಸ್ತಾಪದಂತೆ ಕಟ್ಟಡ ಯೋಜನೆ ಅನುಮೋದನೆಯನ್ನು ವಾಸ ದೃಡೀಕರಣ ಪ್ರಮಾಣಪತ್ರ ನೀಡಿಕೆಯೊಂದಿಗೆ ಜೋಡಿಸಲು ಮುಂದಾಗಿದೆ. ಅದರಂತೆ ನೆಲಮಹಡಿಯೊಂದಿಗೆ ನಾಲ್ಕು ಮಹಡಿ ಕಟ್ಟಡ ನಿರ್ಮಿಸುವವರು, ನೆಲಮಹಡಿಯನ್ನು ನೆಲಮಹಡಿಯನ್ನು ಬಿಬಿಎಂಪಿ ಹೆಸರಿನಲ್ಲಿ ನೊಂದಾಯಿಸಬೇಕು. ಕಟ್ಟಡ ನಿರ್ಮಾಣ ಅನುಮೋದನೆಯಂತೆ ಕ್ರಮಬದ್ದವಾಗಿದ್ದಲ್ಲಿ ಮಾತ್ರ ಅದರ ಮಾಲೀಕತ್ವವನ್ನು ಅದರ ಮಾಲೀಕರಿಗೆ ವರ್ಗಾಯಿಸಿ ವಾಸ ದೃಡೀಕರಣ ಪ್ರಮಾಣ ಪತ್ರ ನೀಡಲಾಗುವುದಂತೆ. ಇಲ್ಲವಾದಲ್ಲಿ ಇಡಿ ಕಟ್ಟಡವನ್ನು ಬಿಬಿಎಂಪಿ ತನ್ನ ಸುರ್ಪದಿಗೆ ತೆಗೆದುಕೊಳ್ಳುತ್ತದಂತೆ.

ಗಾರ್ಡನ್ ಸಿಟಿಯನ್ನು ಗಾರ್ಬೇಜ್ ಸಿಟಿಯ ಕುಖ್ಯಾತಿಗೆ ತಂದು ನಿಲ್ಲಿಸಿರುವ ಘನತ್ಯಾಜ್ಯ ನಿರ್ವಹಣೆಗೆ 898 ಕೋಟಿ ರೂಗಳನ್ನು ನೀಡಿರುವಾಗಲೆ, 7 ಕೋಟಿ ವೆಚ್ಚದಲ್ಲಿ ಗಾರ್ಬೇಜ್ ಮಾರ್ಷಲ್‌ಗಳು, ರಬ್ಬಿಷ್ ಕಾಪ್ಸ್ ಗಳನ್ನು ನೇಮಿಸಲು ಮುಂದಾಗಿದೆ. 198 ವಾರ್ಡ್‌ಗಳಲ್ಲೂ ಕಸದಿಂದ ಮಾಡಲಾಗುವ ಗೊಬ್ಬರ ಖರೀದಿ ಕೇಂದ್ರಗಳ ಸ್ಥಾನೆಗೆ ಮುಂದಾಗಿವೆ.

ತಮ್ಮ ಜಾಗದಲ್ಲಿ ಸಾರ್ವಜನಿಕವಾಗಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಆಸ್ತಿ ಮಾಲೀಕರಿಗೆ ತೆರಿಗೆ ರಿಯಾಯತಿ ನೀಡಲು ಸಹಾ ಮುಂದಾಗಿದೆ. ಒಟ್ಟಾರೆ ಯಾವುದೇ ಹೊಸ ತೆರಿಗೆ ಇಲ್ಲದ ಬಜೆಟ್ ಎಂಬ ಖ್ಯಾತಿಗೆ ಪಾತ್ರವಾಗಿರುವ ಆಡಳಿತವು ಈ ಹಿಂದೆ–ಯೇ ತ್ಯಾಜ್ಯ ಸೆಸ್ ಹೆಚ್ಚಳದ ಹೊರೆ ಹೊರಿಸಿದೆ ಎಂಬುದನ್ನು ಮರೆಮಾಚಿದಂತಿದೆ ಇಡಿ ಪ್ರಚಾರ.

ಕಳೆದ ಸಾಲಿನ 8994 ಕೋಟಿ ರೂಗಳ ಬಜೆಟ್‌ನ ಪರಿಷ್ಕೃತ ವಾಸ್ತವ 31 ಶೇಕಡ ಕಡಿಮೆ ಇತ್ತು ಅಂದರೆ ವಾಸ್ತವದಲ್ಲಿ ಅದು ಕೇವಲ 6819 ಕೋಟಿ ರೂಗಳು ಮಾತ್ರವಾಗಿದೆ ಎಂಬುದು ಇಂದಿನ ವಾಸ್ತವ. ಇಂತಹ ಪರಿಸ್ಥಿತಿಯಲ್ಲಿ ಕಳೆದ ಸಾಲಿನ ಹಲವು ಬಾಕಿ ಯೋಜನೆಗಳು ಮುಂದಿನ ಸಾಲಿಗೂ ಮುಂದುವರಿದಿರುವಾಗ, ಎಲ್ಲರ ಗಮನ ಸೆಳೆದಿದ್ದ 'ಅಕ್ಕ' (ತೃತೀಯ ಲಿಂಗಿಗಳಿಗೆ ವಿಶೇಷ) ಯೋಜನೆಯ ಪ್ರಸ್ತಾವ ಮಾತ್ರ ಬಜೆಟ್‌ನಲ್ಲಿ ಸ್ಥಾನ ಪಡೆದಿಲ್ಲ. ಅಂತೆಯೆ ನಗರದ ಅಸಂಘಟಿತ ಜನವಿಭಾಗಗಳಿಗೆ ವಸತಿ, ಮೂಲ ಸೌಕರ್ಯ ಕಲ್ಪಿಸುವ ಯಾವುದೇ ಯೋಜನೆ ಬಜೆಟ್‌ನಲ್ಲಿ ಇಲ್ಲದಾಗಿದೆ. ಟೆಂಡರ್ ಶ್ಯೂರ್ ಕಾಮಗಾರಿಯಡಿ ಪ್ರತಿ ಕಿ.ಮಿ.ಗೆ 10 ಕೋಟಿ ರೂ. ವೆಚ್ಚ ಮಾಡುತ್ತಿದ್ದರು ಸಹಾ, ರಾಜ್ಯ ಬಜೆಟ್‌ನಲ್ಲಿ ಅದಕ್ಕಾಗಿ 250 ಕೋಟಿ ರೂಗಳನ್ನು ಮೀಸಲಿರಿಸಿದ್ದರೂ ಕೂಡ, ಟೆಂಡರ್ ಶ್ಯೂರ್ ರಸ್ತೆಗಳು ಒಂದು ವರ್ಷದಲ್ಲಿಯೆ ಕಳಪೆಯಾಗಿ ಮತ್ತೆ ಅಗೆತ–ಕ್ಕೆ ತುತ್ತಾಗಿರುವುದು ಆಡಳಿತದ ಹೆಗ್ಗಳಿಕೆಯ ಪೊಳ್ಳುತನವನ್ನು ತೋರುತ್ತದೆ.

ಒಟ್ಟಾರೆ ಚುನಾವಣೆಯತ್ತ ತನ್ನ ಚಿತ್ತ ಹರಿಸಿದ್ದರೂ ಸಹಾ, ಹಿಂದಿನ ತನ್ನ ಎಲ್ಲಾ ಇತಿಹಾಸವನ್ನು ಸುಳ್ಳಾಗಿಸಿ ತನ್ನ ಬಜೆಟ್‌ನಲ್ಲಿ ಪ್ರಕಟಿಸಿರುವ ಒಟ್ಟು ಮೊತ್ತದ ಭರವಸೆ ಹಾಗೂ ರಾಜ್ಯ ಸರ್ಕಾರದ ಅನುದಾನದ ಭರವಸೆ ನಿಜಾರ್ಥದಲ್ಲಿ ಈಡೇರುವುದೆ ಎಂಬುದನ್ನು ಕಾದು ನೋಡಬೇಕಿದೆ?


ಬಜೆಟ್‌ನಲ್ಲಿ ಸರ್ಕಾರಿ ಅನುದಾನದ ಪಾಲು (₹ ಕೋಟಿಗಳಲ್ಲಿ)

ವರ್ಷ	ಸರ್ಕಾರಿ ಅನುದಾನ	ಬಜೆಟ್ ಗಾತ್ರ	ಶೇಕಡಾವಾರು
2013–14	902	3,093	29
2014–15	1,561	4,205	37
2015–16	2,235	5,246	43
2016–17	3,277	6,819	48
2017–18	4,250	9,243	46

ಲಾಲ್ ಸಲಾಂ ಕಾಮ್ರೇಡ್ ಮದನ ಮಾಸ್ಟರ್

ಕಾಮ್ರೇಡ್ ಮದನ ಮಾಸ್ಟರ್ ರಿಗೆ ಅಂತಿಮ ವಿದಾಯ ನೀಡಲಾಯಿತು. ಗೇಣಿದಾರರು, ಮೂರ್ತೆದಾರರು ಗುಲಾಮರಂತೆ ಬದುಕುವ ಕಾಲಘಟ್ಟದಲ್ಲಿ ತುಳುನಾಡಿನ ಕುಗ್ರಾಮವೊಂದರಲ್ಲಿ ಹುಟ್ಟಿ (ಈಗ ಅದು ದಕ್ಷಿಣ ಕನ್ನಡದ ಗಡಿಗೆ ತಾಗಿಕೊಂಡಿರುವ ಕಾಸರಗೋಡಿನ ಗ್ರಾಮ. ಅಚ್ಚ ಕನ್ನಡನಾಡು.) ತನ್ನ ಹದಿಹರೆಯದಲ್ಲೇ ದಕ್ಷಿಣ ಕರಾವಳಿಯಲ್ಲಿ ಗೇಣಿದಾರರ ನಡುವೆ ಸಮರಶೀಲವಾಗಿ ಹುಟ್ಟಿಕೊಂಡ ಕಮ್ಯುನಿಸ್ಟ್ ಚಳವಳಿಯ ಭಾಗವಾದ ಮದನ ಮಾಸ್ಟರ್ ಪೇಟೆ ಪಟ್ಟಣಗಳ ಸಂಪರ್ಕಗಳೇ ಇಲ್ಲದ ಹಳ್ಳಿಗಾಡಿನಲ್ಲಿ ಶೋಷಿತ ಜನಕೋಟಿಗಳ ಸಂಘಟನೆಗೆ, ಅವರಿಗೆ ಓದು ಬರಹ ಕಲಿಸಲು ಟೊಂಕಕಟ್ಟಿದವರು.

ಗೇಣಿದಾರರು ಜಮೀನ್ದಾರರ ವಿರುದ್ಧ ಹೊಲ,ಗದ್ದೆಗಳಲ್ಲಿ ಕೆಂಬಾವುಟ ಊರಿ ದಂಗೆ ಎದ್ದಾಗ, ಅದರ ಜೊತೆಯಲ್ಲಿಯೇ ಜಮೀನ್ದಾರರ ಆಶ್ರಯದಾತರಾದ ವಸಾಹತುಶಾಹಿ ಬ್ರಿಟಿಷರ ವಿರುದ್ದ ಸ್ವಾತಂತ್ರ್ಯ ಹೋರಾಟ ನಡೆಸಿದಾಗ ಅದರ ಜೊತೆಯಲ್ಲಿದ್ದವರು ಮದನ ಮಾಸ್ಟರ್.



ಇಂಡಿಯಾದ ರಾಜಕೀಯ ಸ್ವಾತಂತ್ರ್ಯ, ಗೇಣಿದಾರರು ಭೂಮಿ ಪಡೆದದ್ದು, ಮೂರ್ತೆದಾರರು ಸ್ವಾಭಿಮಾನಿಗಳಾದದ್ದು. ಆ ನಂತರದ ದಿನಗಳಲ್ಲಿ ಕೆಂಬಾವುಟದ ಹೋರಾಟದ ದಿಂದ ಭೂಮಿಪಡೆದ ನಂತರದ ತಲೆಮಾರುಗಳು ಮತೀಯ ರಾಜಕಾರಣದ ಕಾಲಾಳುಗಳಾಗಿ ತುಳುನಾಡಿನಲ್ಲಿ ಅದೇ ಶೋಷಕ ವ್ಯವಸ್ಥೆಯ ಬಾವುಟ ಹಿಡಿದದ್ದು. ಹೀಗೆ ಒಂದು ಶತಮಾನದ ಬೆಳವಣಿಗೆ, ಪಲ್ಲಟ, ಸಾಧಕ, ಬಾಧಕಗೆಲ್ಲವುದಕ್ಕು ಸಾಕ್ಷಿಯಾಗಿ ಬದುಕಿದ ಹಿರಿಯ ಜೀವ ಕಣ್ಮರೆ–ಯಾದ ಸಂದರ್ಭ, ವಿದಾಯದ ಮೆರವಣಿಗೆ ಈ ಕಾಲಘಟ್ಟದ ಮೌಲ್ಯಗಳನ್ನು ಸಂಕೇತಿಸುವಂತಿತ್ತು.

ಲಾಲ್ ಸಲಾಂ ಕಾಮ್ರೇಡ್ ಮದನ ಮಾಸ್ಟರ್. ನಿಮ್ಮ ಕೊಡುಗೆ, ಸಾಧನೆಗಳನ್ನು ಚಳವಳಿ ಸದಾ ನೆನಪಿಸಿಕೊಳ್ಳುತ್ತದೆ.

ವಿಧಾನಸಭಾ ಚುನಾವಣೆಗಳು 2017 ಮತ್ತು ನಂತರ

ಸ್ಮಶಾನ#ಕಬ್ರಿಸ್ತಾನದಿಂದ ಹಿಂಬಾಗಿಲಿಂದ ಸರಕಾರದ ವರೆಗೆ –ಎಲ್ಲವೂ 'ನವಭಾರತ ನಿರ್ಮಾಣ'ಕ್ಕಾಗಿ

ಬಹುನಿರೀಕ್ಷಿತ 2017ರ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಬಂದು ಐದು ರಾಜ್ಯಗಳಲ್ಲಿ ಹೊಸ ಸರಕಾರಗಳು ರಚನೆಗೊಂಡಿವೆ. ಇವು ಎಲ್ಲರನ್ನು ಜತೆಗೊಯ್ಯುವ ಸರಕಾರಗಳು, ಈ ಮೂಲಕ ನವ ಭಾರತ ಮೂಡಿಬರುತ್ತಿದೆ ಎಂದಿದ್ದಾರೆ ಮಾನ್ಯ ಪ್ರಧಾನ ಮಂತ್ರಿಗಳು ಉತ್ತರಪ್ರದೇಶದಲ್ಲಿ 'ಅಭೂತಪೂರ್ವ' ಗೆಲುವು ಪಡೆದ ಹುರುಪಿನಲ್ಲಿ. ಈ ಸರಕಾರಗಳು ರಚನೆಗೊಂಡ ರೀತಿ ಮತ್ತು ನಂತರದ ಘಟನೆಗಳು, ವಿಶೇಷವಾಗಿ ಉತ್ತರಪ್ರದೇಶದಲ್ಲಿನ ಘಟನೆಗಳು ಇದನ್ನು ಸಮರ್ಥಿಸುತ್ತವೆಯೇ? ಒಂದು ನೋಟ ಇಲ್ಲಿದೆ.



ಉತ್ತರಪ್ರದೇಶದ 'ಅಭೂತಪೂರ್ವ' ಫಲಿತಾಂಶದ ಹಿಂದೆ–ಮುಂದೆ

ಬಿಜೆಪಿ ಮತ್ತು ಅದರ ಎರಡು ಮಿತ್ರಪಕ್ಷಗಳು 403ರಲ್ಲಿ 325 ಸೀಟುಗಳನ್ನು ಗೆದ್ದುಕೊಂಡ ಭಾರೀ ವಿಜಯದ ಒಂದು ವಾರದ ವಿಳಂಬದ ನಂತರ ಅಲ್ಲಿ ಕೊನೆಗೂ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಲಾಯಿತು. ಅವರ ಜತೆಗೆ ಇಬ್ಬರನ್ನು ಉಪಮುಖ್ಯಮಂತ್ರಿಗಳಾಗಿಯೂ ಆರಿಸಲಾಯಿತು. ಆದರೆ ಈ ಮೂವರೂ ಈ ಚುನಾವಣೆಗಳಲ್ಲಿ ಉತ್ತರಪ್ರದೇಶದ ಜನತೆ ಆರಿಸಿದ ಶಾಸಕರಲ್ಲ ಎಂಬುದು ಗಮನಾರ್ಹ.

ಈ ಬಗ್ಗೆ ಮಾಧ್ಯಮಗಳಲ್ಲಿ ವಿಶ್ಲೇಷಣೆಗಳು ಪ್ರಕಟವಾಗುತ್ತಲೇ ಇವೆ. ಇವುಗಳೊಂದಿಗೆ ಉತ್ತರಪ್ರದೇಶದ 2017ರ ಫಲಿತಾಂಶಗಳು ನಿಜವಾಗಿಯೂ ಅಭೂತಪೂರ್ವವೇ, ಬಹಳಷ್ಟು ಪ್ರಚಾರವಾಗಿರುವಂತೆ ಅವು ಪ್ರತಿಪಕ್ಷಗಳು ಧೂಳೀಪಟವಾಗಿರುವುದನ್ನು ಸೂಚಿಸುತ್ತವೆಯೇ ಎಂಬ ಬಗ್ಗೆಯೂ ವಿಶ್ಲೇಷಣೆಗಳು ನಡೆಯುತ್ತಿವೆ.

ನಿಜ, ನಮ್ಮ ದೇಶದಲ್ಲಿನ ಈಗಿನ ಚುನಾವಣಾ ಪದ್ಧತಿಯಲ್ಲಿ ಈ ವಿಜಯ ಅಭೂತಪೂರ್ವ.

* 2012ರಲ್ಲಿ ಕೇವಲ 47 ಸೀಟುಗಳನ್ನು ಗೆದ್ದು 15% ಮತಗಳಿಸಿದ್ದ ಬಿಜೆಪಿ ಈ ಭಾರಿ 39.7% ಮತ ಗಳಿಸಿ 312 ಸೀಟುಗಳನ್ನು ಪಡೆದಿದೆ.
* 29% ಮತ ಗಳಿಸಿ 224 ಸೀಟುಗಳನ್ನು ಗಳಿಸಿದ್ದ ಎಸ್‌ಪಿ ಗಳಿಕೆ ಈ ಬಾರಿ 47ಕ್ಕೆ ಇಳಿದಿದೆ. ಮತಗಳಿಕೆ 22%ಕ್ಕೆ ಇಳಿದಿದೆ. ಅಂದರೆ 7% ಇಳಿಕೆ.
* 26% ಮತ ಗಳಿಸಿ 80 ಸಿಟುಗಳನ್ನು ಪಡೆದಿದ್ದ ಬಿಎಸ್‌ಪಿಯ ಗಳಿಕೆ 19ಕ್ಕೆ ಇಳಿದಿದೆ. ಮತಗಳಿಕೆ 22% ಅಂದರೆ 4% ಇಳಿಕೆ.
* 12% ಮತಗಳಿಸಿ 28 ಸೀಟುಗಳನ್ನು ಪಡೆದಿದ್ದ ಕಾಂಗ್ರೆಸ್ ಗಳಿಕೆ 7ಕ್ಕೆ ಇಳಿದಿದೆ.. ಆದರೆ ಮತಗಳಿಕೆಯಲ್ಲಿ ಇಳಿಕೆ 6%.

ಇನ್ನು 2014ರ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ ಮತಗಳಿಕೆಯ % ಪ್ರಮಾಣ ಹೀಗಿದೆ:

	2014	2017
ಬಿಜೆಪಿ	42.3	39.5
ಎಸ್‌ಪಿ	22.2	21.8
ಬಿಎಸ್‌ಪಿ	19.6	22.2
ಕಾಂಗ್ರೆಸ್	7.5	6.2

ಅಂದರೆ 2014ರ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ 'ಅಭೂತಪೂರ್ವ' ಎಂಬುದು ಅರ್ಥಹೀನವಾಗುತ್ತದೆ. ವಾಸ್ತವವಾಗಿ ಎಸ್‌ಪಿ ಮತಗಳಿಕೆ ಕೇವಲ 0.4% ಇಳಿದಿದೆ, ಕಾಂಗ್ರೆಸಿನದ್ದು 1.3% ಹಾಗೂ ಬಿಜೆಪಿಯದ್ದು ಎಲ್ಲಕ್ಕಿಂತ ಹೆಚ್ಚು 2.8% ಇಳಿಕೆ. ತದ್ವಿರುದ್ಧವಾಗಿ ಬಿಎಸ್‌ಪಿಯ ಮತಗಳಿಕೆ 2.6% ದಷ್ಟು ಹೆಚ್ಚಿದೆ.

ಒಟ್ಟು ಮತಗಳಿಕೆಯಲ್ಲೂ ಈ 'ಅಭೂತಪೂರ್ವ' ವಿಜಯದಲ್ಲಿ ಬಿಜೆಪಿ 2014ರ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ 84,185 ಮತಗಳನ್ನು ಹೆಚ್ಚಿಗೆ ಪಡೆದಿದೆ. ಎಸ್‌ಪಿ 9.34ಲಕ್ಷ ಹೆಚ್ಚು ಮತಗಳನ್ನು ಪಡೆದಿದೆ ಹಾಗೂ ಬಿಎಸ್‌ಪಿ 32ಲಕ್ಷ ಹೆಚ್ಚು ಮತಗಳನ್ನು ಪಡೆದಿದೆ.

ಅಂದರೆ ಪ್ರಧಾನಮಂತ್ರಿಗಳ ಮ್ಯಾರಥಾನ್ ಪ್ರಚಾರದಿಂದ ಧೂಳೀಪಟವಾಗಿವೆ ಎಂದಿರುವ ಪಕ್ಷಗಳ ಜನಬೆಂಬಲ 2014ಕ್ಕೆ ಹೋಲಿಸಿದರೆ ಕಡಿಮೆಯಾಗುವ ಬದಲು ವಾಸ್ತವವಾಗಿ ಹೆಚ್ಚಿದೆ.

ಆದರೂ ಬಿಜೆಪಿ ಈ 'ಅಭೂತಪೂರ್ವ' ವಿಜಯ ಗಳಿಸಿದ್ದರೆ ಅದು ಒಂದೆಡೆ ವಿವಿಧ ಜಾತಿ ಗುಂಪುಗಳನ್ನು ಓಲೈಸಿ ಅವನ್ನು ಎಸ್‌ಪಿ ಮತ್ತು ಬಿಎಸ್‌ಪಿಗೆ ಎದುರಾಗಿ ನಿಲ್ಲಿಸಿ, ಇನ್ನೊಂದೆಡೆಯಲ್ಲಿ ಮುಸ್ಲಿಮರ ವಿರುದ್ಧ ಲಂಗುಲಗಾಮಿಲ್ಲದ ಅಪಪ್ರಚಾರ ನಡೆಸಿ ಹಿಂದೆಂದೂ ಕಾಣದಷ್ಟು ಧ್ರುವೀಕರಣ ಮಾಡಿ ನಮ್ಮ ದೋಷಪೂರ್ಣ ಚುನಾವಣಾ ವ್ಯವಸ್ಥೆಯ ಪೂರ್ಣ ಪ್ರಯೋಜನ ಗಿಟ್ಟಿಸುವ ಮೂಲಕ ಎಂಬುದು ಸ್ಪಷ್ಟ.


ಡಿ.ಉಮಾಪತಿಯವರು (ಪ್ರಜಾವಾಣಿ, ಮಾರ್ಚ್20) ಈ ಕೆಳಗಿನ ಮಾಹಿತಿಯನ್ನು ಕಲೆ ಹಾಕಿದ್ದಾರೆ.

* ಎಸ್‌ಪಿ+ಕಾಂಗ್ರೆಸ್ ಬಿಜೆಪಿಗೆ ಸೋತ 203 ಸೀಟುಗಳಲ್ಲಿ ಎರಡನೇ ಸ್ಥಾನದಲ್ಲಿವೆ
* ಬಿಎಸ್‌ಪಿ 116 ಸೀಟುಗಳಲ್ಲಿ ಎರಡನೇ ಸ್ಥಾನದಲ್ಲಿವೆ,
* ಬಿಜೆಪಿ ಗೆದ್ದ 198 ಸೀಟುಗಳಲ್ಲಿ ಈ ಎರಡು ಪಕ್ಷಗಳು ಗಳಿಸಿದ ಮತಗಳ ಮೊತ್ತ ಬಿಜೆಪಿ ಗಳಿಕೆಗಿಂತ ಹೆಚ್ಚು.

ಈ ಲೆಕ್ಕಾಚಾರದ ಪ್ರಕಾರ ಬಿಹಾರದಂತೆ 'ಮಹಾಕೂಟ' ಏರ್ಪಟ್ಟಿದ್ದರೆ ಬಿಜೆಪಿಯ ಕೋಮುಧ್ರುವೀಕರಣ ಫಲ ಕೊಡುತ್ತಿರಲಿಲ್ಲ, ಪ್ರಧಾನ ಮಂತ್ರಿಗಳ ಮಹಾಪ್ರಯತ್ನದ ಹೊರತಾಗಿಯೂ 125ಕ್ಕಿಂತ ಹೆಚ್ಚು ಸೀಟುಗಳು ಸಿಗುತ್ತಿರಲಿಲ್ಲ ಎಂದು ಅವರು ಹೇಳುತ್ತಾರೆ.

ನಿಜ. ಇದೀಗ 'ರೆ'ಗಳ ಪ್ರಶ್ನೆ. ಉತ್ತರಪ್ರದೇಶದಲ್ಲಿ 'ಸವರ್ಣೀಯರ ಪ್ರಾಬಲ್ಯವನ್ನು ಮತ್ತೆ ಸ್ಥಾಪಿಸಲು ಸಾಧ್ಯವಾದರೆ ಅಲ್ಪಸಂಖ್ಯಾತರನ್ನು ಮೂಲೆಗುಂಪು ಮಾಡಬಹುದು ಎಂಬ ಬಿಜೆಪಿ/ಆರೆಸ್ಸೆಸ್ ಲೆಕ್ಕಾಚಾರ ಈ ಬಾರಿ ಯಶಸ್ವಿಯಾಗಿದೆ. ಆದರೆ ಬಿಜೆಪಿಯ ಮುಂದೆ ಈಗಿರುವ ಸವಾಲೆಂದರೆ ಮೇಲ್ಜಾತಿಗಳು, ಅತ್ಯಂತ ಹಿಂದುಳಿದ ಜಾತಿಗಳು ಮತ್ತು ನಿರ್ಬಲ ದಲಿತ ವಿಭಾಗಗಳನ್ನು ಸೇರಿಸಿ ಕಟ್ಟಿದ ಈ ಸೌಧವನ್ನು ಮುಂದಿನ ಚುನಾವಣೆಯ ವರೆಗೆ ಉಳಿಸಿಕೊಳ್ಳುವುದು ಎನ್ನುತ್ತಾರೆ ಇನ್ನೊಬ್ಬ ರಾಜಕೀಯ ವಿಶ್ಲೇಷಕರಾದ ರಾಧಿಕಾ ರಾಮಶೇಷನ್(ಇಪಿಡಬ್ಲ್ಯು, ಮಾರ್ಚ್25).

ಈ ದಿಕ್ಕಿನಲ್ಲಿ ಬಿಜೆಪಿ ಆಗಲೇ ಹೆಜ್ಜೆಯಿಟ್ಟಿದೆ. ಹೊಸ ಬಿಜೆಪಿ ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಬಿಜೆಪಿ ಪ್ರಣಾಳಿಕೆಯನ್ನು ಜಾರಿ ಮಾಡುವ ಹೆಸರಲ್ಲಿ ಗೋಮಾಂಸ ನಿಷೇಧವನ್ನು ಜಾರಿಗೊಳಿಸುವ ಹೆಸರಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಆರಂಭವಾಗಿವೆ, ರಾಜ್ಯದ ಹೈಕೋರ್ಟ್ ಕೂಡ ರೇಗುವಂತಾಗಿದೆ, ರೋಮಿಯೋ–ವಿರೋಧಿ ಪೋಲಿಸ್‌ಗಿರಿಯನ್ನೂ ಆರಂಭಿಸಲಾಗಿದೆ. ಆದರೆ ಆದರೆ ಪ್ರಧಾನ ಮಂತ್ರಿಗಳು ಚುನಾವಣಾ ಪ್ರಚಾರದ ವೇಳೆಯಲ್ಲಿ ಸಾರಿ ಸಾರಿ ನೀಡಿರುವ ರೈತರ ಸಾಲಮನ್ನಾದ ವಚನದ ನೆನಪೂ ಹೊಸ ಬಿಜೆಪಿ ಸರಕಾರಕ್ಕೆ ಇದ್ದಂತಿಲ್ಲ.



ವ್ಯಂಗ್ಯಚಿತ್ರ: ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

'ಕಾಂಗ್ರೆಸ್‌ಮುಕ್ತ' ಉತ್ತರಾಖಂಡದ ಬದಲು 'ಕಾಂಗ್ರೆಸ್‌ಯುಕ್ತ' ಬಿಜೆಪಿ ಸರಕಾರ

ವಾಜಪೇಯಿ–ಅಡ್ವಾಣಿ ಕಾಲದಲ್ಲಿ 'ಭಿನ್ನ ಮಾದರಿ ಪಕ್ಷ' ಎಂಬ ಬಿಜೆಪಿ ಘೋಷಣೆ ಈಗ ಮೋದಿ–ಶಾ ಕಾಲದಲ್ಲಿ 'ಕಾಂಗ್ರೆಸ್‌ಮುಕ್ತ ಭಾರತ' ಎಂದು ಬದಲಾಗಿದೆ. ಆದರೆ ಸದ್ಯಕ್ಕಂತೂ ಅದು ಕಾಂಗ್ರೆಸ್‌ಯುಕ್ತ ಬಿಜೆಪಿಯ ಘಟ್ಟದಲ್ಲಿದೆ ಎಂದೊಬ್ಬ ರಾಜಕೀಯ ವೀಕ್ಷಕರು ಹೇಳಿದ್ದಾರೆ. ಈ ಬಾರಿ ಅದು ಭಾರೀ ವಿಜಯಗಳಿಸಿರುವ ಉತ್ತರಾಖಂಡ ಇದ–ಕ್ಕೊಂದು ಜ್ವಲಂತ ಉದಾಹರಣೆಯಂತಿದೆ.

ಉತ್ತರಾಖಂಡ ವಿಧಾನಸಭೆಯ 70 ಸೀಟುಗಳಲ್ಲಿ ಬಿಜೆಪಿ 15ನ್ನು ಇತ್ತೀಚಿನ ವರೆಗೂ ಕಾಂಗ್ರೆಸ್‌ನಲ್ಲಿದ್ದವರಿಗೆ ಕೊಟ್ಟಿತ್ತು. ಎರಡನೇ ಸ್ಥಾನಕ್ಕಿಳಿದ ಮಣಿಪುರ ಮತ್ತು ಗೋವದಲ್ಲಿ ತಕ್ಷಣವೇ ಮುಖ್ಯಮಂತ್ರಿ ಗಳನ್ನು ಆಯ್ಕೆ ಮಾಡಿದ ಪಕ್ಷಕ್ಕೆ ಭಾರೀ ಬಹುಮತ ಪಡೆದ ಈ ರಾಜ್ಯದ ಮುಖ್ಯಮಂತ್ರಿಯನ್ನು ಆರಿಸಲು ಒಂದು ವಾರ ಬೇಕಾಯಿತು. ಕೊನೆಗೂ ಅದು ಆಯ್ಕೆ ಮಾಡಿದ ಕಟ್ಟಾ ಆರೆಸ್ಸೆಸ್ಸಿಗ ತ್ರಿವೇಂದ್ರ ಸಿಂಗ್ ರಾವತ್ 'ಎಂದೂ ತನ್ನ ನಿಷ್ಠೆಯನ್ನು ಬದಲಿಸಿದವರಲ್ಲ' ಎಂದು ಅವರನ್ನು ಅಭಿನಂದಿಸುತ್ತ ಕೇಂದ್ರ ಗೃಹಮಂತ್ರಿಗಳೂ ಆಗಿರುವ ಹಿರಿಯ ಬಿಜೆಪಿ ಮುಖಂಡ ರಾಜನಾಥ್ ಸಿಂಗ್ ಹೇಳಿರುವುದು ಅವರ ಜತೆಗೆ ಪ್ರತಿಜ್ಞೆ ಸ್ವೀಕರಿಸಿದ ಎಂಟು ಮಂತ್ರಿಗಳಲ್ಲಿ ಐದು ಮಂದಿ ಇನ್ನೂ ಬಹಳಷ್ಟೇನೂ ಮಾಜಿಯಾಗಿರದ ಕಾಂಗ್ರೆಸ್ ಮುಖಂಡರಾಗಿದ್ದವರು ಎಂಬಂತಹ ಸಂದರ್ಭದಲ್ಲಿ ಅರ್ಥಪೂರ್ಣ.

ಕಳೆದ ಚುನಾವಣೆಗಳಲ್ಲಿ 32 ಸಿಟುಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದ ಕಾಂಗ್ರೆಸ್ ಪಕ್ಷ ಬಿಎಸ್‌ಪಿ, ಯುಕೆಡಿ ಮತ್ತು ಪಕ್ಷೇತರರ ಬೆಂಬಲದಿಂದ ವಿಜಯ ಬಹುಗುಣ ನೇತೃತ್ವದಲ್ಲಿ ಸರಕಾರ ರಚಿಸಿತ್ತು. ಕೇವಲ 1 ಸೀಟು ಕಡಿಮೆ ಗಳಿಸಿದ್ದ ಬಿಜೆಪಿ ಪ್ರತಿಪಕ್ಷವಾಗಬೇಕಾಯಿತು. ಆದರೆ 2013ರಲ್ಲಿ ರಾಜ್ಯವನ್ನು ತಲ್ಲಣಗೊಳಿಸಿದ ಪ್ರವಾಹ ಪೀಡಿತರಿಗೆ ಪರಿಹಾರ ಒದಗಿಸುವಲ್ಲಿನ ಅವ್ಯವಸ್ಥೆ ಮತ್ತು ಭ್ರಷ್ಟಾಚಾರದ ಆರೋಪದಲ್ಲಿ 2014ರಲ್ಲಿ ವಿಜಯ ಬಹುಗುಣ ಸ್ಥಾನದಲ್ಲಿ ಹರೀಶ್ ರಾವುತ್ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಆ ಮಾಜೀ ಕಾಂಗ್ರೆಸ್ ಮುಖ್ಯಮಂತ್ರಿ ಮುಂದೆ ಕಾಂಗ್ರೆಸ್ ಸರಕಾರದ ವಿರುದ್ಧ ಬಂಡಾಯದ ನೇತೃತ್ವ ವಹಿಸಿದರು. ಮಾರ್ಚ್ 2016 ರಲ್ಲಿ

ಪುಟ 10 ನೋಡಿ

ಪಂಜಾಬ್:ಮೋದಿ ಅಲೆಯನೇರಲಿಲ್ಲ, ನೋಟುರದ್ಧತಿಗೂ ತಿರಸ್ಕಾರ

ಪಂಜಾಬಿನಲ್ಲಿ ಕಾಂಗ್ರೆಸ್‌ನ ಭಾರೀ ಗೆಲುವು ಮತ್ತು ಅಧಿಕಾರಸ್ಥ ಅಕಾಲಿ–ಬಿಜೆಪಿ ಕೂಟದ ಭಾರೀ ಸೋಲು ಮೋದಿಯವರ ನೋಟುರದ್ಧತಿಯ 'ಧೀರಕ್ರಮ'ಕ್ಕೆ ಮತ್ತು ಅವರ ಹೊಸ ಮಾದರಿ ರಾಜಕಾರಣಕ್ಕೆ ದೇಶಾದ್ಯಂತ ಅನುಮೋದನೆಯಿದೆ ಎಂಬ ಮಿಥ್ಯೆಯನ್ನು ಒಡೆದಿದೆ.

ಕಾಂಗ್ರೆಸ್ 117ರಲ್ಲಿ 77 ಸೀಟುಗಳನ್ನು ಗೆದ್ದಿದೆ. ಕಳೆದ ಬಾರಿ ಒಟ್ಟು 68 ಸ್ಥಾನಗಳಲ್ಲಿ ಗೆದ್ದು ಸರಕಾರ ರಚಿಸಿದ್ದ ಶಿರೋಮಣಿ ಅಕಾಲಿ ದಳ(ಎಸ್‌ಎಡಿ)–ಬಿಜೆಪಿ ಕೂಟದ ಬಲ ಈ ಬಾರಿ 18ಕ್ಕೆ ಇಳಿದಿದೆ. ಕಳೆದ ಬಾರಿ 56 ಸೀಟುಗಳನ್ನು ಪಡೆದಿದ್ದ ಎಸ್‌ಎಡಿ 15ಕ್ಕೆ ಇಳಿದರೆ, ಬಿಜೆಪಿಯ12 ಈ ಬಾರಿ 3ಕ್ಕೆ ಇಳಿದಿದೆ. ಕಾಂಗ್ರೆಸ್ ಮತ್ತು ಅಧಿಕಾರಸ್ಥ ಕೂಟಕ್ಕೆ ಪ್ರಬಲ ಸವಾಲಾಗಿದ್ದ ಆಮ್‌ಆದ್ಮಿ ಪಾರ್ಟಿಯ ಸ್ಪರ್ಧೆಯೂ ಬೇರೆಡೆಗಳಂತೆ ಬಿಜೆಪಿ ಕೂಟಕ್ಕೆ ನೆರವಾಗಲಿಲ್ಲ.

ನಿಜ, ಬೇರೆಡೆಗಳಂತೆ ಮತಗಳಿಕೆಗೂ ಸೀಟುಗಳಿಕೆಗೂ ಇರುವ ಅಪಾರ ಅಂತರ ಇಲ್ಲಿಯೂ ಕಾಣಬಂದಿದೆ. ಮೊದಲ ಬಾರಿಗೆ ಸ್ಪರ್ಧಿಸಿ ನಿರೀಕ್ಷೆಯಂತೆ ಭಾರೀ ಗೆಲುವು ಸಾಧಿಸದಿದ್ದರೂ 20 ಸೀಟುಗಳನ್ನು ಪಡೆದ ಆಮ್ ಆದ್ಮಿ ಪಾರ್ಟಿ 23.7% ಮತಗಳಿಸಿದೆ. ಇದರಿಂದಾಗಿ ಮೂರನೇ ಎರಡು ಬಹುಮತ ಪಡೆದ ಕಾಂಗ್ರೆಸ್‌ನ ಮತಗಳಿಕೆಯೂ ಕಳೆದ ಬಾರಿಗೆ ಹೋಲಿಸಿದರೆ ಏರುವ ಬದಲು 1.4% ದಷ್ಟು ಇಳಿದಿದೆ. ಈ ಬಾರಿ ಅದು 38.5% ಮತ ಗಳಿಸಿದೆ. ಎಸ್‌ಎಡಿ ಮತಗಳಿಕೆ 25.2% ಗೆಇಳಿದೆ, ಕಳೆದ ಬಾರಿಗೆ ಹೋಲಿಸಿದರೆ 9.4%ದಷ್ಟು ಇಳಿಕೆಯಾಗಿದೆ. 5.4% ಮತಗಳಿಸಿರುವ ಬಿಜೆಪಿ ಕಳೆದ ಬಾರಿಗೆ ಹೋಲಿಸಿದರೆ ಕಳಕೊಂಡದ್ದು ಕೇವಲ1.8%ವಾದರೂ 9 ಸೀಟುಗಳನ್ನು ಕಳಕೊಳ್ಳಬೇಕಾಯಿತು.

ನೋಟುರದ್ಧತಿಗಾಗಿ ನನ್ನನ್ನು ಶಿಕ್ಷಿಸಬೇಡಿ, ನಾನು ಬೇರೆ ಬಹಳಷ್ಟು ಕೆಲಸ ಮಾಡಿದ್ದೇನೆ ಎಂದು ಬಿಜೆಪಿ ಮಂತ್ರಿಯೊಬ್ಬರು ಚುನಾವಣಾ ಪ್ರಚಾರದ ವೇಳೆಗೆ ಗೋಗರೆದದ್ದು ದೊಡ್ಡ ಸುದ್ದಿಯಾಗಿತ್ತು. ಆತ ಸೋತಿದ್ದಾರೆ. ಪಂಜಾಬಿನಲ್ಲಿ ಗದ್ದೆಗಳಲ್ಲಿ ಭತ್ತದ ಕಟಾವು ಆಗಿ ಖರೀದಿಗೆ ಸಿದ್ಧವಾಗಿದ್ದ ಸಮಯದಲ್ಲಿ ಬಂದ ನೋಟುರದ್ಧತಿ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಬಹಳಷ್ಟು ಕಷ್ಟ–ಕೋಟಲೆಗಳನ್ನು ಸೃಷ್ಟಿಸಿತು. ಆದರೂ ಚುನಾವಣಾ ಪ್ರಚಾರದ ವೇಳೆಯಲ್ಲಿ ಅದು ಒಂದು ಪ್ರಮುಖ ಪ್ರಶ್ನೆಯಾಗಲಿಲ್ಲ. ಆಳುವ ಕೂಟದ ಸೋಲಿಗೆ ಪ್ರಮುಖ ಕಾರಣವೇನೂ ಆಗಿರಲಿಲ್ಲ, ಹಲವು ಕಾರಣಗಳಲ್ಲಿ ಒಂದಾಗಿತ್ತಷ್ಟೇ ಎಂದು ರಾಜಕೀಯ ವೀಕ್ಷಕರು ಹೇಳುತ್ತಾರೆ. ಏಕೆಂದರೆ ಎಸ್‌ಎಡಿ–ಬಿಜೆಪಿ ಕೂಟವನ್ನು ಸೋಲಿಸಲು ಅದರ ದುರಾಡಳಿತದ ಇನ್ನೂ ಬಹಳಷ್ಟು ಅಂಶಗಳಿದ್ದವು.

> ನೋಟುರದ್ಧತಿಗಾಗಿ ನನ್ನನ್ನು ಶಿಕ್ಷಿಸಬೇಡಿ, ನಾನು ಬೇರೆ ಬಹಳಷ್ಟು ಕೆಲಸ ಮಾಡಿದ್ದೇನೆ ಎಂದು ಬಿಜೆಪಿ ಮಂತ್ರಿಯೊಬ್ಬರು ಚುನಾವಣಾ ಪ್ರಚಾರದ ವೇಳೆಗೆ ಗೋಗರೆದದ್ದು ದೊಡ್ಡ ಸುದ್ದಿಯಾಗಿತ್ತು. ಆತ ಸೋತಿದ್ದಾರೆ. ಪಂಜಾಬಿನಲ್ಲಿ ಗದ್ದೆಗಳಲ್ಲಿ ಭತ್ತದ ಕಟಾವು ಆಗಿ ಖರೀದಿಗೆ ಸಿದ್ಧವಾಗಿದ್ದ ಸಮಯದಲ್ಲಿ ಬಂದ ನೋಟುರದ್ಧತಿ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಬಹಳಷ್ಟು ಕಷ್ಟ–ಕೋಟಲೆಗಳನ್ನು ಸೃಷ್ಟಿಸಿತು. ಆದರೂ ಚುನಾವಣಾ ಪ್ರಚಾರದ ವೇಳೆಯಲ್ಲಿ ಅದು ಒಂದು ಪ್ರಮುಖ ಪ್ರಶ್ನೆಯಾಗಲಿಲ್ಲ. ಏಕೆಂದರೆ ಎಸ್‌ಎಡಿ–ಬಿಜೆಪಿ ಕೂಟವನ್ನು ಟೀಕಿಸಲುಕಾಂಗ್ರೆಸ್ ಮತ್ತು ಆಪ್ ಪಕ್ಷಕ್ಕೆ ಅದರ ದುರಾಡಳಿತದ ಇನ್ನೂ ಬಹಳಷ್ಟು ಅಂಶಗಳಿದ್ದವು.

ಅದರಲ್ಲಿ ಒಂದು ಮುಖ್ಯ ಕಾರಣ ಕುಟುಂಬ ರಾಜಕಾರಣ. ಕಾಂಗ್ರೆಸ್‌ನದ್ದು ಕುಟುಂಬ ರಾಜ–ಕಾರಣ ಎಂದು ಟೀಕಿಸುವ ಬಿಜೆಪಿ ಪಂಜಾಬಿನಲ್ಲಿ ಕುಟುಂಬ ರಾಜಕಾರಣದ ಅತಿ ಕೆಟ್ಟ ಮಾದರಿ, ಅಂದರೆ ರಾಜಕೀಯ ಮತ್ತು ವ್ಯಾಪಾರವನ್ನು ತಳಕು ಹಾಕಿರುವ ಮಾದರಿಯಾದ ಶಿರೋಮಣಿ ಅಕಾಲಿ ದಳದೊಂದಿಗೆ ಕೈಜೋಡಿಸಿದ್ದು ಅದರ ಕೋಮುವಾದಿ ರಾಜಕಾರಣದ ಗೋಸುಂಬೆತನದ ಇನ್ನೊಂದು ಅಧ್ಯಾಯ.

ಈ ಚುನಾವಣೆಗಳಲ್ಲಿ ಅಧಿಕಾರ ಕಳಕೊಂಡ ಸರಕಾರದ ಮುಖ್ಯಮಂತ್ರಿಗಳ ಮಗನೇ ಉಪಮುಖ್ಯಮಂತ್ರಿ, ಪಕ್ಷದ ನಾಯಕತ್ವವೂ ಅದೇ ಕುಟುಂಬದ ಕೈಯಲ್ಲಿ, ಕಳೆದ ಹತ್ತು ವರ್ಷದ ಅವರ ಆಳ್ವಿಕೆಯಲ್ಲಿ ಅವರ ಸಾರಿಗೆ, ಹೋಟೇಲ್ ಮತ್ತಿತರ ವ್ಯವಹಾರಗಳು ದೊಡ್ಡಪ್ರಮಾಣದಲ್ಲಿ ಬೆಳೆದವು, ಇದು ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಮೇಲೆ ತೀವ್ರ ದುಷ್ಪರಿಣಾಮ ಬೀರಿತು ಎಂಬುದು ಗಮನಾರ್ಹ. ಇದೂ, ಜತೆಗೆ ಈ ಕೂಟದ ದುರಾಡಳಿತದಿಂದಾಗಿ ವ್ಯಾಪಕಗೊಂಡ ಮಾದಕ ದ್ರವ್ಯ ಪಿಡುಗು ಕೊನೆಗೆ ಆ ಕೂಟಕ್ಕೆ ಮುಳುವಾಗಿದೆ ಎಂದು ಹೇಳಲಾಗುತ್ತಿದೆ.

ಕಾಂಗ್ರೆಸ್ ಗೆಲುವು ಮುಖ್ಯವಾಗಿ ಎಸ್‌ಎಡಿ–ಬಿಜೆಪಿ ಕೂಟದ ದುರಾಡಳಿತದಿಂದ ಬೇಸತ್ತ ಜನ ನೀಡಿದ ನಕಾರಾತ್ಮಕ ಗೆಲುವು ಎನ್ನಬಹುದಾದರೂ ಬೇಸತ್ತ ಮತದಾರರಿಗೆ ಆಮ್ ಆದ್ಮಿ ಪಕ್ಷದ ಪರ್ಯಾಯ ಇದ್ದರೂ ಕಾಂಗ್ರೆಸನ್ನು ಆರಿಸಿಕೊಳ್ಳಲು ಕೂಡ ಕಾರಣಗಳಿವೆ ಎಂದು ಕೆಲವು ವಿಶ್ಲೇಷಕರು ಹೇಳುತ್ತಾರೆ. ಆಮ್ ಆದ್ಮಿ ಪಕ್ಷ ಲೋಕಸಭಾ ಚುನಾವಣೆಗಳಲ್ಲಿ ಮೋದಿ ಅಲೆಯ ನಡುವೆಯೂ ನಾಲ್ಕು ಸ್ಥಾನಗಳನ್ನು ಗಿಟ್ಟಿಸಿ ಸವಾಲು ಹಾಕಿದರೂ ನಂತರದ ಅದರ ವರ್ತನೆ, ಮುಖ್ಯವಾಗಿ ಪಂಜಾಬಿನಲ್ಲಿ ಅದರ ಪ್ರಭಾವವಿದ್ದ ಕ್ಷೇತ್ರಗಳಲ್ಲಿ ಮಾಜಿ ಅಕಾಲಿಗಳು, ಕಾಂಗ್ರೆಸಿಗರನ್ನೇ ಅಭ್ಯರ್ಥಿಗಳಾಗಿ ನಿಲ್ಲಿಸಿದ್ದು ಜನ ಅದನ್ನೊಂದು ಸಮರ್ಥ ರಜಕೀಯ ಪರ್ಯಾಯವಾಗಿ ಕಾಣದಂತೆ ಮಾಡಿದೆ ಎಂದು ಅದರ ಕೆಲವು ಸಮರ್ಥಕರೂ ಹೇಳುತ್ತಿದ್ದಾರೆ.

ಕಳೆದ ವರ್ಷ ಮಹಾರಾಷ್ಟ್ರದ ನಂತರ ಅತಿ ಹೆಚ್ಚು ರೈತರ ಆತ್ಮಹತ್ಯೆಗಳನ್ನು ಕಂಡಿರುವ ಈ ಕೃಷಿಪ್ರಧಾನ ರಾಜ್ಯದಲ್ಲಿ ಕೃಷಿಬಿಕ್ಕಟ್ಟು ಎಸ್‌ಎಡಿ–ಬಿಜೆಪಿ ಆಳ್ವಿಕೆಯಲ್ಲಿ ಸಂಪೂರ್ಣ ಹದಗೆಟ್ಟಿತು. ಕಾಂಗ್ರೆಸ್ ಪಕ್ಷದ ಪ್ರಚಾರದ ನೇತೃತ್ವ ವಹಿಸಿದ್ದ, ಹಿಂದೆ 2002–07ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಅಮರಿಂದರ್ ಸಿಂಗ್ ಸಾಲಮನ್ನಾದ ಒಂದು ದೊಡ್ಡ ಯೋಜನೆಯನ್ನು ರೂಪಿಸುವುದಾಗಿ ಭರವಸೆ ನೀಡಿದರು. ಮಾದಕ ವಸ್ತುಗಳ ಪಿಡುಗನ್ನು ಅಧಿಕಾರಕ್ಕೆ ಬಂದ ಕೂಡಲೇ ಮಟ್ಟ ಹಾಕವುದಾಗಿ ಸಾರಿದರು ಮತ್ತು ಪ್ರತಿಕುಟುಂಬದಲ್ಲಿ ಒಬ್ಬ ಸದಸ್ಯನಿಗೆ ಉದ್ಯೋಗದ ಭರವಸೆ ನೀಡಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಈ ವಚನಗಳನ್ನು ಪಾಲಿಸುವತ್ತ ಕ್ರಮಗಳನ್ನೂ ಘೋಷಿದ್ದಾರೆ. ಆದರೆ ಕಾಂಗ್ರೆಸ್‌ನ ನವ–ಉದಾರವಾದಿ ಧೋರಣೆಗಳ ದಿಕ್ಕನ್ನು ಇವರು ಬದಲಿಸಿ, ಆಮೂಲಕ ರಾಷ್ಟ್ರಮಟ್ಟದಲ್ಲಿಯೂ ಕಾಂಗ್ರೆಸ್ ಒಂದು ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಯಾಗಿ ಬದುಕುಳಿಯಲು ನೆರವಾಗುತ್ತಾರೆಯೇ ಎಂದು ಕಾದು ನೋಡಬೇಕಾಗಿದೆ.

ಉತ್ತರಾಖಂಡದಲ್ಲಿ 'ಕಾಂಗ್ರೆಸ್‌ಯುಕ್ತ' ಬಿಜೆಪಿ ಸರಕಾರ

ಪುಟ 9 ರಿಂದ

ಬಹುಮತ ಕಳಕೊಂಡಿದೆ ಎಂದು ಮೋದಿ ಸರಕಾರ ಹೇರಿದ ರಾಷ್ಟ್ರಪತಿ ಆಳ್ವಿಕೆಯನ್ನು ಮೇ 2016ರಲ್ಲಿ ಸುಪ್ರಿಂ ಕೋರ್ಟ್ ರದ್ದು ಮಾಡಿತು. ನಂತರ ಭ್ರಷ್ಟಾಚಾರದ ಆಪಾದನೆ ಹೊತ್ತ ಈ ಮಾಜೀ ಕಾಂಗ್ರೆಸ್ ಮುಖ್ಯಮಂತ್ರಿಯನ್ನು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಗೆ ಸೇರಿಸಿ 'ಶುದ್ಧೀಕರಿಸ'ಲಾಯಿತು. ಅವರ ಜತೆಗಿನ 'ಬಂಡಾಯಗಾರರು' ಕೂಡ ಬಿಜೆಪಿ ಸೇರಿ ಇದ್ದಕ್ಕಿದ್ದಂತೆ 'ರಾಷ್ಟ್ರೀಯವಾದಿ'ಗಳಾದರು.

ಈ ಹಿನ್ನೆಲೆಯಲ್ಲಿ ನಡೆದ 2017ರ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮತಗಳಿಕೆಯಲ್ಲಿ ಆದ ಇಳಿಕೆ ಕೇವಲ 0.29%. ಆದರೆ 33.5% ಮತ ಗಳಿಸಿದರೂ ಅದರ ಸೀಟುಗಳ ಸಂಖ್ಯೆ 11ಕ್ಕೆ ಇಳಿಯಿತು. 46.5% ಮತ ಗಳಿಸಿದ ಬಿಜೆಪಿಯ ಸೀಟುಗಳ ಸಂಖ್ಯೆ 57 ಕ್ಕೇರಿತು. 7ಶೇ. ಮತಗಳಿಸಿರುವ ಬಿಎಸ್‌ಪಿ ಗೆ ಒಂದೂ ಸ್ಥಾನ ಸಿಕ್ಕಿಲ್ಲ. ಇದ್ದ 3 ಸೀಟುಗಳನನು ಕಳಕೊಂಡಿತು.

> 2017ರ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮತಗಳಿಕೆಯಲ್ಲಿ ಆದ ಇಳಿಕೆ ಕೇವಲ 0.29%. ಆದರೆ 33.5% ಮತ ಗಳಿಸಿದರೂ ಅದರ ಸೀಟುಗಳ ಸಂ–ಖ್ಯೆ 11ಕ್ಕೆ ಇಳಿಯಿತು. 46.5% ಮತ ಗಳಿಸಿದ ಬಿಜೆಪಿಯ ಸೀಟುಗಳ ಸಂಖ್ಯೆ 57 ಕ್ಕೇರಿತು. 7ಶೇ. ಮತಗಳಿಸಿರುವ ಬಿಎಸ್‌ಪಿ ಗೆ ಒಂದೂ ಸ್ಥಾನ ಸಿಕ್ಕಿಲ್ಲ. ಇದ್ದ 3 ಸೀಟುಗಳನ್ನು ಕಳಕೊಂಡಿತು.

2000ದಲ್ಲಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರವಿದ್ದಾಗ ಉತ್ತರ ಪ್ರದೇಶದಿಂದ ಪ್ರತ್ಯೇಕಿಸಿ ರಚನೆಗೊಂಡ ಈ ರಾಜ್ಯದಲ್ಲಿ ಪರ್ಯಾಯವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರ ಆಡಳಿತ ನಡೆಸಿವೆ. ರಾಜ್ಯ ರಚನೆಗೊಂಡು 2002 ರಲ್ಲಿ ಮೊದಲ ವಿಧಾನಸಭಾ ಚಉನಾವಣೆಗಳು ನಡೆಯುವ ವರೆಗಿನ ಎರಡು ವರ್ಷಗಳಲ್ಲಿ ಇದು ಇಬ್ಬರು ಬಿಜೆಪಿ ಮುಖ್ಯಮಂತ್ರಿಗಳನ್ನು ಕಂಡಿತು.

2002ರಲ್ಲಿ ಕಾಂಗ್ರೆಸ್ ಸರಕಾರ ಬಂತು. 2007ರಲ್ಲಿ ಕಾಮಗ್ರೆಸ್ ಸೋತು ಬಿಜೆಪಿ ಸರಕಾರ ಬಂತು. 2012ರಲ್ಲಿ ಅದು ಅಧಿಕಾರ ಕಳಕೊಳ್ಳುವ ವರೆಗಿನ 5 ವರ್ಷಗಳಲ್ಲಿ 3 ಬಿಜೆಪಿ ಮುಖ್ಯಮಂತ್ರಿಗಳನ್ನು ಕಂಡಿತು. ಇಬ್ಬರನ್ನು ಭ್ರಷ್ಟಾಚಾರದ ಆರೋಪದಲ್ಲಿ ಬದಲಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ 2012ರಲ್ಲಿ ಬಹುಮತ ಗಳಿಸದಿದ್ದರೂ ಅತಿ ದೊಡ್ಡ ಪಕ್ಷವಾಗಿ ಸರಕಾರ ರಚಿಸಿದ ಕಾಂಗ್ರೆಸ್ ಆಳ್ವಿಕೆಯಲ್ಲೂ ಈ ರಾಜ್ಯ ಇಬ್ಬರು ಮುಖ್ಯಮಂತ್ರಿಗಳನ್ನು ಕಂಡಿತು.

ಹೀಗೆ ತ್ರಿವೇಂದ್ರ ಸಿಂಗ್ ರಾವತ್ ಈ ರಾಜ್ಯದ 16 ವರ್ಷಗಳ ಅಸ್ತಿತ್ವದಲ್ಲಿ 9ನೇ ಮುಖ್ಯಮಂತ್ರಿ.

ಯಾವುದೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಂಬಿಸದೆ ಪ್ರಧಾನ ಮಂತ್ರಿ ಮೋದಿಯವರ ವರ್ಚಸ್ಸಿನ ಪೂರ್ಣ ಪ್ರಯೋಜನ ಪಡೆಯುವ ಬಿಜೆಪಿ ರಣತಂತ್ರವೇನೋ ಯಶಸ್ವಿಯಾಯಿತು. ಆದರೆ ಈ ಬಾರಿ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳಲ್ಲಿ 4 ಮಾಜೀ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸಿನಿಂದ ಅಧಿಕಾರ ಸಿಗಲಿಲ್ಲ ಎಂದು ಪಕ್ಷಾಂತರ ಹೊಂದಿದ ಇನ್ನು ಒಬ್ಬ ಪ್ರಮುಖ ಮುಖಂಡರೂ ಇದ್ದರು. ಆದ್ದರಿಂದಲೇ ಹೊಸ ಮುಖ್ಯಮಂತ್ರಿಯ ಹೆಸರನ್ನು ಸೂಚಿಸಲು ಅದಕ್ಕೆ ಒಂದು ವಾರ ಬೇಕಾಯಿತು.

ಆದ್ದರಿಂದ 2002–07ರ ಒಂದು ಅವಧಿಯನ್ನು ಬಿಟ್ಟು ಪ್ರತಿ ಬಾರಿಯೂ ಒಂದಕ್ಕಿಂತ ಹೆಚ್ಚು ಮುಖ್ಯಮಂತ್ರಿಗಳನ್ನು ಕಂಡಿರುವ ಈ ಪರಂಪರೆ'ಯ ಹಿನ್ನೆಲೆಯಲ್ಲಿ ನಿಷ್ಟ ಆರೆಸ್ಸೆಸ್ಸಿಗ ಭಾರೀ ಬಹುಮತ ವಿದ್ದರೂ, ಬಾರೀ ಆಂತರಿಕ ಸ್ಪರ್ಧೆಯೂ ಇರುವ ಪಕ್ಷದಿಂದ ಉತ್ತಮ ಆಳ್ವಿಕೆ ನೀಡಬಲ್ಲರೇ ಎಂಬ ಪ್ರಶ್ನೆ ಖಂಡಿತವಾಗಿಯೂ ಈ ರಾಜ್ಯದ ಜನತೆಯನ್ನು ಬಾಧಿಸುತ್ತಲೇ ಇರುತ್ತದೆ.

(ಮುಂದಿನ ವಾರ: ಮಣಿಪುರ ಮತ್ತು ಗೋವದಲ್ಲಿ ಮತದಾರರು ತಿರಸ್ಕರಿಸಿದರೂ ಬಿಜೆಪಿ ಸರಕಾರಗಳು)

32 ಕ್ರಿಮಿನಲ್ ಕೇಸುಗಳು ಮತ್ತು ಉತ್ತಮ ಆಳ್ವಿಕೆ

ಉತ್ತರ ಪ್ರದೇಶದ 402 ಶಾಸಕರಲ್ಲಿ 143 ಮಂದಿ ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿದ್ದಾರೆ. 107 ಮಂದಿ ಗಂಭೀರ ಸ್ವರೂಪದ ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿದ್ದಾರೆ ಎಂದು ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಲೆಕ್ಕಹಾಕಿದೆ.

ಇವರಲ್ಲಿ ಮುಖ್ಯಮಂತ್ರಿಗಳು ಸೇರಿರುವುದಿಲ್ಲ. ಏಕೆಂದರೆ ಅವರು ಸದ್ಯ ಶಾಸಕರಲ್ಲ. ಲೋಕಸಭಾ ಸದಸ್ಯರು.

2014ರಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಾಗ ಅವರು ಸಲ್ಲಿಸಿದ ಅಫಿಡವಿಟ್ ಪ್ರಕಾರ ಅವರ ಮೇಲೆ 10 ಕ್ರಿಮಿನಲ್ ಕೇಸುಗಳಲ್ಲಿ 16 ಆರೋಪಗಳಿವೆ. ಇವುಗಳು ಕ್ರಿಮಿನಲ್ ಬೆದರಿಕೆ, ಗಲಭೆ, ಶಾಂತಿ ಕದಡುವ ಪ್ರಯತ್ನ, ಉದ್ದೇಶಪೂರ್ವಕ ಅಪಮಾನ, ಪೂಜಾಸ್ಥಾನವನ್ನು ಅಪವಿತ್ರಗೊಳಿಸುವುದು, ಅಕ್ರಮ ಪ್ರವೇಶ, ಇತರರ ಜೀವಕ್ಕೆ ಮತ್ತು ವೈಯುಕ್ತಿಕ ಸುರಕ್ಷಿತೆಗೆ ಧಕ್ಕೆ, ಧರ್ಮ, ಜನಾಂಗ, ಹುಟ್ಟು ಸ್ಥಳ, ನಿವಾಸ, ಭಾಷೆಯ ಆಧಾರದಲ್ಲಿ ಸಮುದಾಯಗಳ ನಡುವೆ ವೈಷಮ್ಯ ಹುಟ್ಟಿಸುವುದು, ಕೊಲೆ ಪ್ರಯತ್ನ ಇತ್ಯಾದಿ ಸೇರಿವೆ.

ಅವರೇ ಒಪ್ಪಿಕೊಂಡಿರುವ ಈ 10 ಕೇಸುಗಳಲ್ಲದೆ ಇನ್ನೂ 22 ಕೇಸುಗಳನ್ನು ಅಲಹಾಬಾದಿನ 8 ಮಂದಿ ಹಿರಿಯ ವಕೀಲರು ಮತ್ತು ನಾಗರಿಕರು ಅಲಹಾಬಾದ್ ಹೈಕೋರ್ಟಿಗೆ ಮಾರ್ಚ್ 25ರಂದು ಸಲ್ಲಿಸಿದ ಮನವಿಯಲ್ಲಿ ಪಟ್ಟಿ ಮಾಡಿದ್ದಾರೆ.


ಎಪ್ರಿಲ್ 2ರಂದು ಅಲಹಾಬಾದ್ ಹೈಕೋರ್ಟಿನ ಒಂದೂವರೆ ಶತಮಾನೋತ್ಸವದ ಮುಕ್ತಾಯ ಸಮಾರಂಭಕ್ಕೆ ಇದೇ ಹೈಕೋರ್ಟಿನಲ್ಲಿ ದೀರ್ಘಕಾಲದಿಂದ ಹಲವಾರು ಗಂಭೀರ ಕೇಸುಗಳನ್ನು ಎದುರಿಸುತ್ತಿರುವ ಯೋಗಿ ಆದಿತ್ಯನಾಥರನ್ನು ಅತಿಥಿಯಾಗಿ ಆಹ್ವಾನಿಸಬಾರದು ಎಂದು ಕೋರಿ ಈ ಎಂಟು ಮಂದಿ ಅಲಹಾಬಾದ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಈ ಮನವಿ ಸಲ್ಲಿಸಿದ್ದಾರೆ. ಪ್ರಧಾನ ಮಂತ್ರಿಗಳು ಮತ್ತು ಸುಪ್ರಿಂ ಕೋರ್ಟ್ ಮತ್ತು ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶರುಗಳು ಭಾಗವಹಿಸುವ ಈ ಸಮಾರಂಭದಲ್ಲಿ ಅವರೊಂದಿಗೆ ಇದೇ ನ್ಯಯಾಲಯದಲ್ಲಿ ಹಲವಾರು ಗಂಭೀರ ಕೇಸುಗಳನ್ನು ಎದುರಿಸುತ್ತಿರುವವರು ಪೀಠಾಸೀನರಾಗುವುದು ಈ ನ್ಯಾಯಾಲಯದ ಸ್ವಾತಂತ್ರ್ಯ ಮತ್ತು ಘನತೆಗೆ ಕುಂದು ತರುತ್ತದೆ ಎಂದು ಈ ಮನವಿಯಲ್ಲಿ ಹೇಳಿರುವುದಲ್ಲದೆ 2013ರ ಕ್ರಿಮಿನಲ್ ರಿಟ್‌ಸಾರ್ವಜನಿಕ ಹಿತಾಸಕ್ತಿ ಅರ್ಜಿ ನಂ.24343ರ ಭಾಗವಾಗಿ ಉನ್ನತ ಮಟ್ಟದ ನ್ಯಾಯಾಂಗ ತನಿಖೆಯನ್ನೂ ನಡೆಸಬೇಕು ಎಂದು ಅವರು ಕೋರಿದ್ದಾರೆ.

ಹೊಸ ಶಾಸಕರಲ್ಲಿ 80% ಕೋಟ್ಯಧೀಶ್ವರರು

2012 ರಲ್ಲಿ ಆರಿಸಲ್ಪಟ್ಟ ಉತ್ತರಪ್ರದೇಶದ ವಿಧಾನ ಸಭೆಯಲ್ಲಿ 67% ಕೋಟ್ಯಧೀಶ್ವರರಿದ್ದರು. ಈ ಬಾರಿ ಅದು 80% ಕ್ಕೆ ಏರಿದೆ ಎಂದು ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ಲೆಕ್ಕ ಹಾಕಿದೆ.

ಮರು ಚುನಾವಣೆಗೊಂಡ 92 ಸದಸ್ಯರ ಆಸ್ತಿಗಳಲ್ಲಿ ಕಳೆದ 5 ವರ್ಷಗಳಲ್ಲಿ 87% ಏರಿ–ಕೆಯಾಗಿದೆ.

‘ಪ್ರಗತಿಪರರ ಮೇಲಿನ ದಾಳಿಗಳಲ್ಲಿ ಫ್ಯಾಶಿಸ್ಟ್ ರಾಜಕಾರಣದ ಹುನ್ನಾರವಿದೆ’



ಶ್ರೀ ವಿನಾಯಕ ಬಾಳಿಗಾ ಹತ್ಯೆ ಪ್ರಕರಣದಲ್ಲಿ ನ್ಯಾಯಕ್ಕಾಗಿ ಆಗ್ರಹಿಸುವವರೊಂದಿಗೆ ಮುಂಚೂಣಿಯಲ್ಲಿರುವ ಖ್ಯಾತ ವಿಚಾರವಾದಿ, ನಾಡಿನ ಸಾಕ್ಷಿ ಪ್ರಜ್ಞೆಯಾಗಿರುವ ಪ್ರೊ.ನರೇಂದ್ರ ನಾಯಕ್ ರವರೊಂದಿಗೆ ಜನಶಕ್ತಿ ಸಂದರ್ಶನ ನಡೆಸಿತು. ಅವರು ನ್ಯಾಯಕ್ಕಾಗಿ ದನಿ ಎತ್ತಿದ್ದರಿಂದಲೇ ತೀರಾ ಇತ್ತೀಚೆಗೆ ಪ್ರೊ. ನಾಯಕ್‌ರವರನ್ನು ಹತ್ಯೆಗೈಯ್ಯುವ ಒಂದು ಪ್ರಯತ್ನವೂ ನಡೆಯಿತು. ಈಗಲೂ ಜೀವ ಬೆದರಿಕೆ ಇದೆ. ಪ್ರಕರಣದಲ್ಲಿ ಹಲವು ತಿರುವುಗಳೂ ಬರುತ್ತಿವೆ. ಈ ಒತ್ತಡದ ನಡುವೆಯೇ ನಮ್ಮ ಎಲ್ಲಾ ಪ್ರಶ್ನೆಗಳಿಗೂ, ಕ್ರೂರ ವಾಸ್ತವದ ನಡುವೆ ಅತ್ಯಂತ ಕಾಳಜಿ ಮತ್ತು ತಣ್ಣಗೆ ವಿಶ್ಲೇಷಿಸುತ್ತಾ ಹೋದದ್ದು ಅವರ ಹಿರಿ ವ್ಯಕ್ತಿತ್ವದ ಪ್ರತೀಕ.

ಜನಶಕ್ತಿ: ಸಾರ್, ಇತ್ತೀಚೆಗೆ ತಮ್ಮನ್ನು ಹತ್ಯೆಗೈಯ್ಯುವ ಒಂದು ಪ್ರಯತ್ನ ನಡೆಯಿತು ಎನ್ನುವುದು ಅತ್ಯಂತ ಆತಂಕದ ವಿಷಯ. ಈ ಪ್ರಯತ್ನ ಯಾಕೆ?

ಪ್ರೊ.ನರೇಂದ್ರ ನಾಯಕ್: ಹೂಂ, ಇಂತಹ ಯತ್ನ ಮೊದಲನೆಯದೇನಲ್ಲ. ಹಿಂದೆ ಗಣಪತಿ ವಿಗ್ರಹ ಹಾಲು ಕುಡಿದ ಎಂದು ಎಲ್ಲೆಡೆ ಪವಾಡದ ಭಾರೀ ಪುಕಾರು ಎದ್ದಿರುವಾಗ ಅದರ ಹುಸಿತನವನ್ನು ವೈಜ್ಞಾನಿಕವಾಗಿ ಬಯಲಿಗೆಳೆದಾಗ ಕಲ್ಲುಗಳಿಂದ ಹೊಡೆದಿದ್ದರು. (ಸಂಘಪರಿವಾರದಿಂದ, ಹಿಂಬದಿ ತಲೆಗೆ ತೀವ್ರ ಏಟಾಗಿತ್ತು). ಮತ್ತೇ ಎರಡು ಬಾರಿ ನನ್ನ ಸ್ಕೂಟರ್ ಬ್ರೇಕ್‌ಗಳ ವೈರ್‌ಗಳನ್ನು ಕತ್ತರಿಸಿದ್ದರು.ಹೋಗುವಾಗ ಬ್ರೇಕ್ ಹಿಡಿಯದೇ ಅಪಘಾತದಲ್ಲಿ ಸಾಯಲಿ ಅಂತಾ. ಅದೂ ವಿಫಲವಾಯಿತು.ಮತ್ತೊಮ್ಮೆ ಒಬ್ಬ ಚೂರಿ ಹಿಡಿದು ಬಂದಿದ್ದ. ಕೊಲ್ಲುವ ಯತ್ನ ಹೊಸದೇನಲ್ಲ. ನನಗೆ ಗೊತ್ತಿಲ್ಲದೇ ಏನೆಲ್ಲಾ ನಡೆದಿರಬಹುದು. ಈ ಬಾರಿ ಒಂದು ಗ್ಯಾಂಗ್‌ನ ವ್ಯವಸ್ಥಿತ ಯತ್ನವಿರಬಹುದು. ನಿಮ್ಮ ಕಾರಿನ ಟೈರ್ ಪಂಕ್ಚರ್ ಆಗಿದೆ ಅಂತಾ ಯಾ–ರೋ ತಮಾಷೆಗೆ ಹೇಳಿರಬಹುದು ಅಂತಾನೂ ಕೆಲವರು ಹೇಳುತ್ತಾರೆ. ಸಂದರ್ಭ ಹಾಗಿರಲಿಲ್ಲ. ಅದೂ ಬೆಳಿಗ್ಗೆ 6.30 ರ ಸುಮಾರಿನಲ್ಲಿ ತಂಡವೊಂದು ಹೇಳಿ ಅಡ್ಡಾದಿಡ್ಡಿಯಾಗಿ ಹೋಗುತ್ತದೆ ಎಂದರೇನು? ಈ ಬಗ್ಗೆ ತನಿಖೆ ನಡೆಯುತ್ತಿದೆ. ಒಂದೊಂದಾಗಿ ಮಾಹಿತಿಗಳು ಸಿಗುತ್ತಿವೆ. ಸತ್ಯ ಹೊರ ಬರಲಿ. ನೋಡೋಣ.ಗಂಭೀರ ಕಾರಣಗಳು ಇರುವುದರಿಂದಲೇ ಕಳೆದ ಜುಲೈನಿಂದ ಒಬ್ಬ ಅಂಗರಕ್ಷಕನನ್ನು ಒದಗಿಸಲಾಗಿತ್ತು. ಈಗ ಶಿಫ್ಟ್ ವೈಜ್ ಇಬ್ಬರು.

ವಿನಾಯಕ ಬಾಳಿಗಾ ಅವರ ಹತ್ಯೆಯ ಪ್ರಕರಣ–ಕ್ಕೂ, ಇತ್ತೀಚೆಗೆ ನಿಮ್ಮ ಮೇಲಿನ ಧಾಳಿ ಯತ್ನಕ್ಕೂ ಏನಾದರೂ ಸಂಬಂಧವಿದೆಯಾ?

ನಿಕಟ ಸಂಬಂಧ ಇರಬೇಕು ಅನ್ನಿಸುತ್ತೆ.ಇವತ್ತು ದೇಶದಲ್ಲಿ ವಿಚಾರವಾದಿಗಳು ಕೆಲವರ ಕಣ್ಣಿನ ಮುಳ್ಳಾಗಿ ಬಿಟ್ಟಿದ್ದಾರೆ. ನನ್ನ ಮೇಲಿನ ಹಲ್ಲೆಯ ಯತ್ನದಲ್ಲಿ ಅಂತಹವರದ್ದು ಶೇ.50, ಇವರದ್ದು ಶೇ.50 ಇರಬಹುದು. ಕೊಲಬರೇಷನ್. ಬಾಳಿಗಾನೊಂದಿಗೆ ನನಗೆ ಮೊದಲೇನೂ ಅಷ್ಟು ನಿಕಟ ಸಂಬಂಧ ಇರಲಿಲ್ಲ. ಆತನ ಕೆಲಸಗಳ ಬಗ್ಗೆ ತಿಳಿದಿತ್ತು. ಈ ಪ್ರಕರಣದ ನಂತರ ಹೆಚ್ಚು ತೊಡಗಿದ್ದೇನೆ. ಇನ್ನು ಬಾಳಿಗಾ ಮಾಹಿತಿ ಹಕ್ಕುಗಳ ಕಾಯ್ದೆ ಯನ್ನು ಬಳಸಿ ಸಾರ್ವಜನಿಕ ಹಲವು ಪ್ರಶ್ನೆಗಳನ್ನು ಎತ್ತಿದ್ದ ಎಂಬುದನ್ನು ಗಮನಿಸಬೇಕು.ಇದರಿಂದ ಆತ ಅನೇಕರ ಶತೃತ್ವ ಕಟ್ಟಿಕೊಂಡಿದ್ದ.ಆದರೆ ಪಬ್ಲಿಸಿಟಿ ಇರಲಿಲ್ಲ. ಯಾವ ಸಂಘಟನೆಗೂ ಸೇರಿರದ ಈತ ಕೆಲವು ಮೌಲ್ಯಗಳಿಗೆ ಬದ್ಧನಾಗಿ ಕೆಲಸ ಮಾಡುತ್ತಿದ್ದ ಅಷ್ಟೇ.

ನಿಮ್ಮ ಮೇಲೆ ಮತ್ತೆ, ಮತ್ತೇ ಧಾಳಿಗಳು ಯಾಕೆ? ದೇಶದಲ್ಲೂ ಹಲವರ ಮೇಲೆ ಇದೇ ಧಾಳಿಗಳು ಏಕೆ?

ಸತ್ಯ ನಿಷ್ಠುರತೆ, ವೈಜ್ಞಾನಿಕ ಮನೋಭಾವ–ವಿಚಾರವಾದಕ್ಕೆ ಬದ್ಧತೆ, ಗ್ರಾಹಕರ ಹಕ್ಕುಗಳ ಕಾರ್ಯಕರ್ತನಾಗಿ ಚಳುವಳಿ, ಮಾನವ ಹಕ್ಕುಗಳ ರಕ್ಷಣೆಗೆ ಹೋರಾಟ, ಮಾನವೀಯ ಮೌಲ್ಯಗಳಿಗೆ ಸ್ಪಂದನೆ, ಸಮಾಜ ಬದಲಾವಣೆಯ ತುಡಿತ, ಇವೆಲ್ಲವೂ ಒಂದು ಕಡೆ ಸೇರುತ್ತವೆ. ಒಂದು ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಬೇಕು, ಎಲ್ಲವನ್ನೂ ಪರಿಶೀಲಿಸುವ, ಪ್ರಶ್ನಿಸುವ ಪ್ರಯತ್ನ ನನ್ನದು. ಸಮಾಜದ ಸ್ವಾಸ್ಥ್ಯಕ್ಕೆ, ದೇಶದ ಭವಿಷ್ಯಕ್ಕೆ ಇಂತಹ ಮನೋಭಾವವನ್ನು ಜನರಲ್ಲಿ ಬೆಳೆಸಬೇಕೆಂಬ ಹಂಬಲದೊಂದಿಗೆ ತೊಡಗಿದ್ದೇನೆ. ಅದು ಸಂವಿಧಾನ ಬದ್ಧ ನನ್ನ ಕರ್ತವ್ಯವೂ ಕೂಡ. ಧಾಳಿಗೆ ಇಂತಹ ಅಂಶಗಳು ಕೂಡ ಇರಬಹುದು ಎಂಬ ಊಹೆ ನನ್ನದು.

ಹಾಗಾದರೆ ವಿನಾಯಕ ಬಾಳಿಗಾ ಎತ್ತಿದ್ದ ಪ್ರಶ್ನೆಗಳಾದರೂ ಯಾವುವು?

ಬಾಳಿಗಾ ಎಡಪಂಥೀಯನೇನೂ ಅಗಿರಲಿಲ್ಲ. ಪಕ್ಕಾ ಸಂಪ್ರದಾಯವಾದಿ, ಧಾರ್ಮಿಕ ಮನೋಭಾವದ ವ್ಯಕ್ತಿ. ಉದಾಹರಣೆಗೆ ದೇವಸ್ಥಾನದಲ್ಲಿ ಟೇಬಲ್ ಮೇಲೆ ಊಟ ಹಾಕುವುದನ್ನು ಸಹ ಒಪ್ಪುತ್ತಿರಲಿಲ್ಲ. ಏನಿದ್ದರೂ ನೆಲದ ಮೇಲೆ ಕುಳಿತೇ ಉಣ್ಣಬೇಕು ಎಂದು ಹೇಳುತ್ತಿದ್ದವ. ಹಲವು ವಿಚಾರಗಳಲ್ಲಿ ಮನೆಯವರೊಂದಿಗೂ ಹಾಗೆಯೇ. ಮನೆಯವರೂ ಸಹ ಸಾದಾ ಜನ. ಆತನ ಹತ್ಯೆಯಾದಾಗಲೂ ಯಾಕೆ ಎನ್ನುವ ಬಗ್ಗೆ ಅವರಿಗೆ ಪೂರ್ಣ ಚಿತ್ರಣ ಇರಲಿಲ್ಲ ಅನ್ನಿಸುತ್ತೆ. ಈಗ ಧೈರ್ಯವಾಗಿ ಹೊರ ಬಂದಿದ್ದಾರೆ.

ವಿನಾಯಕ ಬಾಳಿಗಾನದು ವಿಭಿನ್ನವಾದ ಹಾದಿ. ಆತನಿಗೆ ಸಮಾನತೆ ಇರಬೇಕೆಂಬ ಪ್ರಜ್ಞೆ ಇತ್ತು.ನ್ಯಾಯಕ್ಕಾಗಿ ಮಿಡಿವ, ಕ್ರಿಯಾಶೀಲ ಸಂವೇದನೆ ಇತ್ತು.ಅದು ‘ಇವರಿಗಿಂತ’ ಜಾಸ್ತಿ.ದೇವಸ್ಥಾನದ ಹಣ ನಮ್ಮ ಸಮಾಜದ (ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ) ಜನರಿಗೆ, ಬಡ ಜನರಿಗೆ ಸಿಗಬೇಕು ಅಂತಿದ್ದ.ಈ ಸಾರ್ವಜನಿಕ ಹಣ ಸ್ವಾಮಿಗಳದ್ದೋ ಅಥವಾ ಇನ್ನಾರದೋ ಹೊಟ್ಟೆಗೆ ಸೇರಬಾರದು ಅಂತಾ ದೃಢವಾಗಿ ಹೇಳುತ್ತಿದ್ದ.

ದೇವಸ್ಥಾನದ ಹಣ ಹೀಗೆ ಹರಿದು ಸೋರಿ ಹೋಗಬಾರದು ಅಂತಾ ಪ್ರಶ್ನಿಸಿದ್ದಕ್ಕೆ ಕೊಲೆಯಾಯಿತಾ?

ಅಲ್ಲಿ ಹಲವಾರು ಕೋಟಿರೂಪಾಯಿಗಳ ಹಣದ ಲೆಕ್ಕಾಚಾರ ಸರಿಯಾಗಿರಲಿಲ್ಲ. ಆ ಲೆಕ್ಕಾಚಾರ ಮಾಡುವವರು ಜಗನ್ನಾಥ್ ಕಾಮತ್ ಎನ್ನುವವರು. ಬಾಳಿಗಾ ಹಾಕಿದ್ದ ಕೇಸ್ ಹಿಯರಿಂಗ್ ಬಂದಿತ್ತು, ಹೊಸ ಆಡಿಟರ್‌ನ್ನು (ಮಿ.ಶೆಟ್ಟಿ ಅಂತಾ) ನೇಮಿಸಿಯೂ ಆಗಿ–ತ್ತು. ಕೆಲಸ ನಡೆಯಬೇಕು ಎನ್ನುವಾಗ ಬಾಳಿಗಾನ ಕೊಲೆಯಾಯಿತು.ಮುಂದೆ ಹೊಸ ಆಡಿಟರ್ ಅವರು ತಮ್ಮ ಹಾಗೂ ಸಹೋದ್ಯೋಗಿಗಳ ಜೀವಕ್ಕೆ ಬೆದರಿಕೆ ಇರೋದ್ರಿಂದ, ಭದ್ರತೆ ಇಲ್ಲದಿರುವುದರಿಂದ ಯಾವುದೇ ಆಡಿಟ್ ಮಾಡೋಲ್ಲ ಅಂತಾ ಇದ್ದರು. ಹೀಗೆ ವರ್ಷವಾದರೂ ತನಿಖೆ ನಿಂತೇ ಇದೆ.ಆಡಿಟ್ ಆದ್ರೆ ಸತ್ಯ ಹೊರ ಬರಬಹುದು.

ಕಾಶೀಮಠದ ಸಯಮೀಂದ್ರಸ್ವಾಮಿಯವರಿಗೆ ವಿನಾಯಕ ಬಾಳಿಗಾ ‘ಉಮೇಶ್ ಮಲ್ಲ’ ಎಂಬ ತನ್ನ ಮೊದಲ ಹೆಸರಿನಲ್ಲಿ ಪತ್ರ ಬರೆದದ್ದು ಕೋಪ ತರಿಸಿತ್ತು ಅಂತಾನೂ ಕೆಲವರು ಹೇಳುತ್ತಾರೆ. ಇದೂ ಒಂದು ಕಾರಣ ಇರಬಹುದೋ ಏನೋ.

ನಾಲ್ಕು ವರುಷಗಳ ಹಿಂದೆ ಡಿಸೆಂಬರ್ 31 ರಂದು ವೆಂಕಟರಮಣ ದೇವಸ್ಥಾನದಲ್ಲಿ ಒಂದು ಮರ್ಡರ್ ಆಗಿತ್ತು.ಆಗ ಸುಧೀಂದ್ರರು ಸ್ವಾಮಿಗಳಾಗಿದ್ದರು. ಸುಧೀಂದ್ರರ ಕ್ಯಾಂಪ್ ಪಲೇವರ್– ಅಂದರೆ ‘ ಭಡವೇ’ ಅಂತಾ ಕರೆಯಲಾಗುವ ಒಬ್ಬನಿಗೆ ಚೂರಿ ಹಾಕಲಾಗಿತ್ತು. ಅದನ್ನು ಮುಚ್ಚಲು, ಅವರಿವರನ್ನು ಕರೆಯೋದು, ಮಾತನಾಡೋದು ಹೀಗೆ ಏನೇನೋ ಮಾಡಲಾಗಿತ್ತು. ಈ ಎರಡು ಗಂಟೆಗಳಲ್ಲಿ ರಕ್ತಸ್ರಾವ ಆಗುತ್ತಲೇ ಇದ್ದುದರಿಂದ ಆತ ಸತ್ತ. ಬಳಿಕ ಆ ಬಾಡಿಯನ್ನು ಯಾನೇಪೋಯಾ ಆಸ್ಪತ್ರೆ ಕೊಂಡೊಯ್ದರು. ಇಷ್ಟೊತ್ತು ಏನು ಮಾಡಿದಿರಿ ಎಂದು ಅವರು ಕೇಳಿದ್ದರು. ವಾಪಾಸು ತಂದ ಹೆಣವನ್ನು ದೇವಸ್ಥಾನದ ಹೊರಗೆ ಇರಿಸಲಾಗಿತ್ತು.ಪೋಲೀಸ್ ಕೇಸ್ ದಾಖಲಾಗಿತ್ತು. ಈ ಪ್ರಕರಣದಲ್ಲಿ 13 ಸಾಕ್ಷಿಗಳಿದ್ದರು. ಆದರೆ ಇವರೆಲ್ಲಾ ಕೋರ್ಟ್‌ನಲ್ಲಿ ‘ಹೋಸ್ಟೇಲ್’ ಆದರು. ಹೀಗಾಗಿ ಕೇಸ್ ಬಿದ್ದು ಹೋಯಿತು. ಇದರ ಹಿನ್ನೆಲೆಯಲ್ಲಿದ್ದದ್ದು ನರೇಶ್ ಶೆಣೈ ಎನ್ನಲಾಗುತ್ತಿದೆ. ಆರೋಪಿಯನ್ನು ಬಿಡಿಸಿ ತಂದಿದ್ದು ಇವನೇ ಅಂತಾನೂ ಕೆಲವರು ಮಾತನಾಡುತ್ತಾರೆ. ಹೀಗೆ ಆತನಿಗೆ ಭಂಡ ಧೈರ್ಯ ಬಂತು ಅಂತಾನೂ ಹೇಳ್ತಾರೆ. ಈತನ ಎಲ್ಲಾ ದಾಖಲೆಗಳು ವಿನಾಯಕ ಬಾಳಿಗಾನಲ್ಲಿ ಇದ್ದವು ಎನ್ನುವುದೂ ಇದೆ.

ಈ ನರೇಶ್ ಶೆಣೈ ಅಂದ್ರೆ ‘ನಮೋ ಬ್ರಿಗೇಡ್’ ನ ನಾಯಕನಾ?

ಹೌದು.

ಈ ದೇವಸ್ಥಾನ ಮತ್ತು ಕಾಶಿ ಮಠದ ನಡುವಿನ ಸಂಬಂಧಗಳು ಹೇಗೆ?

ದೇವಸ್ಥಾನ ಮತ್ತು ಮಠದ ನಡುವಿನ ಸಂಬಂಧಗಳು ಹಾಸು ಹೊಕ್ಕಾಗಿವೆ. ಈ ಎಲ್ಲಾ ದೇವಸ್ಥಾನಗಳು ಕಾಶಿ ಮಠದ ವ್ಯಾಪ್ತಿಯಲ್ಲಿ ಬರುತ್ತವೆ. ಇಲ್ಲಿಯ ಹೆಚ್ಚು ಹಣ ಹೋಗೋದು ಕಾಶಿ ಮಠಕ್ಕೆ. ಗೋಕರ್ಣ, ಕೈವಲ್ಯ, ಕಾಶಿ ಮಠಗಳ ಸ್ವಾಮಿಗಳಲ್ಲಿ ಯಾರಾದರೂ ರಥೋತ್ಸವಕ್ಕೆ ಬಂದರೆ ಅವರಿಗೆ ರಥ ಕಾಣಿಕೆಯ ಹಣ ಅರ್ಪಿಸಲಾಗುತ್ತದೆ.ಇಲ್ಲಿ ಬಾರೀ ಅದ್ಧೂರಿ ರಥೋತ್ಸವ ನಡೆಯುತ್ತವೆ. ಇಲ್ಲಿ ರಥ ಕಾಣಿಕೆ ರೂಪದಲ್ಲಿ ಭಾರೀ ಮೊತ್ತವೂ ಸಂಗ್ರಹವಾಗುತ್ತದೆ.ಇದನ್ನು ಬಂದ ಸ್ವಾಮೀಜಿಗಳಿಗೆ ನೀಡಿದಾಗ ಗೋಕರ್ಣ, ಕೈವಲ್ಯ ಮಠಗಳು ಸಾಮಾನ್ಯಾಗಿ ‘ಸ್ವೀಕೃತ’ ಎಂದು ಹೇಳಿ ಹಣ ಇಲ್ಲೇ ಬಿಡುತ್ತವೆ. ಆದರೆ ಕಾಶಿ ಮಠ ಅದನ್ನು ಸ್ವೀಕರಿಸಿ ಗುಳುಂ ಮಾಡುತ್ತದೆ ಎನ್ನಲಾಗುತ್ತಿದೆ. ಬಾಳಿಗಾ ಇದು ತಪ್ಪು ಎಂದನಂತೆ. ಅದೇನಿದ್ದರೂ ದೇವಸ್ಥಾನಕ್ಕೆ ಬಂದ ಹಣವನ್ನು ಲೆಕ್ಕಾಚಾರ ಮಾಡಿ ಅದನ್ನು ಬ್ಯಾಂಕ್ ನ ಖಾತೆಗೆ ಜಮಾ ಮಾಡಿ ಬಳಿಕ ಕೊಡಬೇಕೆಂದು, ಮನಸ್ಸಿದ್ದಲ್ಲಿ ಚೆಕ್ ಅಥವಾ ಡಿ.ಡಿ ಮೂಲಕ ಕೊಡಿ ಎಂದ್ಹೇಳಿದ್ದನಂತೆ. ಇಲ್ಲಿ ಸಂಗ್ರಹವಾಗುವ ಸಾಧಾರಣ ಮೊತ್ತವಲ್ಲ. 2016ರಲ್ಲಿ ರಥ ಕಾಣಿಕೆ ಸುಮಾರು 35 ಲಕ್ಷ ರೂಪಾಯಿಗಳು ಸಂಗ್ರಹವಾಗಿತ್ತು. ಇದನ್ನೆಲ್ಲಾ ಕಾಶಿ ಮಠದ ಸ್ವಾಮಿಗಳಿಗೆಂದು ಬೆಡ್‌ಶೀಟ್‌ನಲ್ಲಿ ಸುತ್ತಿ ಗಂಟು ಕಟ್ಟಿ ಕೊಂಡೊಯ್ದಿದ್ದರಂತೆ.

ಬಾಳಿಗಾ ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದು, ಅಲ್ಲಿಯ ಅನ್ಯಾಯದ ವ್ಯವಸ್ಥೆಯನ್ನು ಪ್ರಶ್ನಿಸಿದ್ದಕ್ಕೆ ಕೊಲೆಯಾಗಬೇಕಾಯಿತೇ?

ತನಿಖೆಯ ನಂತರ ಒಟ್ಟು ವಿಷಯಗಳು ಹೊರಬರಬೇಕು. ಆದರೆ ಒಂದು ಸಂಗತಿ ಎಂದರೆ 1927ರ ಆಗಸ್ಟ್ ನಲ್ಲಿ ದೇವಸ್ಥಾನಕ್ಕೆ ಸುಮಾರು ಒಂದು ಲಕ್ಷದಷ್ಟು ಆಸ್ತಿ ಇರುವುದಾಗಿ ತಿಳಿಯುತ್ತದೆ. ಈಗಿನಂತೆ ಕೋಟ್ಯಾಂತರ ಇರಲಿಲ್ಲ. ಮುಖ್ಯವಾಗಿ ಆ ಹಿಂದೆಲ್ಲಾ ಧಾರ್ಮಿಕ–ಆಡಳಿತದ ಮುಖ್ಯಸ್ಥರು ಪ್ರಾಮಾಣಿಕವಾಗಿ, ನಿಷ್ಠೆಯನ್ನು ಕಾಪಾಡಿಕೊಂಡವರಾಗಿದ್ದರು. ಈಗ ಕಾಲ ಬದಲಾಗಿದೆಯಲ್ಲಾ, ದೇವಸ್ಥಾನ, ಮಠದಲ್ಲಿ ಸಮುದಾಯದ ಅಭಿವೃದ್ಧಿಗೆ ಹೊಸ ಸ್ಕೀಮ್ ತರಬೇಕು ಎಂಬ ಚರ್ಚೆ ಹುಟ್ಟಿತ್ತು.ಬಾಳಿಗಾನೂ ಒಂದು ಒಳ್ಳೆ ಸ್ಕೀಮನ್ನು ತಯಾರಿಸಿ ಕೊಟ್ಟಿದ್ದ.

ಅಲ್ಲಾ ಸಾರ್, ವಿಚಾರವಂತರಾಗಿ ಅಂತಾ ಹೇಳಿದರೂ, ಧರ್ಮದ ಸಾರ ಅರಿತು ಸಮುದಾಯದ ಒಳಿತಿಗಾಗಿ ನ್ಯಾಯವಾಗಿ ನಡೆಯಿರಿ ಎಂದು ಹೇಳಿದರೆ ನಿಮ್ಮನ್ನು ಮುಗಿಸುತ್ತೇವೆ ಎಂದರಾ. ಆದರೆ ಬಾಯಲ್ಲಿ ಧರ್ಮರಕ್ಷಣೆ, ದೇಶಪ್ರೇಮ ಎಂದೆಲ್ಲಾ ಮಾತನಾಡುವ ಇವರ ನುಡಿ ಮತ್ತು ನಡೆಗಳೇ ವಿರೋಧಾಭಾಸದಿಂದ ವಿಚಿತ್ರವಾಗಿವೆಯಲ್ಲಾ?

ಕೆಲವರು ಧರ್ಮದ ರಕ್ಷಣೆ ಅಂತಾರೆ, ವಿವೇಕಾನಂದ, ಸಿಸ್ಟರ್ ನಿವೇದಿತಾ ರನ್ನೂ ತರ್ತಾರೆ. ಮಾಡೋ ಕೃತಿಗಳು ಬೇರೇನೇ. ಅಲ್ಲೆಲ್ಲಾ ಕೆಲವು ಉದ್ದೇಶಗಳನ್ನು ಅಡಗಿಸಿಡಲಾಗಿರುತ್ತದೆ. ಹಿತಾಸಕ್ತಿಗಳು ಬೇರೆಯೇ ಇರುತ್ತವೆ. ಆದ್ದರಿಂದ ಸತ್ಯದ ಧ್ವನಿಗಳನ್ನೂ ಅಡಗಿಸಲು ಇನ್ನಿಲ್ಲದಂತೆ ಯತ್ನಿಸಲಾಗುತ್ತದೆ.

ನಿಮ್ಮನ್ನೂ ಒಳಗೊಂಡು ದೇಶದಲ್ಲೆಲ್ಲಾ ವಿಚಾರವಾದಿಗಳು, ಸಂಶೋಧಕರ ಮೇಲೆ ನಡೆಯುತ್ತಿರುವ ಆಕ್ರಮಣ, ಕೊಲೆಗಳಿಗೆ ಇರುವ ಆಯಾಮಗಳೇನು? ಮತೀಯ, ರಾಜಕೀಯ ಆಯಾಮವಿದೆಯೇ?

ಅಂತಹ ನಕಾರಾತ್ಮಕ ಶಕ್ತಿಗಳಿಗೆ ಸಂರಕ್ಷಣೆಯ ಭಾವನೆಯನ್ನು ಈ ಸರಕಾರ ತಂದಿದೆ ಅಂತಾ ಮೂರು ವರುಷಗಳ ಹಿಂದೆ ‘ಕ್ಯಾರವಾನ್’ ಪತ್ರಿಕೆ ಲೇಖನವೊಂದನ್ನು ಪ್ರಕಟಿಸಿತ್ತು. ಧಾಳಿ ನಡೆಸುತ್ತಿರುವ ಶಕ್ತಿಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಿರುವಾಗಲೇ ಬಹಳ ಮುಖ್ಯವಾಗಿ ರಾಜಕೀಯ ಆಯಾಮವಿದೆ. ಈಗ ಕೇಂದ್ರದಲ್ಲಿ ತಮ್ಮದೇ ಸರಕಾರವಿದೆಯೆಂದು ಅದನ್ನು ಬಲದ, ರಕ್ಷಣಾ ಗುರಾಣಿಯಂತೆ ಬಳಸಲಾಗುತ್ತಿದೆ. ‘ನಮ್ಮದೇ ಸರಕಾರವಿದೆ, ನಮ್ಮನು ಯಾರೇನೂ ಮಾಡುವರು. ನಾವು ಮಾಡ್ತಿರೋದೇ ಸರಿ, ಏನು ಮಾಡಿದರೂ ನಡೆಯುತ್ತೆ, ನಮ್ಮನ್ನು ರಕ್ಷಿಸಲಾಗುತ್ತೆ’ ಎನ್ನುವ ಪ್ರವೃತ್ತಿ ಅಂತಹವರಲ್ಲಿದೆ. ಪ್ರಭುತ್ವ, ಸರಕಾರವೂ ಇಂತಹುದೇ ಶಕ್ತಿಗಳಿಗೆ ಹೆಚ್ಚೆಚ್ಚು ಕುಮ್ಮಕ್ಕು ನೀಡುತ್ತಿರುತ್ತದೆ. ಹಿಂದಿನ ಸರಕಾರಗಳೇನೂ ಬೆಟರ್ ಅಂತಿಲ್ಲ. ಆದರೆ ಹಿಂದುತ್ವದ ಹೆಸರಿನಲ್ಲಿರುವ ಈ ಸರಕಾರದ ಪ್ರವೃತ್ತಿಯೇ ಬೇರೆ, ಈ ಕೇಂದ್ರ ಸರಕಾರದ್ದು ಹಾರ್ಡ್ ಹಿಂದುತ್ವ. ಹಿಂಸೆ ಇದ್ದವರದ್ದು ನಯ, ನಾಜೂಕಿನ ಹಿಂದುತ್ವ ಅಷ್ಟೇ.

ಅವರು ಸ್ವಪಕ್ಷೀಯರನ್ನೂ ಬಿಡುತ್ತಿಲ್ಲವಲ್ಲಾ!

ಹೌದು, ಬಾಳಿಗಾ ಬಿ.ಜೆ.ಪಿ ಯವನಾಗಿದ್ದ. ಹತ್ಯೆಗೀಡಾದ ಪ್ರವೀಣ ಪೂಜಾರಿ ಅದೇ ಪರಿವಾರ.ನೋಡಿ ಚೆಡ್ಡಿಗಳಲ್ಲಿ ಓ ಸಾರಿ, ಈಗ ಪ್ಯಾಂಟ್ ಗಳಲ್ಲವೇ, ನೀವು ಹಾಕಿದ ಪ್ಯಾಂಟ್ ಸೈಜು ಎಷ್ಟು ದೊಡ್ಡದು ಅಂತಾ ನೋಡಿ ಅದರ ಮೇಲೆ ನಿಮ್ಮ ಸ್ಥಾನ, ಮಾನ, ರಕ್ಷಣೆ ನಿರ್ಧಾರ ಆಗುತ್ತೆ.

ಈಗ ಸಾಮಾಜಿಕ ಜೀವನದಲ್ಲಿ ಕ್ರಿಮಿನಲೈಜೇಷನ್ ಹೆಚ್ಚಾಗಿದೆ ಅಂತಾ ಅನ್ಸುತ್ತಾ?

ಆಗಿದೆ ನಿಜ. ಆದರೆ ಅಪರಾಧೀಕರಣ ಈಗಿನದಷ್ಟೆ ಅಲ್ಲ. ಸುಮಾರು ಹತ್ತು ಹದಿನೈದು ವರುಷಗಳ ಹಿಂದೆ ಹಾಗೇ ಹೀಗೆ ಶುರುವಾಯ್ತು. ನಡುವೆ ಒಂದಿಷ್ಟು ಸ್ವಲ್ಪ ಕಡಿಮೆಯಾಯಿತೇನೋ ಅನ್ನುವ ಹಾಗೂ ಇತ್ತು.ತುರ್ತು ಸ್ಥಿತಿ ಕಾಲದಲ್ಲಿ ಕಾಂಗ್ರೆಸ್‌ನೊಟ್ಟಿಗೆ ಇದ್ದ ಕೆಲವರು ಮುಂದೆ ಜನತಾಪಕ್ಷ–ದಳ ಅಂತಾ, ನಂತರ ಈಗ ಬಿಜೆಪಿಯೊಟ್ಟಿಗೆ ಇದ್ದಾರೆ. ಅವರಿಗೆ ಪಕ್ಷಕ್ಕಿಂತ ಯಾರ ಜೊತೆಗಿದ್ದರೆ ರಕ್ಷಣೆ ಮತ್ತು ಭಕ್ಷಣೆ ಸಾಧ್ಯ ಅಂತಾ ನೋಡಿ ಅವರೊಂದಿಗೆ ಇರುತ್ತಾರೆ.ಅಂಥವರು ಈಗ ಕಾಂಗ್ರೆಸ್‌ನಲ್ಲಿಯೂ ಇಲ್ಲಾ ಅಂತಾ ತಿಳಿಬೇಡಿ.

ಚುನಾವಣೆಗಳು ಹತ್ತಿರ ಬರುತ್ತಿರುವಾಗ ಇಂತಹ ಮತೀಯ ಘರ್ಷಣೆ, ಧಾಳಿಗಳು ಹೆಚ್ಚಾಗುತ್ತಿವೆಯೇ?

ಇಂದು ಮತೀಯ ನೆಲೆಯಲ್ಲಿ ಜನರನ್ನು ವಿಭಜಿಸಿ ಮತಗಳನ್ನು ಕ್ರೋಢೀಕರಿಸುವ ಪ್ರಕ್ರಿಯೆ, ಧೃವೀಕರಣದ ಪ್ರಯತ್ನಗಳು ತೀವ್ರವಾಗುತ್ತಿದೆ. ವಿವಿಧ ಮತ ಧರ್ಮಗಳ ನಡುವೆ ವೈಷಮ್ಯ ಬಿತ್ತುವ ಕೃತ್ಯಗಳು ಹೆಚ್ಚುತ್ತಿವೆ. ಮತ ಧರ್ಮವನ್ನು ಒಂದು ಅಸ್ತಿತ್ವದ ಕುರುಹಾಗಿ, ಐಡೆಂ–ಟಿಯಾಗಿ ಬಳಸಲಾಗುತ್ತಿದೆ. ಮೂಲಭೂತವಾದಿಗಳನ ್ನಗಿಸಲಾಗುತ್ತದೆ.ಹಾಗಾಗಿಯೇ ಯಾರಾದರೂ ನಮ್ಮ ಧರ್ಮವನ್ನು ವಿಮರ್ಶಿಸಿದರೆ, ಬೆಟ್ಟು ಮಾಡಿದರೆ ಅವರನ್ನು ಉಳಿಯಲು ಬಿಡುವುದಿಲ್ಲ ಎಂಬ ಪ್ರವೃತ್ತಿ ಹಿಂಸಾರೂಪದಲ್ಲಿ ಕಾಣುತ್ತಿದೆ. ನೋಡಿ, ಶಿವಾಜಿಯವರಿಗೆ ಯಾಕೆ ಎರಡು ಜನ್ಮ ದಿನಗಳು ಅಂತಾ ಹೇಳಿದ್ದಕ್ಕೆ ಮುಗಿಸಿಯಾಯ್ತಲ್ಲಾ.

ವಿಚಾರವಾದಿಗಳನ್ನೇ ಗುರಿಯಾಗಿಸಲಾಗುತ್ತಿದೆಯಲ್ಲ ಯಾಕೆ?

ಇದು ಒಂದು ಸಾಮಾನ್ಯ ಟೆಂಡೆನ್ಸಿ. ನೋಡಿ, ಫ್ಯಾಶಿಸಂನತ್ತ ಹೋಗುವ ಸಮಾಜದಲ್ಲಿ ಇಂತಹ ಪ್ರವೃತ್ತಿಯನ್ನು ಬೆಳೆಸಲಾಗುತ್ತದೆ.ಪ್ರಶ್ನಿಸುವವರನ ್ನ ಮುಗಿಸಿಯೇ ಬಿಡಬೇಕು ಎಂಬುದು ಅದರ ಪ್ರಧಾನ ಉದ್ದೇಶವಾಗಿರುತ್ತದೆ.ನಮ್ಮನ್ನು, ನಮ್ಮ ಸಮಾಜವನ್ನು ಆ ಕಡೆಗೆ ದೂಡಲಾಗುತ್ತಿದೆ.ಬೀದಿಗಳಲ್ಲಿ ದೇಶಪ್ರೇಮ, ರಾಷ್ಟ್ರೀಯತೆಯ ಡಬ್ಬ ಹೊಡೆಯುವುದರ ಅರ್ಥವೇನು?ನೀವು ನಮ್ಮ ಜೊತೆಗೆಇಲ್ಲವಾದರೆ ನೀವು ನಮ್ಮ ಶತೃಗಳು ಎಂದು ತೀರ್ಮಾನಿಸಿಯೇ ಬಿಡಲಾಗುತ್ತದೆ.

ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿರುವ ನನ್ನೊಂದಿಗೆ ನೀವು ಬರುವುದಿಲ್ಲವಾದರೆ ನೀವು ಭಯೋತ್ಪಾದಕರ ಜೊತೆಗೆ ಎನ್ನುವ ಭಯೋತ್ಪಾದನೆ ವಿಶ್ವದಲ್ಲಿ ಬೆಳೆಸಿದ ಅಮೇರಿಕಾದ ಘೋಷಣೆಯಂತೆ!

ಹೌದು. ಅಂತಹವರಿಗೆ ಇನ್ನೊಂದು ಅಭಿಪ್ರಾಯವೇ

ಪುಟ 15 ಕ್ಕೆ

ದೊಡ್ಡ ಕಾರ್ಪೋರೇಟ್ ಸುಸ್ತಿದಾರರ ವಿರುದ್ಧ ಕ್ರಮ ಕೈಗೊಳ್ಳಲಾರದ ದಿನಗಳು!

ರಿಝರ್ವ್ ಬ್ಯಾಂಕ್ 1080 ಮರುಪಾವತಿ ಸಾಮರ್ಥ್ಯ ಇದ್ದರೂ ಬೇಕೆಂದೇ ಸಾಲ ಮರುಪಾವತಿ ಮಾಡದ ಬ್ಯಾಂಕ್ ಖಾತೆದಾರರ ವಿರುದ್ಧ ಕ್ರಿಮಿನಲ್ ಕೇಸುಗಳನ್ನು ಹಾಕಿ ಎಂದು ಬ್ಯಾಂಕುಗಳಿಗೆ ನಿರ್ದೇಶನ ನೀಡಿದ್ದರೂ ಇದುವರೆಗೂ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಮಾಹಿತಿ ಹಕ್ಕು(ಆರ್‌ಟಿಐ) ಪ್ರಶ್ನೆಗೆ ದೊರೆತಿರುವ ಉತ್ತರದಿಂದ ಬಯಲಾಗಿದೆ. 25ಲಕ್ಷ ರೂ.ಗಿಂತ ಹೆಚ್ಚಿನ ಮೊತ್ತದ ಸುಸ್ತಿ ಸಾಲಗಾರರ ಮಾಹಿತಿಯನ್ನು ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ನೀಡಿವೆ. ಇಂತಹ ಸಾಲಗಳ ಒಟ್ಟು ಮೊತ್ತ ಸಪ್ಟಂಬರ್ 2016ರ ವೇಳೆಗೆ 7673.6 ಕೋಟಿ ರೂ. ಎಂದು ಆರ್‌ಟಿಐ ಉತ್ತರದಲ್ಲಿ ತಿಳಿಸಲಾಗಿದೆ.

ಈಗಿರುವ ಶಾಸನಗಳ ಅಡಿಯಲ್ಲೂ ಈ ಉದ್ಯಮಿಗಳ ಮೇಲೆ ಭಾರತೀಯ ದಂಡ ಸಂಹಿತೆ(ಐಪಿಸಿ)ಯ ಸೆಕ್ಷನ್ 403 ಮತ್ತು 415 ರಡಿಯಲ್ಲಿ ಕ್ರಿಮಿನಲ್ ಕ್ರಮಗಳನ್ನು ಕೈಗೊಳ್ಳುವ ಅವಕಾಶಗಳಿವೆ. ಇವರೆಲ್ಲ ಬ್ಯಾಂಕುಗಳನ್ನು ವಂಚಿಸಲೆಂದೇ ಸಾಲ ಪಡೆದವರು. ಆದ್ದರಿಮದ ಇವರ ವಿರುದ್ಧ ಕ್ರಿಮಿನಲ್ ಕ್ರಮ ಗಳನ್ನು ಕೈಗೊಳ್ಳಬೇಕು ಎಂದು ರಿಝರ್ವ್ ಬ್ಯಾಂಕ್ ಆದೇಶಿಸಿತ್ತು. ಆದರೂ ಯಾವುದೇ ಕ್ರಮಗಳನ್ನು ಇದುವರೆಗೆ ಕೈಗೊಳ್ಳಲಾಗಿಲ್ಲ ಎಂದು ವರದಿಯಾಗಿದೆ. ಬಹುಶಃ ಇದಕ್ಕೆ ಕಾರಣ ಇವರೆಲ್ಲ ರಾಜಕೀಯ ಪ್ರಭಾವ ಹೊಂದಿರುವವರು.

ಡಿಸೆಂಬರ್ 2016 ರ ವೇಳೆಗೆ 41 ಬ್ಯಾಂಕುಗಳ ಒಟ್ಟು 'ಕೆಟ್ಟ ಸಾಲ'ಗಳ ಮೊತ್ತ 7ಲಕ್ಷ ಕೋಟಿ ರೂ.ಗಳು ರಿಝರ್ವ್ ಬ್ಯಾಂಕಿನ ಹಣಕಾಸು ಸ್ಥಿರತೆ ವರದಿಯ ಪ್ರಕಾರ ಸಪ್ಟಂಬರ್ 2015ರಲ್ಲಿ 5.1ಶೇ. ಇದ್ದ 'ಕೆಟ್ಟ ಸಾಲ'ಗಳ ಪ್ರಮಾಣ ಸಪ್ಟಂಬರ್ 2016ರ ವೇಳೆಗೆ 9.1ಶೇಕ್ಕೇ ನೆಗೆದಿದೆ.

ಇನ್ನೊಂದು ವರದಿಯ ಪ್ರಕಾರ ಡಿಸೆಂಬರ್ 2014 ರಿಮನದ ಡಿಸೆಂಬರ್ 2016ರ 24 ತಿಂಗಳಲ್ಲಿ ಈ ಎನ್‌ಪಿಎ ಗಳ ಮೊತ್ತ 3.3 ಲಕ್ಷ ಕೋಟಿಯಂದ 7.3ಲಕ್ಷ ಕೋಟಿಗೆ ಏರಿದೆ. (ಚಿತ್ರ ನೋಡಿ). ಇವೆಲ್ಲ ಅಚ್ಛೇ ದಿನ್‌ಗಳಲ್ಲಿ ಇನ್ನಷ್ಟು ಉತ್ತೇಜನೆ ಪಡೆದಿರುವ ಚಮಚಾ ಬಂಡವಾಳಶಾಹಿ ವಾತಾವರಣದ ಫಲಾನುಭವಿಗಳು ಎಂಬುದು ಸ್ಪಷ್ಟ. ದೊಡ್ಡ-ದೊಡ್ಡ ಮಾತುಗಳನ್ನಾಡುವ ಕೇಂದ್ರ ಸರಕಾರಕ್ಕೆ ಈ ಕಾರ್ಪರೇಟ್ ಸುಸ್ತಿದಾರರು ಲೂಟಿ ಮಾಡಿರುವ ಸಾರ್ವಜನಿಕ ಹಣವನ್ನು ವಸೂಲಿ ಮಾಡುವ ಶಕ್ತಿ ಇಲ್ಲವೇ, ಅಥವ ಮನಸ್ಸಿಲ್ಲವೇ ಎಂಬ ಪ್ರಶ್ನೆ ನಾಗರಿಕರಲ್ಲಿ ಏಳುವುದು ಸಹಜ.



"ಮಸಿ ಚೆಲ್ಲುವವರು ಪಕ್ಷದ ವಕ್ತಾರರಾಗುತ್ತಿದ್ದಾರೆ...."

ಸುಪ್ರಿಂ ಕೋರ್ಟಿನ ಪ್ರಸಿದ್ಧ ವಕೀಲ ಪ್ರಶಾಂತ ಭೂಷಣರವರ ಕಚೇರಿ ನುಗ್ಗಿ ಅವರ ಮೇಲೆ ಹಲ್ಲೆ ಮಾಡಿದಾತನ ನೆನಪಿದೆಯೇ? ಆತನ ಹೆಸರು ತೆಜಿಂದರ್ ಪಾಲ್ ಸಿಂಗ್ ಬಗ್ಗ. ಕಾಶ್ಮೀರ ಜನಮತಸಂಗ್ರಹದ ಬಗ್ಗೆ ಪ್ರಶಾಂತ ಭೂಷಣ್ ಅವರ ಹೇಳಿಕೆಯಿಂದ ಆಕ್ರೋಶಗೊಂಡು ಆತ ಹೀಗೆ ಮಾಡಿದನಂತೆ. 'ಹಿ ಟ್ರೈ ಟು ಬ್ರೇಕ್ ಮೈ ನೇಶನ್, ಐ ಟ್ರೈ ಟು ಬ್ರೇಕ್ ಹಿಸ್ ಹೆಡ್. ಹಿಸಾಬ್ ಚುಕ್ತ'(ಆತ ನನ್ನ ದೇಶವನ್ನು ಒಡೆಯಲು ಪ್ರಯತ್ನಿಸಿದ, ನಾನು ಆತನ ತಲೆ ಒಡೆದೆ. ಲೆಕ್ಕ ಚುಕ್ತ ಆಯ್ತು) ಎಂದು ಉದ್ಗರಿಸಿದರು.

ಇದು ಈ ವ್ಯಕ್ತಿಯ (ಕು)ಖ್ಯಾತಿಯ ಆರಂಭ. ಮುಂದೆ ಆತ ಟ್ವಿಟರ್ ಸ್ಟಾರ್ ಆಗಿ ಬೆಳೆದ ವ್ಯಕ್ತಿ. ಕಳೆದ ಆರು ವರ್ಷಗಳಲ್ಲಿ ಬಿಜೆಪಿಯನ್ನು ಟೀಕಿಸಿದವರನ್ನೆಲ್ಲ ಗುರಿ ಮಾಡುವಲ್ಲಿ ಅತ್ಯಂತ ಸಕ್ರಿಯನಾಗಿದ್ದ ಈತನಿಗೆ ಈಗ ಈ ಶ್ರಮದ ಫಲ ದೊರೆತಿದೆ. ಆತನನ್ನು ಈಗ ದಿಲ್ಲಿಯಲ್ಲಿ ಬಿಜೆಪಿಯ ವಕ್ತಾರನಾಗಿ ಬಡ್ತಿ ಸಿಕ್ಕಿದೆ.

2011ರಲ್ಲಿ ಅರುಂಧತಿ ರಾಯ್ ಪುಸ್ತಕ ಬಿಡುಗಡೆಯನ್ನು ಛಿದ್ರಗೊಳಿಸಿದ್ದು, 2012ರಲ್ಲಿ ಹುರಿಯತ್ ಮುಖಂಡನ ದಿಲ್ಲಿ ಸಭೆಯಲ್ಲಿ ಗಲಭೆ ಎಬ್ಬಿಸಿದ್ದು, ದಿಲ್ಲಿಯಲ್ಲಿ ಜಮ್ಮು-ಕಾಶ್ಮೀರ ಭವನಕ್ಕೆ ಬೀಗ ಜಡಿದದ್ದು, ಎನ್‌ಡಿಟಿವಿಯ ಪತ್ರಕರ್ತ ರವೀಶ್ ಕುಮಾರ್ ಮತ್ತಿತರ ಪತ್ರಕರ್ತರ ಮೇಲೆ ಗುರಿಯಿಟ್ಟದ್ದು ಈತನ ಸಾಧನೆಗಳು. ಬರೀ ಪ್ರತಿಭಟಿಸುವುದಷ್ಟೇ ಅಲ್ಲ, ಅದಕ್ಕೆ ಭಾರೀ ಪ್ರಚಾರ ಗಿಟ್ಟಿಸುವುದು ಆತನ ವಿಶಿಷ್ಟತೆ.

ಮುಂದೆ ಸಾಮಾಜಿಕ ಮಾಧ್ಯಮದಲ್ಲಿ ಧಾಂಧಲೆ ಎಬ್ಬಿಸಲಾರಂಭಿಸಿದ ವ್ಯಕ್ತಿಯನ್ನು ಪಕ್ಷದ ವಕ್ತಾರ ಎಂದು ನೇಮಿಸಿದ್ದು ಕೆಲವರಿಗೆ ಆಘಾತ ಉಂಟು ಮಾಡಿದ್ದರೂ ಇತ್ತೀಚೆಗೆ ಬಿಜೆಪಿ ಸಾಮಾಜಿಕ ಮಾಧ್ಯಮಕ್ಕೆ ಕೊಡುವ ಮಹತ್ವದ ಹಿನ್ನೆಲೆಯಲ್ಲಿ ಇದೇನೂ ಅನಿರೀಕ್ಷಿತವಲ್ಲ ಎನ್ನುತ್ತಾರೆ ರಾಜಕೀಯ ವೀಕ್ಷಕರು.

ಈತನ ಧಾಂಧಲೆಗೆ ಗುರಿಯಾಗಿದ್ದ ಎನ್‌ಡಿಟಿವಿ ಇಂಡಿಯಾದ ರವೀಶ್ ಕುಮಾರ್‌ಗೆ ಇತ್ತೀಚೆಗೆ ಕುಲದೀಪ್ ನಯ್ಯರ್ ಸ್ಮಾರಕ ಪತ್ರಕಾರಿತೆಯ ಅವಾರ್ಡ್ ಸಿಕ್ಕಿದೆ. ಈ ಅವಾರ್ಡ್ ಸ್ವೀಕರಿಸುತ್ತ ಆತ "ಮಸಿ ಚೆಲ್ಲುವವರು ಪಕ್ಷದ ವಕ್ತಾರರಾಗುತ್ತಿದ್ದಾರೆ,.." ಎಂದು ಟಿಪ್ಪಣಿ ಮಾಡಿದ್ದಾರೆ.


ಆಧಾರ್ ಹೆಸರಲ್ಲಿ ಗೊಂದಲಪುರ ಸೃಷ್ಟಿ

ಸುಪ್ರಿಂ ಕೋರ್ಟ್ ತಾನು ಅಂತಿಮವಾಗಿ ತೀರ್ಮಾನ ಮಾಡುವ ವರೆಗೆ 'ಆಧಾರ್' ಅನ್ನು ಕಡ್ಡಾಯ ಮಾಡುವಂತಿಲ್ಲ ಎಂದು ಹೇಳಿದ್ದರೂ 'ಸರಕಾರ ''ಅಚ್ಛೇದಿನ್' ಹೆಸರಲ್ಲಿ ಪ್ರತಿದಿನವೆಂಬಂತೆ ಹೊಸ -ಹೊಸ ವಿಷಯಗಳಲ್ಲಿ ಆಧಾರ್ ಕಡ್ಡಾಯವನ್ನೂ ಘೋಷಿಸುತ್ತಲೇ ಇದೆ. ಈ ವಾರ ಸುಪ್ರಿಂ ಕೊರ್ಟ್ ತನ್ನ ಆದೇಶವನ್ನು ಪುನರುಚ್ಚರಿಸಿತು. ಆದರೆ ಇದರ ಬಗ್ಗೆ ಮಾಧ್ಯಮಗಳಲ್ಲಿ ಬಂದಿರುವ ವರದಿಗಳನ್ನು ನೋಡಿದರೆ ಸರಕಾರ ನ್ಯಾಯಾಲಯ ಮತ್ತು ಜನತೆಯನ್ನು ವಂಚಿಸುತ್ತ ತಿರುಗುತ್ತಿದೆ ಅನಿಸುತ್ತಿದೆ ಎಂದು ಪರಿಣಿತರೊಬ್ಬರು ಸಂದೇಹ ವ್ಯಕ್ತಡಿಸಿದ್ದಾರೆ(ಉಷಾ ರಾಮನಾಥನ್. ನ್ಯೂಸ್‌ಕ್ಲಿಕ್, ಮಾರ್ಚ್ 29).

ಸುಪ್ರಿಂ ಕೋರ್ಟ್ ಪಡಿತರ, ನರೇಗ, ಪೆನ್ಶನ್‌ಗಳು, ಎಲ್‌ಪಿಜಿ, ಜೆಡಿವೈ ಮತ್ತು ಭವಿಷ್ಯ ನಿಧಿಯಲ್ಲಿ ಆಧಾರ್ ಬಳಸಿದರೂ ಅದನ್ನು ಕಡ್ಡಾಯ ಮಾಡುವಂತಿಲ್ಲ ಎಂಬ ಅಕ್ಟೋಬರ್ 15, 2015ರ ಐವರು ನ್ಯಾಯಾಧೀಶರ ಪೀಠ ನೀಡಿದ ಆದೇಶವನ್ನು ಪುನರುಚ್ಚರಿಸುವುದು ಬಿಟ್ಟರೆ ಬೇರೇನೂ ಹೇಳಿಲ್ಲ, ಎಲ್ಲಿಯೂ ಬೇರೆ ಸೇವೆಗಳಲ್ಲಿ ಅದನ್ನು ಬಳಸಬಹುದು ಎಂದು ಅದು ಹೇಳಿಲ್ಲ. ಬ್ಯಾಂಕ್ ಖಾತೆಗಳಿಗೆ, ಪಾನ್ ಕಾರ್ಡ್‌ಗೆ ಆದಾಯ ತೆರಿಗೆ ರಿಟರ್ನ್ಸ್ ಗೆ ಇದನ್ನು ಕಡ್ಡಾಯ ಮಾಡಲು ನ್ಯಾಯಾಲಯದ ಆಕ್ಷೇಪವೇನೂ ಇಲ್ಲ ಎಂಬುದು ತಪ್ಪು ವರದಿ ಎಂದು ಉಷಾ ರಾಮನಾಥನ್ ಹೇಳುತ್ತಾರೆ. ಆಗಸ್ಟ್ 11, 2015ರ ಆದೇಶ ಆಧಾರ್‌ನಲ್ಲಿ ನೋಂದಾಯಿಸಿಕೊಳ್ಳಬೇಕೆಂದು ಕೂಡ ಕಡ್ಡಾಯ ಮಾಡುವಂತಿಲ್ಲ ಎಂದಿದೆ. ಸರಕಾರ ಹಾಗೇನಾದರೂ ಕಡ್ಡಾಯಗೊಳಿಸುವುದು ಮಾತ್ರವಲ್ಲ, ಬಳಸುವುದು ಕೂಡ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಅವರು ಹೇಳುತ್ತಾರೆ.

ಇನ್ನೊಂದು ಮಹತ್ವದ ವಿಷಯವೂ ಇದೆ ಎನ್ನುತ್ತಾರೆ ಉಷಾ ರಾಮನಾಥನ್. ವಿಭಿನ್ನ ಮಾಹಿತಿ ನೆಲೆಗಳಲ್ಲಿ ನಮ್ಮ ಆಧಾರ್ ನಂಬರ್ ಹಾಕಬೇಕೆಂದು ಸರಕಾರ ನಿರ್ದೇಶಿಸಿದರೆ ಅದು ಸುಪ್ರಿಂ ಕೋರ್ಟ್ ಆದೇಶದ ಉಲ್ಲಂಘನೆ ಮಾತ್ರವಲ್ಲ, ಈ ಸರಕಾರವೇ ಕಳೆದ ವರ್ಷ ಚರ್ಚೆ, ವಿವಾದವನ್ನು ತಪ್ಪಿಸಿಕೊಳ್ಳಲು 'ಮನಿಬಿಲ್' ಎಂದು ಅಂಗೀಕರಿಸುವಂತೆ ಮಾಡಿದ ಕಾನೂನಿನ ಉಲ್ಲಂಘನೆಯೂ ಆಗುತ್ತದೆ.

ಆದರೆ ಈ ಸರಕಾರಕ್ಕೆ ಇವುಗಳ ಪರಿವೆಯೇ ಇದ್ದಂತಿಲ್ಲ.



ವ್ಯಂಗ್ಯಚಿತ್ರ:ಕೇಶವ್, ದಿ ಹಿಂದು



ನವಭಾರತ ಮೂಡಿ ಬರುತ್ತಿದೆ!

ಹೊಲಸು ಹೇಳಿಕೆಗಳನ್ನು ಪ್ರತಿಭಟಿಸಿದರೆ ಸಾಮೂಹಿಕ ಅತ್ಯಾಚಾರದ ಬೆದರಿಕೆ

ಎಐಡಿಡಬ್ಲ್ಯುಎ ಖಂಡನೆ, ಕ್ರಮ ಕೈಗೊಳ್ಳು ಆಗ್ರಹ

ಪಶ್ಚಿಮ ಬಂಗಾಲದ ಒಬ್ಬ ಕವಿ ಶ್ರೀಜತೊ ತನ್ನ ಎದುರಲ್ಲೇ ಉತ್ತರ ಪ್ರದೇಶದ ಮುಖ್ಯಮಂತ್ರಿಯ ಸಹಯೋಗಿಯೊಬ್ಬ ಮುಸ್ಲಿಂ ಮಹಿಳೆಯರನ್ನು ಸಮಾಧಿಯಿಂದ ಹೊರಗೆಳೆದು ಬಲಾತ್ಕರಿಸಬೇಕು ಎಂದ ಹೊಲಸು ಹೇಳಿಕೆಯ ವಿರುದ್ಧ ಪ್ರತಿಭಟಿಸಿದರು. ಆತನ ವಿರುದ್ಧ ಆರೆಸ್ಸೆಸ್ ಕಾರ್ಯಕರ್ತರು ದೂರು ದಾಖಲಿಸಿದರು. ಎಫ್‌ಐಆರ್ ಮತ್ತು ಜಾಮೀನುರಹಿತ ಆರೋಪ ಹಾಕಲಾಯಿತು.

ಇದನ್ನು ಇತರ ಕವಿಗಳು ಲೇಖಕರು, ಕಲಾವಿದರು ಪ್ರತಿಭಟಿಸಿದರು. ಈ ಪ್ರತಿಭಟನೆಯ ನೇತೃತ್ವ ವಹಿಸಿದವರು ಇನ್ನೊಬ್ಬ ಬಂಗಾಲಿ ಕವಯಿತ್ರಿ ಮಂದಕ್ರಾಂತಾ ಸೆನ್. ಆರೆಸ್ಸೆಸ್ ಕಾರ್ಯಕರ್ತರು ಇವರ ಬೆನ್ನು ಬಿದ್ದರು. ಅವರಿಗೆ ಸಾಮೂಹಿಕ ಬಲಾತ್ಕಾರದ ಬೆದರಿಕೆಗಳನ್ನು ಹಾಕಲಾರಂಭಿಸಿದರು. ಆಕೆ ಈ ಬೆದರಿಕೆಗಳ ವಿರುದ್ಧ ದೂರು ದಾಖಲಿಸಲು ಹೋದಾಗ ಪೋಲೀಸರು ಅದನ್ನು ದಾಖಲಿಸಲು ನಿರಾಕರಿಸಿದ್ದಾರೆ.


ಇದು ಅತ್ಯಂತ ಆಘಾತಕಾರಿ, ಈ ರೀತಿ ನಿರಾಕರಿಸುವ ಮೂಲಕ ಪೊಲೀಸರು ಈ ಮಂದಿಗೆ ಪರೋಕ್ಷ ಬೆಂಬಲವನ್ನು ನೀಡಿದ್ದಾರೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ . ತಪ್ಪಿತಸ್ಥರ ವಿರುದ್ಧ ಕ್ರಮ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ರೋಮಿಯೋ ನಿಗ್ರಹ ಪಡೆ-ಡಿಜಿಪಿಯಿಂದ ನಿಯಮಾವಳಿ

ಉತ್ತರಪ್ರದೇಶದ ಹೊಸ ಬಿಜೆಪಿ ಸರಕಾರ ರೋಮಿಯೋ-ನಿಗ್ರಹ ಪಡೆಗಳ ವ್ಯವಸ್ಥೆಯನ್ನು ಆರಂಭಿಸಿದ ಕೆಲವೇ ದಿನಗಳಲ್ಲಿ ಬಂದ ಹಲವಾರು ದೂರುಗಳಿಂದಾಗಿ ರಾಜ್ಯದ ಡಿಜಿಪಿ ಈ ಬಗ್ಗೆ ಕಟ್ಟುನಿಟ್ಟಾದ ನಿಯಮಾವಳಿಗಳನ್ನು ಪಾಲಿಸುವಂತೆ ಆದೇಶ ಹೊರಡಿಸಿದ್ದಾರೆ ಎಂದು ವರದಿಯಾಗಿದೆ.

ಈ ಆದೇಶ ಈಗಾಗಲೇ ಈ ಹೆಸರಲ್ಲಿ ಏನೇನು ನಡೆಯುತ್ತಿದೆ ಎಂಬುದರ ಒಂದು ಚಿತ್ರವನ್ನು ಕೊಡುತ್ತದೆ ಎಂದೊಬ್ಬರು ಟಿಪ್ಪಣಿ ಮಾಡಿದ್ದಾರೆ. ಕುತ್ತಿಗೆ ಪಟ್ಟಿ ಹಿಡಿಯಬಾರದು, ತಲೆ ಬೋಳಿಸಬಾರದು, ಉಠಕ್-ಬೈಠಕ್ ಮಾಡಿಸಬಾರದು, ಪಾರ್ಕುಗಳಲ್ಲಿ ಕುಳಿತ ಜೋಡಿಗಳ ಐಡಿ ಕಾರ್ಡ್ ಕೇಳಬಾರದು, ಪ್ರಶ್ನಿಸಬಾರದು, ಅವಮಾನ ಮಾಡಬಾರದು ಎಂದು ವಿಧಿಸಿರುವ ಈ ಆದೇಶ ಎಲ್ಲಕ್ಕೂ ಮುಖ್ಯವಾಗಿ ಯಾವುದೇ ಖಾಸಗಿ ವ್ಯಕ್ತಿ , ಸ್ವಯಂನೇಮಿತ ಗುಂಪು ಇಂತಹ ಕೆಲಸ ಮಾಡಬಾರದು ಎಂದು ಹೇಳಿದೆ. ಇವೆಲ್ಲ ಈ ಹೊಸ ಪಡೆಗಳು ಗೂಂಡಾ ಪಡೆಗಳನ್ನು ಹೋಲುತಿದ್ದವೇ ಎಂಬ ಸಂದೇಹ ಉಂಟು ಮಾಡಿದರೆ ಆಶ್ಚರ್ಯವಿಲ್ಲ.

ಎಲ್ಲ ಬಿಜೆಪಿ ರಾಜ್ಯ ಸರಕಾರಗಳು ಗೋಮಾಂಸ ನಿಷೇದವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲು ಮುಂದಾಗುತ್ತಿವೆ ಎಂಬ ಸುದ್ದಿಯ ಹಿಂದೆ-ಯೇ ಈಶಾನ್ಯ ಭಾರತದ ಬಿಜೆಪಿ ಮುಖಂಡರುಗಳು ತಮ್ಮ ಪ್ರದೇಶಗಳಿಗೆ ಇದು ಅನ್ವಯವಾಗುವದಿಲ್ಲ ಎಂದು ಸ್ಪಷ್ಟ ಪಡಿಸುವ ಹೇಳಿಕೆಗಳನ್ನು ನೀಡಿದ್ದಾರೆ. ಕೇಂದ್ರ ಬಿಜೆಪಿ ಮುಖಂಡರು ಈ ಪ್ರದೇಶದ ವಾಸ್ತವತೆಯ ಅರಿವಿದೆ ಎಂದು ಅವರು ಹೇಳಿದ್ದಾರೆ.-ಸುದ್ದಿ



ವ್ಯಂಗ್ಯಚಿತ್ರ: ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ನೋಟು ರದ್ದತಿ ಮತ್ತು ಮರುನಾಣ್ಯೀಕರಣ–ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವ ರಿಸರ್ವ್ ಬ್ಯಾಂಕ್ ವರದಿ



ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ ಬಿಡುಗಡೆ ಮಾಡಿರುವ ಮೂರನೆ ತ್ರೈಮಾಸಿಕದ ಜಿಡಿಪಿ ಅಂದಾಜು ದರ ಮತ್ತು ಉತ್ತರ ಪ್ರದೇಶದಲ್ಲಿ ಬಿಜೆಪಿಯ ವಿಜಯ ನೋಟು ರದ್ದತಿಯಿಂದಾಗಿ ಜನರಿಗೆ ತೊಂದರೆಯಾಗಿತ್ತು ಎಂದು ವಾದಿಸಿದ್ದು ತಪ್ಪು ಎಂಬುದಾಗಿ ಕೆಲವು ಮಂದಿ ಇತ್ತೀಚಿನ ದಿನಗಳಲ್ಲಿ ಮಂಡಿಸುತ್ತಿರುವ ವಾದವು ವೈಜ್ಞಾನಿಕ ಪ್ರತಿಪಾದನೆಗೂ ಮತ್ತು ಜನಜನಿತ ಅಭಿಪ್ರಾಯಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲ ಮಾಡಿಕೊಳ್ಳುವ ವಿಚಿತ್ರ ವಾದ. ನೋಟು ರದ್ದತಿ ಬೀರಿದ್ದ ಅನರ್ಥಕರ ಪರಿಣಾಮಗಳು ಮುಗಿದು ಹೋಗಿವೆ ಎಂದು ರಿಸರ್ವ್ ಬ್ಯಾಂಕ್ ಹೇಳುವ ರೀತಿಯಲ್ಲಿ ವಾದಿಸುವುದು ಎರಡು ಪಟ್ಟು ತಪ್ಪಾಗುತ್ತದೆ.

–ಪ್ರೊ.ಪ್ರಭಾತ್ ಪಟ್ನಾಯಕ್ ('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಅವರ The Reserve Bank on Remonetisation ಲೇಖನದ ಸಾರಾಂಶ)

ನೋಟು ರದ್ದತಿಯಿಂದಾದ ಪರಿಣಾಮಗಳ ಬಗ್ಗೆ ತನ್ನ ಪ್ರಾಥಮಿಕ ಅಂದಾಜಿನ ಒಂದು ದಸ್ತಾವೇಜನ್ನು ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಹೊರತಂದಿದೆ. ಈ ಕ್ರಮದಿಂದ ಉತ್ಪಾದನಾ ಚಟುವಟಿಕೆಗಳಿಗೆ ತೊಂದರೆಯಾಗಿತ್ತು ಎಂದು ಒಪ್ಪಿಕೊಂಡಿರುವ ರಿಸರ್ವ್ ಬ್ಯಾಂಕ್, ಫೆಬ್ರವರಿ 17ರ ಒಳಗೆ ಎಲ್ಲ ತೊಂದರೆಗಳೂ ನಿವಾರಣೆಯಾಗಿರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಈ ದಸ್ತಾವೇಜಿನಲ್ಲಿ ಒದಗಿಸಿರುವ ಅಂಕಿ ಅಂಶಗಳ ಪ್ರಕಾರ, ರದ್ದಾದ ನೋಟುಗಳ ಒಟ್ಟು ಮೌಲ್ಯದ 60%ರಷ್ಟು ಮೌಲ್ಯದ ಹೊಸ ನೋಟುಗಳನ್ನು ಫೆಬ್ರವರಿ 17ರವರೆಗೆ ಪೂರೈಸಲಾಗಿತ್ತು. ನಂತರದ ಒಂದು ತಿಂಗಳ ಬಳಿಕವೂ ಚಲಾವಣೆಯಲ್ಲಿದ್ದ ಹೊಸ ನೋಟುಗಳ ಮೌಲ್ಯ 70%ಗಿಂತ ಹೆಚ್ಚಿಗೆ ಇರಲಿಲ್ಲ. ಈ ಹೊತ್ತಿಗೂ ಹೊಸ ನೋಟುಗಳ ಪೂರೈಕೆಯು ನೋಟು ರದ್ದತಿಯಿಂದಾದ ತೊಂದರೆಗಳನ್ನು ನಿವಾರಿಸುವ ಮಟ್ಟದಲ್ಲಿಲ್ಲ. ಆದ್ದರಿಂದ, ರದ್ದಾದ ನೋಟುಗಳ ಮೌಲ್ಯಕ್ಕೆ ಹೋಲಿಸಿದರೆ ಕೇವಲ 60%ರಷ್ಟು ಮೌಲ್ಯದ ಹೊಸ ನೋಟುಗಳನ್ನು ಪೂರೈಸಿದ್ದ ಪರಿಸ್ಥಿತಿಯಲ್ಲಿ, ಉತ್ಪಾದನಾ ಚಟುವಟಿಕೆಗಳಿಗೆ ಉಂಟಾಗಿದ್ದ ತೊಡಕುಗಳು ಫೆಬ್ರವರಿ ಮುಗಿಯುವುದರ ಒಳಗೆ ನಿವಾರಣೆಯಾಗಿವೆ ಎಂದು ರಿಸರ್ವ್ ಬ್ಯಾಂಕ್ ಹೇಳಿಕೊಂಡಿರುವುದು ಒಪ್ಪುವ ಮಾತೇ ಅಲ್ಲ.

ನಗದು ಹಣದ ಕೊರತೆ ಇದ್ದಾಗ, ಆ ಪರಿಸ್ಥಿತಿಯನ್ನು ನಿಭಾಯಿಸುವ ಉದ್ದೇಶದಿಂದ ಅನೇಕ ರೀತಿಯ ಉಪಾಯಗಳು ಹುಟ್ಟಿಕೊಳ್ಳುತ್ತವೆ. ಬಹಳ ಸಾಮಾನ್ಯವಾಗಿ ಕಾಣುವ ಸರಳ ಉಪಾಯವೆಂದರೆ, ಇಂತಿಷ್ಟು ಹಣ ಕೊಡಬೇಕಿದೆ ಎಂಬುದನ್ನು ಕಾಗದದ ಒಂದು ಚೂರಿನಲ್ಲಿ ನಮೂದಿಸುವುದು. ಕೆಲವು ಸಲ ಆ ಕಾಗದದ ಚೂರೂ ಇರುವುದಿಲ್ಲ. ಕೇವಲ ಬಾಯಿಮಾತಿನ ನಂಬಿಕೆಯ ಮೇಲೆ ಅನೇಕ ವ್ಯವಹಾರಗಳು ನಡೆಯುತ್ತವೆ. ಬಾಯಿಮಾತಿನ ಮೇಲಿನ ನಂಬಿಕೆಯೂ ನಗದು ಹಣದ ಸ್ಥಾನ ಪಡೆಯುತ್ತದೆ.

ಇಂತಹ ಉಪಾಯಗಳು ಒಂದು ಮಟ್ಟದವರೆಗೆ ನೆರವಾಗುತ್ತವೆ. ಈ ಮಿತಿಯಿಂದಾಗಿಯೇ ಜನರಿಗೆ ಹಣ ಬಳಕೆಯ ಅವಶ್ಯಕತೆ ಉಂಟಾಗಿರುವುದು. ಅನೌಪಚಾರಿಕ ವಲಯ ದೊಡ್ಡದಿರುವ ನಮ್ಮ ಅರ್ಥವ್ಯವಸ್ಥೆಯಲ್ಲಿ ಬಳಕೆಯಾಗುತ್ತಿರುವ ಅಧಿಕ ಪ್ರಮಾಣದ ಹಣ ನಗದು ರೂಪದಲ್ಲಿದೆ. ಆದ್ದರಿಂದ, ಅರ್ಥವ್ಯವಸ್ಥೆ ಸಾಧಾರಣ ಪರಿಸ್ಥಿತಿಗೆ ಮರಳಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿಕೊಂಡಿರುವುದು ವಿಚಿತ್ರವಾಗಿದೆ. ಒಂದು ವೇಳೆ ರದ್ದಾದ ನೋಟುಗಳ ಮೌಲ್ಯದ 98% ಹೊಸ ನೋಟುಗಳನ್ನು ಚಲಾವಣೆಗೆ ಬಿಟ್ಟಿದ್ದರೆ, ರಿಸರ್ವ್ ಬ್ಯಾಂಕ್ ಹೇಳಿರುವ ಮಾತುಗಳಿಗೆ ವಿಶ್ವಾಸಾರ್ಹತೆ ಇರುತ್ತಿತ್ತು. ಕೇವಲ 60%ರಷ್ಟು ಮೌಲ್ಯದ ಹೊಸ ನೋಟುಗಳನ್ನು ಬಿಡುಗಡೆ ಮಾಡಿರುವ ರಿಸರ್ವ್ ಬ್ಯಾಂಕ್, ಅರ್ಥವ್ಯವಸ್ಥೆ ಸಾಧಾರಣ ಪರಿಸ್ಥಿತಿಗೆ ಮರಳಿದೆ ಎಂದು ಹೇಳಿಕೊಳ್ಳುವುದು ವಿಚಾರ ಶೂನ್ಯವಾಗಿದೆ.

ನಗದು ರಹಿತತೆ–ದಬ್ಬಾಳಿಕೆಯ ಕ್ರಮ

ವಾಸ್ತವವಾಗಿ, ನೋಟು ರದ್ದತಿಯ ಮೊದಲಿನ ಪರಿಸ್ಥಿತಿಗೆ ಹೋಲಿಸಿದರೆ, ಅರ್ಥವ್ಯವಸ್ಥೆಯು ಅದೇ ಮಟ್ಟದ ಹಿಂದಿನ ಸಾಧಾರಣ ಪರಿಸ್ಥಿತಿಗೆ ಮರಳುವುದು ಅನುಮಾನ. ಈ ಅನುಮಾನಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ಜನರು ತಮ್ಮ ವ್ಯವಹಾರಗಳನ್ನು ನಗದು ರಹಿತವಾಗಿ ನಡೆಸಬೇಕೆಂದು ಸರ್ಕಾರ ಆಗ್ರಹಿಸುತ್ತಿದೆ. ಆದ್ದರಿಂದ, ರದ್ದಾದ ಮೌಲ್ಯದಷ್ಟೇ ಪ್ರಮಾಣದ ಹೊಸ ನೋಟುಗಳನ್ನು ಚಲಾವಣೆಗೆ ಬಿಡುವುದಿಲ್ಲ ಎಂದು ಸರ್ಕಾರವೇ ಸ್ಪಷ್ಟಪಡಿಸಿದೆ. ಇದೊಂದು ದಬ್ಬಾಳಿಕೆಯ ಕ್ರಮ. ನಗದು ಹಣದ ಮೂಲಕ ನಡೆಯುವ ವ್ಯವಹಾರಗಳಿಗೆ ಯಾವುದೇ ವೆಚ್ಚ ತಗುಲುವುದಿಲ್ಲ. ಆದರೆ, ನಗದು ಹಣದ ಬದಲಾಗಿ ಡಿಜಿಟಲ್ ರೂಪದಲ್ಲಿ ನೆಡೆಯುವ ವ್ಯವಹಾರಗಳಿಗೆ ಇಂತಹ ಸೇವೆಯನ್ನು ಒದಗಿಸುವ ಸಂಸ್ಥೆಗಳಿಗೆ ಶುಲ್ಕ ತೆರಬೇಕಾಗುತ್ತದೆ. ಆದ್ದರಿಂದ, ನಗದು ಹಣದ ಬದಲಾಗಿ ಡಿಜಿಟಲ್ ರೂಪದಲ್ಲಿ ವ್ಯವಹರಿಸಬೇಕೆಂದು ಜನರನ್ನು ಬಲಾತ್ಕರಿಸುವುದು ಮತ್ತು ಅದರ ಪರಿಣಾಮವಾಗಿ, ಹಣಕಾಸು ಸಂಸ್ಥೆಗಳ ಲಾಭ ಹೆಚ್ಚಿಸಲು ಜನರು ತಮ್ಮ ತೀರಾ ಕಡಿಮೆ ಗಳಿಕೆಯಲ್ಲೇ ಇನ್ನೂ ಒಂದಂಶವನ್ನು ಕಳೆದುಕೊಳ್ಳುವಂತೆ ಮಾಡಲಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಸ್ವಲ್ಪವೂ ಅಳುಕಿಲ್ಲ. ತುಸು ಅನುಮಾನ ಹೊಂದಿತ್ತು, ಆರಂಭದಲ್ಲಿ. ಉತ್ತರ ಪ್ರದೇಶದ ಚುನಾವಣಾ ಫಲಿತಾಂಶಗಳ ನಂತರ ಅದೂ ಸಹ ಮಾಯವಾಗಿದೆ.

ನಗದು ಹಣದ ಬದಲಾಗಿ ಡಿಜಿಟಲ್ ರೂಪದಲ್ಲಿ ವ್ಯವಹರಿಸುವಂತೆ ಜನರನ್ನು ಅಣಿಗೊಳಿಸುವ ಉದ್ದೇಶದಿಂದ, ರದ್ದಾದ ನೋಟುಗಳ ಒಟ್ಟು ಮೌಲ್ಯಕ್ಕಿಂತ ಒಂದೂವರೆಯಿಂದ ಎರಡು ಲಕ್ಷ ಕೋಟಿ ರೂಪಾಯಿಗಳಷ್ಟು ಕಡಿಮೆ ಪ್ರಮಾಣದ ಹೊಸ ಹೊಸ ನೋಟುಗಳನ್ನು ಚಲಾವಣೆಗೆ ಬಿಡುವುದಾಗಿ ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಮುಕುಲ್ ರೋಹಿತ್ಗಿ ಸುಪ್ರೀಂ ಕೋರ್ಟಿಗೆ ತಿಳಿಸಿದ್ದಾರೆ. ನಂತರ ಅರುಣ್ ಜೇಟ್ಲಿ ಈ ಅಂಶವನ್ನು ದೃಢಪಡಿಸಿದ್ದಾರೆ. ರದ್ದಾದ ಪ್ರಮಾಣದಷ್ಟೇ ಹೊಸ ನೋಟುಗಳನ್ನು ಚಲಾವಣೆಗೆ ತರದಿದ್ದರೆ ಅನೌಪಚಾರಿಕ ವಲಯದ ಕಷ್ಟ ಕಾರ್ಪಣ್ಯಗಳು, ಬದಲಾವಣೆಯ ಕಾಲದ ತೊಡಕುಗಳಾಗದೆ, ಶಾಶ್ವತವಾಗಿಯೇ ಉಳಿಯುತ್ತವೆ.

ಬಂಡವಾಳದ ಕೇಂದ್ರೀಕರಣ

ಎರಡನೆಯದಾಗಿ, ಪೂರ್ಣಪ್ರಮಾಣದಲ್ಲಿ ಹೊಸ ನೋಟುಗಳನ್ನು ಚಲಾವಣೆಗೆ ತಂದರೂ ನೋಟು ರದ್ದತಿಯ ಮುನ್ನ ಇದ್ದ ಪರಿಸ್ಥಿತಿಗೆ ಮರಳಲಾಗುವುದಿಲ್ಲ. ಏಕೆಂದರೆ, ಬದಲಾವಣೆಯ ಕಾಲದ ತೊಡಕುಗಳೂ ಸಹ ಅರ್ಥವ್ಯವಸ್ಥೆಯ ಮೇಲೆ ಬಹಳ ಕಾಲ ಉಳಿಯುವಂತಹ ಹಾನಿ ಉಂಟುಮಾಡುತ್ತವೆ. ಉದಾಹರಣೆಗೆ, ಕಿರು ಉತ್ಪಾದಕರ ಮೇಲೆರಗಿದ ಸಂಕಷ್ಟಗಳು. ನಗದು ಹಣದ ಕೊರತೆಯಿಂದಾಗಿ ವ್ಯೈ ತುಂಬಾ ಸಾಲಮಾಡಿಕೊಂಡ ಅಥವಾ ವ್ಯವಹಾರವನ್ನೇ ತೊ–ರೆದ ಕಿರು ಉತ್ಪಾದಕರು, ತಮ್ಮ ಉತ್ಪಾದನಾ ವ್ಯವಹಾರ ಮುಂದುವರೆಸುವುದಾಗಲಿ ಅಥವಾ ವ್ಯವಹಾರದಲ್ಲಿ ಮುಂದುವರೆಯುವುದಾಗಲಿ ಸಾಧ್ಯವಾಗುವುದಿಲ್ಲ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಕಿರು ಉತ್ಪಾದಕರ ಕಷ್ಟ ಕಾರ್ಪಣ್ಯಗಳು ಹೆಚ್ಚುತ್ತಿರುವ ಸಮಯದಲ್ಲಿ "ಬಂಡವಾಳದ ಕೇಂದ್ರೀಕರಣ" ಪ್ರಕ್ರಿಯೆಯೂ ನಡೆಯುತ್ತದೆ. ಅಷ್ಟೇ ಅಲ್ಲದೆ, ನಗದು ಹಣದ ಕೊರತೆ ನಿವಾರಣೆಯಾದ ಬಳಿಕವೂ ಈ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಮೂರನೆಯದಾಗಿ, ಖರ್ಚು–ವೆಚ್ಚಗಳ ತೀರ್ಮಾನಗಳಿಗೆ ಸಂಬಂಧಿಸಿದ ಒಂದು ಮುಖ್ಯವಾದ ಸಮಸ್ಯೆ ಇರುತ್ತದೆ. ಈ ಸಮಸ್ಯೆಯನ್ನು ಸರಿಯಾಗಿ ಗ್ರಹಿಸಿಲ್ಲ ಮತ್ತು ಅದರ ಬಗ್ಗೆ ಚರ್ಚೆ ನಡೆದಿರುವುದೂ ಕಡಿಮೆಯೇ. ಪ್ರಧಾನವಾಗಿ, ಎರಡು ವಿಧದ ಖರ್ಚು–ವೆಚ್ಚಗಳಿರುತ್ತವೆ. ಒಂದು, ಅನೇಕ ರೀತಿಯ ದಿನ ನಿತ್ಯದ ಖರ್ಚು–ವೆಚ್ಚಗಳು. ಈ ಖರ್ಚುಗಳ ಮಟ್ಟವು ಹಾಲಿ ವರಮಾನದ ಮಟ್ಟದ ಮೇಲೆ ಅವಲಂಬಿತವಾಗಿರುತ್ತವೆ. ಇನ್ನೊಂದು, ಆನೇಕ ರೀತಿಯ ಖರ್ಚು–ವೆಚ್ಚಗಳು ಅರ್ಥವ್ಯವಸ್ಥೆಯ ದೀರ್ಘಾವಧಿ ಸ್ಥಿತಿ–ಗತಿಗಳ ಮೇಲೆ ಅವಲಂಬಿತವಾಗಿರುತ್ತವೆ. ಅರ್ಥವ್ಯವಸ್ಥೆಯು ವೇಗವಾಗಿ ಬೆಳೆಯುತ್ತಿದ್ದರೆ, ವರ್ತಮಾನದಲ್ಲಿ ಇಂತಹ ವೆಚ್ಚಗಳ ಪ್ರಮಾಣವೂ ಅಧಿಕವಾಗಿರುತ್ತದೆ.

ಹೂಡಿಕೆಯ ವೆಚ್ಚಗಳು ಈ ಎರಡನೆಯ ಅಂಶಕ್ಕೆ ನಿದರ್ಶನವಾಗುತ್ತವೆ. ಅರ್ಥವ್ಯವಸ್ಥೆಯಲ್ಲಿ ಸ್ಥಗಿತತೆ ಇದ್ದರೆ, ಬಂಡವಾಳ ಸುರಕ್ಷಿತವಾಗಿ ಉಳಿಯುವಷ್ಟು ಕನಿಷ್ಟ ಹೂಡಿಕೆ ಆಗುತ್ತದೆ. ಅರ್ಥವ್ಯವಸ್ಥೆ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವಾಗ ಹೆಚ್ಚಿನ ಮಟ್ಟದ ಹೂಡಿಕೆಯಾಗುತ್ತದೆ. ಅಂದರೆ, ಹೂಡಿಕೆಗಳು ವರಮಾನದ ಮಟ್ಟಕ್ಕಿಂತಲೂ ಮುಖ್ಯವಾಗಿ, ಬೆಳವಣಿಗೆ ದರವನ್ನು ಅವಲಂಬಿಸಿರುತ್ತವೆ. ಈ ಮಾತು, ದೀರ್ಘ ಕಾಲ ಬಾಳುವ ಗೃಹೋಪಯೋಗಿ ವಸ್ತುಗಳ ಮೇಲಿನ ಖರ್ಚುಗಳಿಗೂ ಅನ್ವಯಿಸುತ್ತದೆ. ಬೆಳೆಯುತ್ತಿರುವ ಅರ್ಥವ್ಯವಸ್ಥೆಯಲ್ಲಿ, ಜನ ತಮ್ಮ ಉದ್ಯೋಗ ಉಳಿಸಿಕೊಳ್ಳುವ ಮತ್ತು ಹೆಚ್ಚಿಗೆ ಸಂಬಳ ಪಡೆಯುವ ವಿಶ್ವಾಸ ಹೊಂದಿರುತ್ತಾರೆ. ಅದರಿಂದಾಗಿ, ವರಮಾನ ಸಧ್ಯದಲ್ಲಿ ಇರುವ ಮಟ್ಟದಲ್ಲೇ ಅವರು ದೀರ್ಘ ಕಾಲ ಬಾಳುವ ಅನೇಕ ವಸ್ತುಗಳನ್ನು ಖರೀದಿಸಲು ಮುಂದಾಗುತ್ತಾರೆ. ಅರ್ಥವ್ಯವಸ್ಥೆಯಲ್ಲಿ ಸ್ಥಗಿತತೆ ಇದ್ದರೆ ಕೊಳ್ಳಲು ಜನ ಮುಂದಾಗುವುದಿಲ್ಲ.

ಆರ್ಥಿಕ ಮಂದಗತಿ

ಆದ್ದರಿಂದ, ಇಂತಹ ಖರ್ಚುಗಳ ಮಟ್ಟವು, ವರಮಾನವನ್ನು ಅವಲಂಬಿಸದೆ, ಬೆಳವಣಿಗೆ ದರವನ್ನು ಅವಲಂಬಿಸುತ್ತದೆ. ಬೆಳೆಯುತ್ತಿರುವ ಅರ್ಥವ್ಯವಸ್ಥೆಯಲ್ಲಿ, ನೋಟು ರದ್ದತಿಯ ಪರಿಣಾಮವಾಗಿ, ನಗದು ಹಣದ ಕೊರತೆ ಉಂಟಾಗಿದ್ದರಿಂದ, ಬೆಳವಣಿಗೆಯ ದರ ಇಳಿಕೆಯಾಗಿದೆ ಎಂದು ಈಗ ಅಂದುಕೊಳ್ಳೋಣ. ಈ ಸನ್ನಿವೇಶದಲ್ಲಿ ಹೂಡಿಕೆಗಳು ಇಳಿಯುತ್ತವೆ. ಅದೇ ಸಮಯದಲ್ಲಿ ಬೇಡಿಕೆಯೂ ಕುಸಿಯುವುದರಿಂದ ಬೆಳವಣಿಗೆ ದರ ಇನ್ನೂ ಕೆಳಗೆ ಇಳಿಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ನಗದು ಕೊರತೆ ನಿವಾರಣೆಯಾದರೂ(ಅಂದರೆ, ಠೇವಣಿ ಮಾಡಿದ್ದ ರದ್ದಾದ ನೋಟುಗಳಿಗೆ ಸಮನಾದ ಪ್ರಮಾಣದಲ್ಲಿ ಹೊಸ ನೋಟುಗಳನ್ನು ಪಡೆಯುವುದು), ಸಾಧಾರಣ ಪರಿಸ್ಥಿತಿಗೆ ಮರಳಲು ಸಾಧ್ಯವಿಲ್ಲ. ಏಕೆಂದರೆ, ನಗದು ಕೊರತೆಯ ಕಾಲದ ತೊಡಕುಗಳು ಉಂಟುಮಾಡಿದ್ದ ಹಾನಿ ಬಹಳ ಕಾಲ ಗಟ್ಟಿಯಾಗಿ ಉಳಿಯುವುದರಿಂದ, ಅರ್ಥವ್ಯವಸ್ಥೆಯ ಗತಿ ಬಹಳ ಕಾಲ ಮಂದವಾಗಿಯೇ ಉಳಿಯುತ್ತದೆ.

ಅರ್ಥವ್ಯವಸ್ಥೆಯ ಗತಿ ಮಂದವಾಗಿರುವುದರಿಂದ, ಕಿರು ಉತ್ಪಾದನಾ ವಲಯ ಮತ್ತಷ್ಟು ಹಾನಿಗೊಳಗಾಗುತ್ತದೆ. ನಗದು ಕೊರತೆಯಿಂದ ಉಂಟಾದ ಅದರ ಕಷ್ಟ ಕೋಟಲೆಗಳು, ಕೊರತೆ ನಿವಾರಣೆಯಾದ ನಂತರವೂ, ಬೇಡಿಕೆ ಕೊರತೆಯಿಂದಾಗಿ ಉಲ್ಬಣಗೊಳ್ಳುತ್ತವೆ. ಅಂತಹ ಮಂದ ಗತಿಯಿಂದಾಗಿ, ಸಂಬಳ ಕಡಿತ ಮತ್ತು ನಿರುದ್ಯೋಗ ಉಂಟಾಗಿ ಕೆಲಸಗಾರರ ಪರಿಸ್ಥಿತಿ ಸಂಪೂರ್ಣವಾಗಿ ಹಾಳಾಗುತ್ತದೆ.

ಇಮ್ಮಡಿ ತಪ್ಪು

ಹಾಗಾಗಿ, ನೋಟು ರದ್ದತಿ ಬೀರಿದ್ದ ಅನರ್ಥಕರ ಪರಿಣಾಮಗಳು ಮುಗಿದು ಹೋಗಿವೆ ಎಂದು ರಿಸರ್ವ್ ಬ್ಯಾಂಕ್ ಹೇಳುವ ರೀತಿಯಲ್ಲಿ ವಾದಿಸುವುದು ಎರಡು ಪಟ್ಟು ತಪ್ಪಾಗುತ್ತದೆ. ಮೊದಲಿಗೆ, ರದ್ದಾದ ನೋಟುಗಳಿಗೆ ಸಮ ಪ್ರಮಾಣದಲ್ಲಿ ಹೊಸ ನೋಟುಗಳನ್ನು ಪಡೆಯುವ ಮೂಲಕ ಈ ಅನರ್ಥಕರ ಪರಿಣಾಮಗಳಿಂದ ಪಾರಾಗಬಹುದು ಅಂದುಕೊಂಡರೂ, ನಾವು ರದ್ದಾದ ನೋಟುಗಳಿಗೆ ಸಮ ಪ್ರಮಾಣದ ಹೊಸ ನೋಟು ಪಡೆಯುವ ಪರಿಸ್ಥಿತಿಯಿಂದ ಇನ್ನೂ ಬಹಳ ದೂರದಲ್ಲಿದ್ದೇವೆ. ಎರಡನೆಯದಾಗಿ, ರದ್ದಾದ ನೋಟುಗಳಿಗೆ ಸಮ ಪ್ರಮಾಣದ ಹೊಸ ನೋಟು ಪಡೆಯುವ ಪರಿಸ್ಥಿತಿ ಒಂದು ವೇಳೆ ಇದ್ದರೂ, ನಗದು ಕೊರತೆಯಿಂದ ಉಂಟಾಗಿದ್ದ ಹಾನಿ ಬಹಳ ಕಾಲದವರೆಗೆ ಗಟ್ಟಿಯಾಗಿ ಉಳಿದ ಪರಿಣಾಮಗಳು ಅರ್ಥವ್ಯವಸ್ಥೆಯ ಗತಿ ಮಂದಗೊಳ್ಳುವ ಮೂಲಕ ವ್ಯಕ್ತವಾಗುತ್ತವೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನೋಟು ರದ್ದತಿಯು ಉಂಟುಮಾಡಿದ ಹಾನಿಕಾರಕ ಪರಿಣಾಮಗಳು ತತ್‌ಕ್ಷಣದಲ್ಲಿ ದುಡಿಯುವ ಜನತೆಯ ಮೇಲೆ ಬಿದ್ದ ನಂತರ, ಇನ್ನೂ ಹೆಚ್ಚಿನ ಹಾನಿಕಾರಕ ಪರಿಣಾಮಗಳು ಹಿಂಬಾಲಿಸುತ್ತವೆ – ನಗದು ಕೊರತೆಯಿಂದ ಅಲ್ಲದಿದ್ದರೂ, ನಗದು ಕೊರತೆಯಿಂದಲೇ ಆರಂಭವಾದ ಬೇಡಿಕೆ ಕೊರತೆ ಕಾರ್ಯಪ್ರವೃತ್ತವಾದುದರಿಂದಾಗಿ.

ನೋಟು ರದ್ದತಿಯಿಂದಾಗಿ ಯಾವುದೇ ಹಾನಿಕಾರಕ ಪರಿಣಾಮಗಳು ಜನತೆಯನ್ನು ತಟ್ಟಿಲ್ಲ ಎಂದು ಈಗ ಕೆಲವರು ವಾದಿಸುತ್ತಾರೆ. ಅವರ ವಾದಗಳು ಆಶ್ರಯಿಸುವ ಅಂಶಗಳು ಎರಡಿವೆ. ಒಂದು, ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ ಬಿಡುಗಡೆ ಮಾಡಿರುವ ಮೂರನೆ ತ್ರೈಮಾಸಿಕದ ಜಿಡಿಪಿ ಅಂ–ದಾಜು ದರ [ವಿವರಗಳು ಮಾರ್ಚ್13–19, 2017ರ ಜನಶಕ್ತಿ, ಸಂಚಿಕೆ–12ರಲ್ಲಿವೆ]. ಇನ್ನೊಂದು, ಉತ್ತರ ಪ್ರದೇಶದಲ್ಲಿ ಬಿಜೆಪಿಯ ವಿಜಯ. ನೋಟು ರದ್ದತಿಯ ಫಲವಾಗಿ ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆದ್ದಿದೆ. ಆದ್ದ–ರಿಂದ, ನೋಟು ರದ್ದತಿಯಿಂದಾಗಿ ಜನರಿಗೆ ತೊಂದ–ರೆಯಾಗಿತ್ತು ಎಂದು ವಾದಿಸಿದ್ದು ತಪ್ಪು ಎಂಬುದಾಗಿ ಕೆಲವು ಮಂದಿ ಇತ್ತೀಚಿನ ದಿನಗಳಲ್ಲಿ ಮಂಡಿಸುತ್ತಿರುವ ವಾದವು ವಿಚಿತ್ರವಾಗಿದೆ. ಏಕೆಂದರೆ, ಈ ವಾದವು, ಬಂಡವಾಳಶಾಹಿ ದೇಶಗಳ ಚುನಾವಣೆಗಳಲ್ಲಿ ಜನತೆ ಬೂರ್ಜ್ವಾ ಪಕ್ಷಗಳನ್ನು ಅಧಿಕಾರ ಪಡೆಯಲು ಆರಿಸುವುದರಿಂದ, ಬಂಡವಾಳಶಾಹಿ ವ್ಯವಸ್ಥೆಯು ಶೋಷಣೆಯಿಂದ ಕೂಡಿದೆ ಎಂದು ವಾದಿಸುವವರ ವಾದವೇ ತಪ್ಪು ಎನ್ನುವ ಕುತರ್ಕದ ವಾದವನ್ನು ಹೋಲುತ್ತದೆ. ಇಂತಹ ವಾದವು, ಒಂದು ವೈಜ್ಞಾನಿಕ ಪ್ರತಿಪಾದನೆಗೂ ಮತ್ತು ಜನಜನಿತ ಅಭಿಪ್ರಾಯಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲ ಮಾಡಿಕೊಂಡು ಯಾವುದೋ ಒಂದು ಅಭಿಪ್ರಾಯವನ್ನು ಸತ್ಯವೆಂದು ನಂಬುವಂತೆ ಜನರ ಮನವೊಲಿಸಲು ಸಾಧ್ಯವಾದರೆ ಅದು ಸತ್ಯವೇ ಆಗಿರಬೇಕು ಎಂದು ಸೂಚಿಸಿದಂತಾಗುತ್ತದೆ. ನೋಟು ರದ್ದತಿಯ ಪರಿಣಾಮಗಳು ವೈಜ್ಞಾನಿಕ ಅಧ್ಯಯನದ ವಿಷಯ. ಚುನಾವಣೆಗಳಲ್ಲಿ ಜನ ವ್ಯಕ್ತಪಡಿಸುವ ಅಭಿಪ್ರಾಯವು ಆ ಅಧ್ಯಯನದ ಫಲಿತಾಂಶವನ್ನು ನಿರ್ಧರಿಸುವುದಿಲ್ಲ.

ಗುಜರಾತ್ ವಿಧಾನಸಭಾ ಚುನಾವಣೆಯ ಅಜೆಂಡಾ ಸಿದ್ಧವಾಗುತ್ತಿದೆ

ಗುಜರಾತಿನಲ್ಲಿ ಈ ಡಿಸೆಂಬರ್‌ನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಬೇಕಾಗಿದೆ. ಅದಕ್ಕೆ ಸಿದ್ಧರಾಗಿ ಎಂದು ಪ್ರಧಾನ ಮಂತ್ರಿಗಳು ತಮ್ಮ ಪಕ್ಷದವರಿಗೆ ಕರೆ ನಿಡಿದ್ದಾರೆ. ಆ ಸಿದ್ಧತೆಯಾಗಿಯೋ ಎಂಬಂತೆ ಆಗಲೇ ಅಲ್ಲಿ ಕೋಮುವಾದಿ ವಾತಾವರಣ ಸೃಷ್ಟಿಯಾಗುತ್ತಿರುವಂತೆ ಕಾಣುತ್ತದೆ. ಇದರ ಮೊದಲ ಸೂಚನೆಗಳೆಂಬಂತೆ ಉತ್ತರ ಗುಜರಾತಿನ ಒಂದು ಹಳ್ಳಿಯಲ್ಲಿ ಕೋಮು ಗಲಭೆಯಲ್ಲಿ ಒಬ್ಬನ ಬಲಿಯಾಗಿದೆ. ಇತ್ತ ರಾಜಧಾನಿಯ ಪ್ರಮುಖ ನಗರ ಕೇಂದ್ರದಲ್ಲಿ ಒಂದು 'ವಿರಾಟ್ ಹಿಂದು ಸಮ್ಮೇಳನ' ನಡೆದು 12 ಅಂಶಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ. ಅದರ ಹೆಸರೇ 'ಮೊದಲು ಹಿಂದು'

ಪಟಾನ್ ಜಿಲ್ಲೆಯ ವಡವಳಿ ಎಂಬುದು ಸಾಕಷ್ಟು ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಸಮುದಾಯದವರು ವಾಸಸಿತ್ತಿರುವ ಹಳ್ಳಿ. 10ನೇ ತರಗತಿ ಬೋರ್ಡ್ ಪರೀಕ್ಷೆ ಮುಗಿಸಿ ಮನೆಗಳಿಗೆ ಹಿಂದಿರುಗುತ್ತಿದ್ದ ವಿದ್ಯಾರ್ಥಿಗಳ ನಡುವೆ ಒಂದು ಸಣ್ಣ ಜಗಳ ನಡೆಯಿತು. ನೋಡನೋಡುತ್ತಿರುವಷ್ರಲ್ಲಿ ಇದು ಕೋಮುಗಲಭೆಯ ರೂಪ ಪಡೆದು ಸುತ್ತಮುತ್ತಲ ಹಳ್ಳಿಗಳಿಗೂ ಹರಡಿತು. ಒಬ್ಬ ವ್ಯಕ್ತಿ ಸಾವನ್ನಪ್ಪಿದ. ಆತ ಅಲ್ಪಸಂಖ್ಯಾತ ಸಮುದಾಯದ ಹಿರಿ ವಯಸ್ಸಿನ ವ್ಯಕ್ತಿ. 50 ಮನೆಗಳಿಗೆ ಬೆಂಕಿ ಬಿತ್ತು. 10 ಮಂದಿಗೆ ತೀವ್ರ ಗಾಯಗಳಾದವು. ರಾಜ್ಯ ಮೀಸಲು ಪಡೆಯನ್ನು ತಂದು ನಿಲ್ಲಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಗಿ ಬಂತು. ಇನ್ನಷ್ಟು ಕೋಮು ಹಿಂಸಾಚಾರದ ಭಯದಿಂದ ಜನ ಪಕ್ಕದ ಹಳ್ಳಿಗೆ ಓಡಿ ಹೋಗಿ ಅಲ್ಲಿಯ ಮೆಡಿಕಲ್ ಕಾಲೇಜೊಂದರಲ್ಲಿ ಆಶ್ರಯ ಪಡೆಯಬೇಕಾಯಿತು. ಅವರೆಲ್ಲರೂ ಅಲ್ಪಸಂಖ್ಯಾತ ಸಮುದಾಯದ ವರಾಗಿದ್ದದ್ದು ಕಾಕತಾಳೀಯ ಆಗಿರಲಿಲ್ಲ.

ಆದರೂ ಇದಾದ 24 ಗಂಟೆಗಳೊಳಗೆ ಅಹಮಾದಾಬಾದಿನಲ್ಲಿ ನಡೆದ 'ವಿರಾಟ್ ಹಿಂದೂ ಸಮ್ಮೇಳನ'ದಲ್ಲಿ ವಿಹೆಚ್‌ಪಿಯ 'ಅಂತರ್ರಾಷ್ಟ್ರೀಯ ಅಧ್ಯಕ್ಷ'ರ ಡಾ.ಪ್ರವೀಣ್ ತೊಗಾಡಿಯ ಎಮದಿನಂತೆ ಹಿಂದುಗಳು ಬಾರತದಲ್ಲಿ ಬಹುಸಂಖ್ಯಾತರಾಗಿದ್ದರೂ ಜಂಟಿಯಾಗಿ ಅನ್ಯಾಯ ಮತ್ತು ಅಭದ್ರತೆಯನ್ನು ಎದುರಿಸುತ್ತಿದ್ದಾರೆ ಎಂದು ಗುಡುಗಿದರು. ಈ ಸಮ್ಮೇಳನವನ್ನು ಏರ್ಪಡಿಸಿದ್ದು ವಿಹೆಚ್‌ಪಿ, ಭಜರಂಗ ದಳ ಮತ್ತು ದುರ್ಗಾವಾಹಿನಿ.

ಈ ಸಮ್ಮೇಳನದಲ್ಲಿ ತೊಗಾಡಿಯ ಬಿಡುಗಡೆ ಮಾಡಿದ 12 ಅಂಶಗಳ 'ಮೊದಲು ಹಿಂದುಗಳು' ಎಂಬ ಚಾರ್ಟರ್ ಹಿಂದುಗಳನ್ನು ತಮ್ಮದೇ ದೇಶದಲ್ಲಿ ಎರಡನೇ ದರ್ಜೆಯ ನಾಗರಿಕರ ಮಟ್ಟಕ್ಕೆ ಇಳಿಸಲಾಗಿದೆ, ಮುಸ್ಲಿಂ ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ, ಹಜ್ ಸಬ್ಸಿಡಿ ಮೂಮತಾದ ಅಲ್ಪಸಂಖ್ಯಾತರನ್ನು 'ತುಷ್ಟೀಕರಿಸುವ' ಕ್ರಮಗಳನ್ನೆಲ್ಲ ನಿಲ್ಲಿಸಬೇಕು ಎಂದು ಆಗ್ರಹಿಸಲಾಗಿದೆ. "ಹಿಂದುಗಳಿಮದ ಖರೀದಿಸಿ, ಹಿಂದುಗಳನ್ನು ಕೆಲಸಕ್ಕೆ ತಗೊಳ್ಳಿ' ಎಂಬುದು ಇದರ ಮತ್ತೊಂದು ಘೋಷಣೆ. ಇದು 2002ರಲ್ಲಿ ವಿಹೆಚ್‌ಪಿಯ ವ್ಯಾಪಾರ ಮತ್ತು ಉದ್ಯೋಗಾವಕಾಶಗಳಲ್ಲಿ ಮುಸ್ಲಿಮರ ಆರ್ಥಿಕ ಬಹಿಷ್ಕಾರದ ಕರೆಯ ಮರು ಆವೃತ್ತಿಯಂತಿದೆ. ತಮಾಷೆಯ ಸಂಗತಿಯೆಂದರೆ ಮುಸ್ಲಿಂ 'ತುಷ್ಟೀಕರಣ'ವನ್ನು ಹೀಗಳೆಯುವ ಈ 12 ಅಂಶಗಳಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಬೇಕು ಎಂಬ ಬೇಡಿಕೆ! ಬಾಂಗ್ಲಾದೇಶೀಗಳನ್ನು ,ರೊಹಿಂಗ್ಯ ಮುಸ್ಲಿಮರನ್ನು ಹಿಂದಕ್ಕೆ ಕಳಿಸಬೇಕು, ಗೋಹತ್ಯೆ ನಿಷೇಧ ಇತ್ಯಾದಿ **ಈ ಚಾರ್ಟರ್‌ನ ಬೇಡಿಕೆಗಳಲ್ಲಿ ಹೊಸದೇನೂ ಇಲ್ಲದಿದ್ದರೂ ವಿಧಾನಸಭಾ ಚುನಾವಣೆಗಳಿಗೆ ಸಿದ್ಧರಾಗಿ ಎಂಬ ಕರೆಯ ಬೆನ್ನಲ್ಲೇ ನಡೆದಿರುವುದು ಬಹಳ ಮಹತ್ವದ್ದಾಗಿದೆ. ತೊಗಾಡಿಯ ಗುಜರಾತಿನ ಯೋಗಿ ಆದಿತ್ಯನಾಥರೇ ಎಂದೂ ಕೆಲವರು ಕೇಳಲಾರಂಭಿಸಿದ್ದಾರಂತೆ!**

ನಾಗ ಶಾಂತಿ ಒಪ್ಪಂದದ ಪೂರ್ಣ ಪಾಟವನ್ನು ಪ್ರಧಾನಿಗಳು ಬಿಡುಗಡೆ ಮಾಡುತ್ತಿಲ್ಲವೇಕೆ?

– ಸೀತಾರಾಮ್ ಯೆಚುರಿ

ಆಗಸ್ಟ್ 3,2015 ರಂದು ಸಹಿ ಹಾಕಿರುವ ಒಪ್ಪಂದದಪ್ರಕಾರ 'ಬೃಹತ್ ನಾಗಲಿಂ' ಈಗಿನ ನಾಗಾಲ್ಯಾಂಡಿನ ಜೊತೆಗೆ ಅಸ್ಸಾಂ, ಮಣಿಪುರ ಮತ್ತು ಅರುಣಾಚಲ ಪ್ರದೇಶದಲ್ಲಿ ನಾಗ ಜನಗಳು ವಾಸಿಸುತ್ತಿರುವ ಪ್ರದೇಶಗಳೂ ಸೇರಿರುತ್ತವೆ ಎಂದು ಎನ್‌ಎಸ್‌ಸಿಎನ್(ಐಎಂ) ಮುಖಂಡ ಥುಯಿಂಗಲೆಂಗ್ ಮುಯ್‌ವಹ್ ಈ ವಾರ ಹೇಳಿದ್ದಾರೆ. ಕೇಂದ್ರ ಸರಕಾರ ಈತನೊಂದಿಗೆ ಸಹಿ ಮಾಡಿ 'ಚೌಕಟ್ಟು ಒಪ್ಪಂದ'ದಲ್ಲಿ ಈ ಅಂಶ ಇದೆ ಎಂದು ಆತ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸುತ್ತ "ಇದು ದೋಷಪೂರಿತ ವರದಿ. ಭಾರತ ಸರಕಾರದಿಂದ ಇಂತಹ ಒಪ್ಪಂದ ಅಥವ ನಿರ್ಣಯ ಇಲ್ಲ" ಎಂದು ಕೇಂದ್ರ ಸರಕಾರದ ಗೃಹ ಮಂತ್ರಾಲಯದ ವಕ್ತಾರರು ಹೇಳಿದ್ದಾರೆ.

ಅದರೆ ಇದುವರೆಗೂ ಕೇಂದ್ರ ಸರಕಾರ ಈ ಒಪ್ಪಂದವನ್ನು ಗುಟ್ಟಾಗಿಯೇ ಇಟ್ಟಿದೆ. ಪ್ರಧಾನ ಮಂತ್ರಿಗಳು ಈ ಒಪ್ಪಂದವನ್ನು ಬಹಿರಂಗ ಪಡಿಸುತ್ತಿಲ್ಲವೇಕೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪ್ರಶ್ನಿಸಿದ್ದಾರೆ.

ಕಾಶ್ಮೀರ ಕಣಿವೆ: ಮೂರು ನಾಗರಿಕರ ಸಾವಿನೊಂದಿಗೆ ಮತ್ತೆ ಅಶಾಂತಿಯ ವಾತಾವರಣ

ಕಾಶ್ಮೀರ ಕಣಿವೆಯ ಚದೂರ ಬುದ್ಗಾವ್ ಎಂಬಲ್ಲಿ ಮತ್ತೆ ಮೂವರು ನಾಗರಿಕರು ಭದ್ರತಾ ಪಡೆಗಳ ಕಾರ್ಯಾಚರಣೆಯಲ್ಲಿ ಅಸು ನೀಗಿದ್ದಾರೆ, 18 ಮಂದಿ ಗಾಯಗೊಂಡಿದ್ದಾರೆ. ಇದರ ವಿರುದ್ಧ ಕಾಶ್ಮೀರ ಕಣಿವೆಯಾದ್ಯಂತ ಮಾರ್ಚ್ 29ರಂದು ಪ್ರತಿಭಟನೆ ವ್ಯಕ್ತವಾಗಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ ಎಂದು ವರದಿಯಾಗಿದೆ. ಕಾಶ್ಮೀರ ವಿಶ್ವವಿದ್ಯಾಲಯ, ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವದ್ಯಾಲಯದ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದೂ ಹೇಳಲಾಗಿದೆ.

ಮತ್ತೆ ನಾಗರಿಕರ ಪ್ರಾಣಹಾನಿಯಾಗಿರುವ ಬಗ್ಗೆ ಜಮ್ಮು-ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡರೂ, ಶಾಸಕರೂ ಆದ ಮಹಮ್ಮದ್ ಯೂಸುಫ್ ತರಿಗಾಮಿ ಆಘಾತ ಮತ್ತು ದುಃಖ ವ್ಯಕ್ತಪಡಿಸಿದ್ದಾರೆ. ಭದ್ರತಾ ಪಡೆಗಳು ಸಂಯಮದಿಮದ ವರ್ತಿಸಿದ್ದರೆ ಇದನ್ನು ತಪ್ಪಿಸಬಹುದಿತ್ತು ಎಂದು ಅವರು ಹೇಳಿದ್ದಾರೆ.

ಕಾನೂನು ಜಾರಿಗೊಳಿಸುವ ಸಂಸ್ಥೆಗಳು ಹಿಂದಿನ ಇಂತಹ ಅನುಭವಗಳಿಂದ ಪಾಟ ಕಲಿಯಲು ನಿರಾಕರಿಸುತ್ತಿವೆ, ಇದು ಪರಿಸ್ಥಿತಿಯನ್ನು ಇನ್ನಷ್ಟು ಉದ್ವಿಗ್ನಗೊಳಿಸುವುದು ಖಂಡಿತ. ಇಂತಹ ಬೇಜವಾಬ್ದಾರಿತನವನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

"ದುರದೃಷ್ಟವಶಾತ್ ನಾಗರಿಕರು ಮತ್ತು ಉಗ್ರಗಾಮಿಗಳ ನಡುವೆ ವ್ಯತ್ಯಾಸವನ್ನು ಮಾಡಲಾಗುತ್ತಿಲ್ಲ." ಎಂದು ಖೇದ ವ್ಯಕ್ತಪಡಿಸಿರುವ ಅವರು ಭದ್ರತಾ ಪಡೆಗಳು ಎರ್ರಾಬಿರ್ರಿಯಾಗಿ ವರ್ತಿಸುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದಿದ್ದಾರೆ.

ಹಿರಿಯ ಪತ್ರಕರ್ತ ಪ್ರೇಮ್ ಶಂಕರ್ ಝಾ ಅವರು ಕಾಶ್ಮೀರ ಮಹಾವಿಪತ್ತಿನತ್ತ ಸಾಗುತ್ತಿದೆ ಎಂದು ಖೇದದಿಂದ ಹೇಳಿದ್ದಾರೆ. ಬುದ್ಗಾಮ್‌ನಲ್ಲಿ ಸಂಭವಿಸಿರುವ ಈ ಘಟನೆಯ ಬಗ್ಗೆ ಬರೆಯುತ್ತ ಇದುವರೆಗೆ ಈ ಸಂಘರ್ಷದಿಂದ ದೂರ ಇದ್ದ ಕಾಶ್ಮೀರ ಕಣಿವೆಯ ಗ್ರಾಮಸ್ಥರು ಈಗ ಭದ್ರತಾ ಪಡೆಗಳು ಸುತ್ತುವರೆಯುವ ಉಗ್ರಗಾಮಿಗಳನ್ನು ಉಳಿಸಲು ಸಾಯಲಿಕ್ಕೂ ಸಿದ್ಧರಾಗಿದ್ದಾರೆ. ಈ ಬೇಸಿಗೆ ಕಳೆಯುವದರ ಒಳಗೆ ದೇಶ ಕಾಶ್ಮೀರದಲ್ಲಿ ಒಂದು ಯುದ್ಧವನ್ನು ಎದುರಿಸಬೇಕಾಗಿ ಬರಬಹುದು. **ಇದಕ್ಕೆ ಕಾರಣ ಚಳಿಗಾಲದಲ್ಲಿ ದೊರೆತ ತುಸು ವಿರಾಮವನ್ನು ಕಳೆದ ಬೇಸಿಗೆಯಲ್ಲಿ ಭುಗಿಲೆದ್ದ ಆಕ್ರೋಶವನ್ನು ತಣಿಸಲು ಮತ್ತು ಶಾಂತಿಯತ್ತ ಒಯ್ಯಬಹುದಾಗಿದ್ದ ಒಂದು ರಾಜಕೀಯ ಸಂವಾದವನ್ನು ಪುನರಾರಂಭಿಸಲು ಬಳಸುವ ಬದಲು ಭದ್ರತಾ ಪಡೆಗಳು ಮತ್ತು ಕಾಶ್ಮೀರ ಪೋಲೀಸರು ಇಡೀ ಚಳಿಗಾಲವನ್ನು ಉಗ್ರಗಾಮಿಗಳನ್ನು ಬೇಟೆಯಾಡವಲ್ಲಿ ಮತ್ತು 'ಅಗತ್ಯ'ವೆನಿಸಿದಾಗ ಕೊಲ್ಲುವಲ್ಲಿಯೇ ಕಳೆದಿದ್ದಾರೆ ಎನ್ನುತ್ತಾರೆ ಅವರು.**

ನಾರದ ತನಿಖೆ: "ಟಿಎಂಸಿ-ಬಿಜೆಪಿ ರಾಜಕೀಯ ಶಾಮೀಲು ದಾರಿ ತಪ್ಪಿಸಬಾರದು"

ಮಾರ್ಚ್ 29ರಂದು ಕೊಲ್ಕತಾದಲ್ಲಿ ಒಂದು ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ನಡೆಯಿತು. ಕೊನೆಗೂ ಹೈಕೋರ್ಟ್ ಆದೇಶದಂತೊರಂಭವಾಗಿರುವ ಸಿಬಿಐ ತನಿಖೆಯನ್ನು ಟಿಎಂಸಿ-ಬಿಜೆಪಿ ರಾಜಕೀಯ ಶಾಮೀಲು ದಾರಿ ತಪ್ಪಿಸಬಾರದು ಎಂದು ಎಡರಂಗ ಏರ್ಪಡಿಸಿದ್ದ ಈ ಸಭೆಯಲ್ಲಿ ಮಾತಾಡುತ್ತ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಆಗ್ರಹಿಸಿದ್ದಾರೆ. ನಾರದ ಕುಟುಕು ಕಾರ್ಯಾಚರಣೆಯಲ್ಲಿ ಆಪಾದಿತರಾಗಿರುವ ಎಲ್ಲರೂ ರಾಜೀನಾಮೆ ನೀಡಬೇಕೆಂದು ಈ ರ್‍ಯಾಲಿಯಲ್ಲಿ ಆಗ್ರಹಿಸಲಾಯಿತು.

ಲೋಕಸಭೆಯ ನೈತಿಕ ಸಮಿತಿ ಬಿಜೆಪಿಯ ನೇತೃತ್ವದಲ್ಲಿದ್ದರೂ ಇದುವರೆಗೂ ನಾರದ ಹಗರಣದ ಬಗ್ಗೆ ಒಂದೇ ಒಂದು ಸಭೆ ನಡೆದಿಲ್ಲ ಎಂಬುದು ಗಮನಾರ್ಹ.



ತಮಿಳುನಾಡು: ಜಮೀನು ಪಟ್ಟಾಕ್ಕಾಗಿ ದಲಿತರ ಹೋರಾಟಕ್ಕೆ ಗೆಲುವು

ತಮಿಳುನಾಡು ಅಸ್ಪೃಶ್ಯತಾ ನಿವಾರಣಾ ರಂಗ(ಟಿಎನ್‌ಯುಇಎಫ್) ನೇತೃತ್ವದಲ್ಲಿ ಧರ್ಮಪುರಿ ಜಿಲ್ಲೆಯ ಪೆನ್ನರಂ ನಲ್ಲಿ 345 ದಲಿತ ಕುಟುಂಬಗಳು ತಮ್ಮ ಜೀವನಾಧಾರಕ್ಕೆ ಭೂಮಿ ಪಡೆಯುವ ಹೋರಾಟವನ್ನು ನಡೆಸಿದ್ದರು. ಈ ಹೋರಾಟ ಯಶಸ್ವಿಯಾಗಿದೆ.

ಕಳೆದ ವಾರ ಆರ್‌ಡಿಒ ತಮ್ಮ ಸಿಬ್ಬಂದಿಯೊಂದಿಗೆ ಈ ಹಳ್ಳಿಗೆ ಬಂದು 8.77 ಎಕ್ರೆ ಜಮೀನನ್ನು ಗುರುತಿಸಿದ್ದಾರೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮತ್ತು ಟಿಎನ್‌ಯುಇಎಫ್ ಸದಸ್ಯರಿರುವ 11 ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ಒಂದು ತಿಂಗಳೊಳಗೆ ಪಟ್ಟಾಗಳನ್ನು ತಯಾರಿಸುತ್ತದೆ. ಈ ಸಭೆಯಲ್ಲಿ ಮಾತಾಡುತ್ತ ಟಿಎನ್‌ಯುಇಎಫ್ ರಾಜ್ಯ ಕಾರ್ಯದರ್ಶಿ ಸ್ಯಾಮುವೆಲ್ ರಾಜ್ "ಭೂಮಿ ನಮ್ಮ ಹಕ್ಕು. ಭೂಮಿಗಾಗಿ ಹೋರಾಟ ಮುಂದು ವರೆಯುತ್ತದೆ" ಎಂದರು.



ಟ್ರಂಪ್ ಗೆ ಮೊದಲ ಕಾಂಗ್ರೆಸ್ ಪರಾಭವ



ಒಬಾಮಾಕೇರ್ ರದ್ದತಿ ವಿರುದ್ಧ ಅಮೆರಿಕಾದ್ಯಂತ ಪ್ರತಿಭಟನಾ ಪ್ರದರ್ಶನಗಳಲ್ಲೊಂದು

ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಆಶ್ಚರ್ಯಕರವಾಗಿ ಪ್ರಾಥಮಿಕ ಚುನಾವಣೆಯಿಂದ ಆರಂಭಿಸಿ ಅಧ್ಯಕ್ಷೀಯ ಚುನಾವಣೆಯ ವರೆಗೂ ಪವಾಡದ ರೀತಿಯಲ್ಲಿ ಗೆಲ್ಲುತ್ತಾ ಬಂದಿದ್ದಾರೆ. ಆದರೆ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಅಷ್ಟೇ ಆಶ್ಚರ್ಯಕರವಾಗಿ ಸೋಲುತ್ತಾ ನಡೆದಿದ್ದಾರೆ. ಅಧಿಕಾರ ವಹಿಸಿಕೊಂಡ ದಿನವೇ "ನೀವು ನಮ್ಮ ಅಧ್ಯಕ್ಷರಲ್ಲ" ಎಂಥು ಸಾರುವ ಬೃಹತ್ ಅದರಲ್ಲೂ ಮಹಿಳೆಯರ ಪ್ರದರ್ಶನಗಳು ನಡೆದವು. ಏಳು ಮುಸ್ಲಿಮ್ ದೇಶಗಳ ನಾಗರಿಕರಿಗೆ ಅಮೆರಿಕ ಪ್ರವೇಶಿಸಲು ಅಧ್ಯಕ್ಷೀಯ ಆಜ್ಞೆ ಮೂಲಕ ಹೊರಿಸಿದ ನಿರ್ಬಂಧಗಳನ್ನು ಕೋರ್ಟುಗಳು ರದ್ದು ಮಾಡಿದವು. ಈಗ ಟ್ರಂಪ್ ಅವರ ಪ್ರಮುಖ ಚುನಾವಣಾ ಭರವಸೆಯಾಗಿದ್ದ 'ಒಬಾಮಕೇರ್' ಆರೋಗ್ಯ ಯೋಜನೆಯನ್ನು ರದ್ದು ಮಾಡುವ ಮಸೂದೆ ಅಮೆರಿಕದಲ್ಲಿ ಕಾಂಗ್ರೆಸ್ ಎಂದು ಕರೆಯಲಾಗುವ ಸಂಸತ್ತಿನಲ್ಲಿ ಬಿದ್ದು ಹೋಗಿದೆ. ಟ್ರಂಪ್ ಮುಖಭಂಗ ಪೂರ್ಣವಾಗಿದೆ. ಇದೇ ಗತಿ ಅವರು ಯೋಜಿಸಿರುವ ಹಲವು ಇಂತಹ ಜನ-ವಿರೋಧಿ ಕ್ರಮಗಳಿಗೂ ಕಾದಿದೆಯೋ ಎಂದು ನೋಡಬೇಕಾಗಿದೆ.


ರಿಪಬ್ಲಿಕನ್ ಪಕ್ಷವೇ ಟ್ರಂಪ್ ಗೆ ಕೈಕೊಟ್ಟಿದೆ

ಅಮೆರಿಕ ಬಹುಶಃ ಅಭಿವೃದ್ಧ ದೇಶಗಳಲ್ಲಿ ಯಾವುದೋ ಒಂದು ರೂಪದಲ್ಲಿ ಸಾರ್ವತ್ರಿಕ ಆರೋಗ್ಯ ಸೇವೆ ಇರದಿರುವ ಏಕಮಾತ್ರ ದೇಶ. ಇತರ ಕ್ಷೇತ್ರಗಳಂತೆ ಆರೋಗ್ಯ ಸೇವೆಯಲ್ಲೂ ತೀವ್ರ ಅಸಮಾನತೆ ಇದೆ. ಬಹುಪಾಲು ಆರೋಗ್ಯ ವಿಮೆ ಪಾವತಿಯ ರೂಪದಲ್ಲಿ ಅಮೆರಿಕನರು ಕೆಲಸ ಮಾಡುವ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಆರೋಗ್ಯ ಸೇವೆ ಸಿಗುವಂತೆ ಮಾಡುತ್ತವೆ. ಉದ್ಯೋಗಿಯ ವೇತನ, ಕಂಪನಿಯ ಗಾತ್ರ ಸಾಮರ್ಥ್ಯ ಹೊಂದಿಕೊಂಡು ಆರೋಗ್ಯ ಸೇವೆ ಇರುತ್ತದೆ. ಅಂದರೆ ಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ಮಾಡದ ನಿರುದ್ಯೋಗಿಗಳಿಗೆ ಆರೋಗ್ಯ ಸೇವೆ ಇಲ್ಲ. ಯಾವುದೇ ರೀತಿಯ ಆರೋಗ್ಯ ಸೇವೆ ಇರದ ಸುಮಾರು ಶೇ. 15 ರಷ್ಟು ಇರುವ ಕೆಳ/ಕೆಳ ಮಧ್ಯಮ ವರ್ಗದ ಜನರಿಗಾಗಿ ಅಧ್ಯಕ್ಷ ಒಬಾಮ ಈಗ 'ಒಬಾಮಕೇರ್' ಎಂದು ಪ್ರಸಿದ್ಧವಾದ ಆರೋಗ್ಯ ಸೇವಾ ಯೋಜನೆ ಜಾರಿಗೆ ತಂದರು. ಇದನ್ನು ಮೊದಲಿನಿಂದಲೂ (ಟ್ರಂಪ್ ಅವರ) ರಿಪಬ್ಲಿಕನ್ ಪಕ್ಷ "ಮಾರುಕಟ್ಟೆ ನಿಯಮ"ಗಳನ್ನು ಉಲ್ಲಂಘಿಸುವ "ಸಮಾಜವಾದದ ವಾಸನೆ ಹೊಡೆಯುವ" ಯೋಜನೆ ಎಂದು ಟೀಕಿಸುತ್ತಾ ವಿರೋಧಿಸುತ್ತಾ ಬಂದಿತ್ತು. ಅದು ಅಷ್ಟು 'ಕ್ರಾಂತಿಕಾರಿ'ಯಾಗೇನೂ ಇರಲಿಲ್ಲ. ಕನಿಷ್ಟ ಸವಲತ್ತುಗಳನ್ನು ಸೀಮಿತ ರೀತಿಯಲ್ಲಿ ಆರೋಗ್ಯ ವಿಮೆಯ ಮೂಲಕ ಕೊಡುವ ಈ ಆರೋಗ್ಯ ಯೋಜನೆಯನ್ನು ಒಬಾಮ ಆಡಳಿತದ ಉದ್ದಕ್ಕೂ ರಿಪಬ್ಲಿಕನ್ ಪಕ್ಷ ತಿದ್ದುಪಡಿಗಳ ಮೂಲಕ, ಬಜೆಟ್ ಕಡಿತಗಳ ಮೂಲಕ ಕುಂಠಿತಗೊಳಿಸುತ್ತ ಬಂದಿತ್ತು. 'ಒಬಾಮಕೇರ್' ರದ್ದು ಮಾಡುವುದು ರಿಪಬ್ಲಿಕನರ ಮತ್ತು ಟ್ರಂಪ್ ಅವರ ಅಧ್ಯಕ್ಷೀಯ ಚುನಾವಣಾ 'ಆಶ್ವಾಸನೆ'ಗಳಲ್ಲಿ ಒಂದಾಗಿತ್ತು. ಅಧ್ಯಕ್ಷ ಟ್ರಂಪ್ ಅವರನ್ನು ಬಹಳವಾಗಿ ಬೆಂಬಲಿಸಿದ ಕೆಳ/ಕೆಳ-ಮಧ್ಯಮ ವರ್ಗಗಳನ್ನು 'ಒಬಾಮಕೇರ್' ರದ್ದು ಮಾಡುವುದು ಜನ-ಪರ ಕ್ರಮ ಎಂದು ನಂಬಿಸಲಾಗಿತ್ತು ಎಂಬುದು ಜಗತ್ತಿನ ಸೋಜಿಗಗಳಲ್ಲಿ ಒಂದು.

'ಒಬಾಮಕೇರ್' ಯೋಜನೆಯನ್ನು ಬದಲಿಸಿ ಅದರ ಪ್ರಗತಿಪರ ಅಂಶಗಳನ್ನು ಕಡಿತಗೊಳಿಸಿ ಟ್ರಂಪ್ ತಂದ ಹೊಸ ಮಸೂದೆ ಕಾಂಗ್ರೆಸ್ ನಲ್ಲಿ ಆಳುವ ರಿಪಬ್ಲಿಕನ್ ಪಕ್ಷದ ಬಹುಪಾಲು ಸದಸ್ಯರ ಬೆಂಬಲವೂ ಇಲ್ಲದೆ ಬಿದ್ದು ಹೋಯಿತು. ಇಲ್ಲಿ ಒಂದು ವಿಚಿತ್ರ ನಡೆದಿದೆ. ರಿಪಬ್ಲಿಕನ್ ಪಕ್ಷದ ಅತಿ-ಬಲಪಂಥೀಯ ಗುಂಪು ಟ್ರಂಪ್ ತಂದ ಹೊಸ ಮಸೂದೆಯಲ್ಲಿ 'ಒಬಾಮಕೇರ್' ನ ಕೆಲವು ಪ್ರಗತಿಪರ ಅಂಶಗಳು ಉಳಿದುಕೊಂಡಿವೆ ಎಂದು ವಿರೋಧಿಸಿದರು! ರಿಪಬ್ಲಿಕನ್ ಪಕ್ಷದ ಇನ್ನೊಂದು ಮಂದಗಾಮಿ ಗುಂಪು 'ಒಬಾಮಕೇರ್' ಯೋಜನೆಯನ್ನು ಬೆಂಬಲಿಸಿ ತಳಮಟ್ಟದಲ್ಲಿ ನಡೆದ ಪ್ರಚಾರಾಂದೋಲನದ ಒತ್ತಡಕ್ಕೆ ಸಿಲುಕಿ ಹೊಸ ಮಸೂದೆಯನ್ನು ವಿರೋಧಿಸಿತು. ಇಲ್ಲದಿದ್ದರೆ 2018ರಲ್ಲಿ ಬರುವ ಕಾಂಗ್ರೆಸ್(ಸಂಸತ್) ಚುನಾವಣೆಯಲ್ಲಿ ಜನ ತಿರುಗಿ ಬೀಳಬಹುದೆಂಬ ಭಯ ಅವರನ್ನು ಕಾಡಿತು. ಯಾವುದೇ ಮಸೂದೆ ಕಾಂಗ್ರೆಸ್ ನಲ್ಲಿ ಪಾಸಾಗಬೇಕಾದರೆ ಕಾಂಗ್ರೆಸ್ ಪ್ರತಿನಿಧಿಗಳ ಬಳಿ 'ಲಾಬಿ' ಮಾಡಬೇಕಾಗುತ್ತದೆ. 'ಲಾಬಿ' ಎಂದರೆ ಆಸಕ್ತ ವಾಣಿಜ್ಯ ಗುಂಪುಗಳು ಕೊಡುವ 'ಲಂಚ'ವೂ ಇರಬಹುದು ಅಥವಾ ಸರಕಾರವಾದರೆ ಸದಸ್ಯರ ಕೆಲವು ಮೆಚ್ಚಿನ ಯೋಜನೆ ಅಥವಾ ಕೆಲಸಗಳನ್ನು ಮಾಡಿಸಿಕೊಡುವ ಆಶ್ವಾಸನೆ ಸಹ ಇರಬಹುದು. ಇಂತಹ 'ಲಾಬಿ' ನಿರ್ವಹಿಸುವ ಕೌಶಲ್ಯ ಅಥವಾ ಅನುಭವ ಅಧ್ಯಕ್ಷ ಟ್ರಂಪ್ ಅಥವಾ ಅವರ ತಂಡದ ಸದಸ್ಯರಲ್ಲಿ ಇಲ್ಲ ಎನ್ನಲಾಗಿದೆ. ರಿಪಬ್ಲಿಕನ್ ಪಕ್ಷದ ಎಲ್ಲಾ ಸದಸ್ಯರೂ 'ಒಬಾಮಕೇರ್' ವಿರುದ್ಧವಾಗಿದ್ದಾರೆ ಕಾಂಗ್ರೆಸ್ ನಲ್ಲಿ ರಿಪಬ್ಲಿಕನ್ ಪಕ್ಷದ ಬಹುಮತ ಇದೆ ಎಂದು ಟ್ರಂಪ್ ಯಾವುದೇ ಲಾಬಿ ಮಾಡದ್ದರಿಂದ ಈ ಪರಾಭವ ಉಂಟಾಗಿದೆ ಎಂದೂ ಹೇಳಲಾಗಿದೆ.

ಮೆಕ್ಸಿಕೊ ಗೋಡೆ ಯೋಜನೆಗೂ ಅದೇ ಗತಿ?

ಟ್ರಂಪ್ ಅವರ ಇನ್ನೊಂದು ಮೆಚ್ಚಿನ ಯೋಜನೆ, ಮೆಕ್ಸಿಕೊಗೆ 2000 ಮೈಲುಗಳ ಗೋಡೆ ಕಟ್ಟುವುದು. ಇದರ ವೆಚ್ಚ ಕೊಡಲು ಮೆಕ್ಸಿಕೊ ಸ್ಪಷ್ಟವಾಗಿ ನಿರಾಕರಿಸಿದೆ. ಆದ್ದರಿಂದ ಮೆಕ್ಸಿಕೊ ಗೋಡೆ ಕಟ್ಟಲು ಆಂತರಿಕವಾಗಿ ನಿಧಿ ಒದಗಿಸಬೇಕಾಗಿದೆ. ಇದಕ್ಕೆ ನಿಧಿ ಒದಗಿಸಲು ಸುಮಾರು 18 ಶತಕೋಟಿ ಡಾಲರುಗಳಷ್ಟು ಆರೋಗ್ಯ, ಶಿಕ್ಷಣ ಮುಂತಾದ ಹಲವು ಸಾಮಾಜಿಕ ಯೋಜನೆಗಳನ್ನು ಕಡಿತಗೊಳಿಸಲು ಟ್ರಂಪ್ ಯೋಚಿಸಿದ್ದಾರಂತೆ. ಇದಕ್ಕೆ ಇನ್ನೂ ದೊಡ್ಡ ಪ್ರತಿರೋಧ ಬರಲಿದೆ.



– ಒಬಾಮಕೇರ್ ವಿರುದ್ಧ ಅಪಪ್ರಚಾರದಿಂದ ಹಂತಹಂತವಾಗಿ ಹೊರ ಬಂದ ಅಮೆರಿಕನ್ – ರದ್ದತಿ, ಬದಲಾವಣೆ, ಪಶ್ಚಾತ್ತಾಪ

ಟ್ರಂಪ್ ಅವರ ಮತ್ತೊಂದು ಮೆಚ್ಚಿನ ಯೋಜನೆ, ಆದಾಯ ತೆರಿಗೆ ಕಡಿತ ಮಾಡುವುದು. ಇದಕ್ಕಾಗಿಯೂ ಹಲವು ಸಾಮಾಜಿಕ ಉತ್ಪಾದಕ ಯೋಜನೆಗಳ ಕಡಿತ ಮಾಡಬೇಕಾಗುತ್ತದೆ. ಅದಕ್ಕೂ ದೊಡ್ಡ ಪ್ರತಿರೋಧ ನಿರೀಕ್ಷಿತವೇ.

ಪ್ಯಾರೀಸ್ ಒಪ್ಪಂದಕ್ಕೆ ಖೊಕ್

ಹವಾಮಾನ ಬದಲಾವಣೆ ತಡೆಗಟ್ಟಲು ಮಾಡಲಾದ ಪ್ಯಾರೀಸ್ ಒಪ್ಪಂದಕ್ಕೆ ಕುತ್ತು ತರುವ ಕ್ರಮಗಳನ್ನು ಅಧ್ಯಕ್ಷ ಟ್ರಂಪ್ ಆಗಲೇ ತೆಗೆದು-ಕೊಂಡಿದ್ದಾರೆ. ಪ್ಯಾರೀಸ್ ಒಪ್ಪಂದದ ಪ್ರಕಾರ ಇಂಗಾಲ ಸೂಸುವಿಕೆಯನ್ನು 2025ರೊಳಗೆ 2005ರ ಮಟ್ಟಕ್ಕಿಂತ ಶೇ.26-28ರಷ್ಟು ಕಡಿತ ಮಾಡಲು ಒಬಾಮ ಆಡಳಿತ "ಕ್ಲೀನ್ ಪವರ್ ಪ್ಲಾನ್" ಹಾಕಿತ್ತು. ಅದನ್ನು ಅಧ್ಯಕ್ಷ ಟ್ರಂಪ್ ರದ್ದು ಪಡಿಸಿದ್ದಾರೆ. ಇಂಗಾಲ ಸೂಸುವಿಕೆಯನ್ನು ಕಡಿತ ಮಾಡಲು ಕಲ್ಲಿದ್ದಲು ವಿದ್ಯುತ್ ಘಟಕಗಳಲ್ಲಿ ಕಡಿತ ಮಾಡುವುದು ಅಗತ್ಯ. "ಕ್ಲೀನ್ ಪವರ್ ಪ್ಲಾನ್" ರಾಜ್ಯಗಳಿಗೆ ಕಲ್ಲಿದ್ದಲು ವಿದ್ಯುತ್ ಘಟಕಗಳಲ್ಲಿ ಕಡಿತ ಮಾಡಿ ಸೌರ ಮುಂತಾದ ಇತರ "ಕ್ಲೀನ್" ವಿದ್ಯುತ್ ಘಟಕಗಳಿಗೆ ಬದಲಾಯಿಸಲು ಸಮಯಬದ್ಧ ಟಾರ್ಗೆಟ್ ಕೊಟ್ಟಿತ್ತು. "ಕ್ಲೀನ್ ಪವರ್ ಪ್ಲಾನ್" "ಕಲ್ಲಿದ್ದಲು ಮೇಲೆ ಯುದ್ಧ" ಎಂದು ಟ್ರಂಪ್ ಕರೆಯುತ್ತಾ ಬಂದಿದ್ದಾರೆ. ಅಮೆರಿಕದ ಕಲ್ಲಿದ್ದಲು ಕೈಗಾರಿಕೆಗೆ ಉತ್ತೇಜನ ಕೊಡುವುದು ಅವರ ಇನ್ನೊಂದು ಚುನಾವಣಾ ಆಶ್ವಾಸನೆ. "ಕಲ್ಲಿದ್ದಲು ಮೇಲೆ ಯುದ್ಧ"ವನ್ನು ಕೊನೆಗೊಳಿಸಿದ್ದೇನೆ ಎಂದು ಟ್ರಂಪ್ ಘೋಷಿಸಿದ್ದಾರೆ. "ಹವಾಮಾನ ಬದಲಾವಣೆ"ದ ವೈಜ್ಞಾನಿಕತೆಯನ್ನು ಟ್ರಂಪ್ ಸಂಶಯದಿಂದ ನೋಡುತ್ತಾರೆ. ಅದು ಘಟಿಸುತ್ತಿದೆ ಎಂಬುದು ಖಚಿತವಲ್ಲ ಎಂಬ ಬಲಪಂಥೀಯ ನಿಲುವು ಅವರದು.

ಟ್ರಂಪ್ ಅಮೆರಿಕವನ್ನು ಪ್ಯಾರೀಸ್ ಒಪ್ಪಂದದಿಂದ ಹಿಂತೆಗೆಯುತ್ತಾರಾ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಪ್ಯಾರೀಸ್ ಒಪ್ಪಂದದಿಂದ ಹಿಂತೆಗೆಯದಿದ್ದರೂ ಅದರ ಗುರಿಗಳನ್ನು ಮುಟ್ಟುವ ಯೋಜನೆ ಹಾಕಿಕೊಳ್ಳದೆ ಮುಟ್ಟದಿದ್ದರೂ ಅದಕ್ಕೆ ಕುತ್ತು ಖಂಡಿತ. ಏಕೆ-ಂದರೆ ಚೀನಾದ ನಂತರ ಅತಿ ದೊಡ್ಡ ಇಂಗಾಲ ಸೂಸುವಿಕೆ ಇರುವ ಅಮೆರಿಕ ತನ್ನ ಬಾಧ್ಯತೆಗಳನ್ನು ಪೂರೈಸದಿದ್ದರೆ ಹಲವು ದೇಶಗಳು ಅದೇ ಕಾರಣ ಕೊಟ್ಟು ಅದನ್ನೇ ಮಾಡಬಹುದು. ಟ್ರಂಪ್ ಅವರ ಈ ಕ್ರಮಕ್ಕೆ ಅಮೆರಿಕದಲ್ಲೇ ಸೇರಿದಂತೆ ಜಗತ್ತಿನ ಎಲ್ಲೆಡೆ ತೀವ್ರ ವಿರೋಧ ಆಕ್ರೋಶ ವ್ಯಕ್ತವಾಗಿದೆ. ಬೇಜವಾಬ್ದಾರಿ ಕ್ರಮ ಎಂಬ ಟೀಕೆಗೆ ಗುರಿಯಾಗಿದೆ. ಅಮೆರಿಕ ರಿವರ್ಸ್ ಹೊಡೆದರೂ ಚೀನಾ, ಯುರೋಪಿಯನ್ ಕೂಟದ ದೇಶಗಳು ತಾವು ಪ್ಯಾರೀಸ್ ಒಪ್ಪಂದವನ್ನು ಜಾರಿಗೊಳಿಸುವುದಾಗಿ ಹೇಳಿದ್ದಾರೆ. ಹಲವು ಪ್ರಮುಖ ಯುರೋಪಿಯನ್ ಕೂಟದ ದೇಶಗಳ ನಾಯಕರು ಟ್ರಂಪ್ ನೀತಿಗೆ ಪ್ರತೀಕಾರವಾಗಿ ಅಂತರ್ರಾಷ್ಟ್ರೀಯ ವಿದ್ಯುತ್ ಯೋಜನೆಗಳಲ್ಲಿ ಅಮೆರಿಕನ್ ಕಂಪನಿಗಳಿಗೆ ಬಹಿಷ್ಕಾರ ಹಾಕಬೇಕಾದೀತು ಎಂದು ಎಚ್ಚರಿಸಿದ್ದಾರೆ. ಪ್ಯಾರೀಸ್ ಒಪ್ಪಂದವನ್ನು ಧಿಕ್ಕರಿಸುವ ಕ್ರಮಗಳನ್ನು ಮುಂದುವರಿಸಿದರೆ ಅಮೆರಿಕನ್ ಉತ್ಪನ್ನಗಳಿಗೆ ತೆರಿಗೆ ಹಾಕುವುದಕ್ಕೆ ಅವಕಾಶಗಳಿವೆ ಎಂದೂ ಎಚ್ಚರಿಸಲಾಗಿದೆ. ಅಮೆರಿಕದ ಒಳಗೂ ಕ್ಯಾಲಿಫೋರ್ನಿಯಾ ಮುಂತಾದ ರಾಜ್ಯಗಳು ಟ್ರಂಪ್ ನೀತಿಯನ್ನು ಜಾರಿ ಮಾಡುವುದಿಲ್ಲ ಎಂದೂ ಹೇಳಿವೆ.

ಹೀಗೆ ಟ್ರಂಪ್ ಅವರ ಹಲವು ತಿಕ್ಕಲು ನೀತಿಗಳಿಗೆ ತಳಮಟ್ಟದಿಂದಲೂ ಇತರ ರಾಜಕೀಯ ಶಕ್ತಿಗಳಿಂದಲೂ, ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ತೀವ್ರ ವಿರೋಧ-ಪ್ರತಿರೋಧಗಳು ಬರುತ್ತಿವೆ ಎಂಬುದು ನಿಜ. ಆದರೆ ಅವನ್ನು ಧಿಕ್ಕರಿಸಿ ತನ್ನ ತಿಕ್ಕಲು ನೀತಿಗಳನ್ನು ಮುಂದುವರೆಸಲು ಅಮೆರಿಕನ್ ಅಧ್ಯಕ್ಷರಿಗೆ ಅಗಾಧ ಅಧಿಕಾರಗಳೂ ಇವೆ ಎಂಬುದು ಅಷ್ಟೇ ನಿಜ.

ಫ್ಯಾಶಿಸ್ಟ್ ರಾಜಕಾರಣದ ಹುನ್ನಾರವಿದೆ.........

ಪುಟ 11 ರಿಂದ

ಬೇಕಿಲ್ಲ. ಎಲ್ಲದಕ್ಕೂ ಜೈ ಅನ್ನಬೇಕು.ಅವರ ಅಭಿಪ್ರಾಯಕ್ಕೆ ಭಿನ್ನಾಭಿಪ್ರಾಯ ಇರುವವರಾಗಿ ಬಿಟ್ಟಿರೋ ನೀವು ಒಂದೋ ಮುಸ್ಲಿಂರು, ಅಥವಾ ಕ್ರಿಶ್ಚಿಯನ್ನರು, ಇಲ್ಲವೇ ಕಮ್ಯೂನಿಷ್ಟರು ಅಷ್ಟೇ.

ಇದನ್ನು ಎದುರಿಸುವ ಬಗೆ ಹೇಗೆ?

ಹೇಗೆ? ಹೇಗೆಂದರೆ ಜನರಿಗೆ ನಿಜವಾದ ಶಿಕ್ಷಣ ನೀಡುವ ಮೂಲಕ. ಸರಿಯಾದ ತಿಳುವಳಿಕೆ, ಶಿಕ್ಷಣ ನೀಡುವುದರ ಮೂಲಕವೇ ಸಾಧ್ಯ.ಬೇರೆ ಮಾರ್ಗಗಳಿಲ್ಲ. ಕೋಮುವಾದ, ಮತೀಯವಾದವನ್ನು ವಿರೋಧಿಸುತ್ತೇವೆಂದು ಒಂದು ರೀತಿಯ ಕೋಮುವಾದವನ್ನು ಎದುರಿಸಲು ಮತ್ತೊಂದು ಕೋಮುವಾದ, ಮತೀಯವಾದವನ್ನು ಬೆಂಬಲಿಸುವುದು ಉತ್ತರವೇ ಅಲ್ಲ. ಬದಲಾಗಿ ಭಾರೀ ದುರಂತಕ್ಕೆ ಹಾದಿ. ಹಿಂದುತ್ವದ ಕೋಮುವಾದಿಗಳನ್ನು ಎದುರಿಸಲು ಮುಸ್ಲಿಂ ಕೋಮುವಾದಿಗಳನ್ನು ಬಳಸಿದರೆ ಅವರೂ, ಇವರೂ ಬೆಳೆಯುತ್ತಾರೆ.ಇದು ಸಮಾಜವನ್ನೂ ಹಾಳು ಮಾಡುತ್ತದೆ.ಆದ್ದರಿಂದ ಧರ್ಮನಿರಪೇಕ್ಷತೆಯೇ ಸರಿಯಾದ ಮಾರ್ಗ.

ಕರಾವಳಿಯಲ್ಲಿ ಇಂದು ನಡೆಯುತ್ತಿರುವ ಹಿಂಸೆ, ಘರ್ಷಣೆ, ದ್ವೇಷಗಳಿಂದ ಭಾಧಿತರಾಗಿದ್ದರೂ ಜನ ಯಾಕೆ ಅಂತಹವರನ್ನು ಬೆಂಬಲಿಸುತ್ತಾರೆ?

ಇದನ್ನೆಲ್ಲಾ ನೋಡಿದ್ದಾರೆ, ಅನುವಿಸಿದ್ದಾರೆ ಎಂದಾಕ್ಷಣ ಎದುರಿಸುವ ತಿಳುವಳಿಕೆ ತಾನಾಗಿಯೇ ಬರುವುದಿಲ್ಲ. ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲೂ ಬಿಡುವುದಿಲ್ಲವಲ್ಲಾ.ಎಲ್ಲವುಗಳನ್ನೂ ಗೊಂದಲ, ಗೋಜಲಾಗಿ ಮಾಡುತ್ತಾರಲ್ಲಾ.ಇಲ್ಲಿ ಹೆಚ್ಚಾಗಿ ಧರ್ಮದ, ಇಲ್ಲವೇ ಜಾತಿಯ ಐಡೆಂಟಿಟಿ ಜೋರಾಗಿದೆ. ಕೆಳ ಜಾತಿ, ಓ.ಬಿ.ಸಿ, ತಳ ಸಮುದಾಯಗಳೂ ಸಹ ತಮ್ಮನ್ನು ಈ ಸ್ಥಿತಿಗೆ ದೂಡಿ, ಅದನ್ನೇ ನಿಯಂತ್ರಿಸುತ್ತಿರುವ ಈ ವ್ಯವಸ್ಥೆ, ತಮ್ಮ ದುಸ್ಥಿತಿಗೆ ಮನುವಾದವೇ ಮೂಲ ಎಂಬುದನ್ನು ಅರಿಯದೇ ಅದನ್ನು ಪೋಷಿಸುವವರಿಗೇ ಬೆಂಬಲಿಸುತ್ತಾರೆಂದರೆ ಅರ್ಥವೇನು?ಹಿಂದುತ್ವದಲ್ಲಿ ತಾವೂ ಕೂಡ ಮೇಲ್ಜಾತಿಗಳೊಂದಿಗೆ ಇರುತ್ತೇವೆ, ತಮ್ಮ ಸ್ಥಾನವೂ ದೊಡ್ಡದು ಎಂಬ ಹುಸಿ ಐಡೆಂಟಿಟಿ ಸೃಷ್ಟಿಸಲಾಗಿದೆ.

ತುಳುನಾಡಿನ ಈ ಸಮಾಜ, ಸಂಸ್ಕೃತಿಯಲ್ಲಿ ಪ್ರತಿ-ರೋಧದ ಪರಂಪರೆ, ನೆಲೆ ಇಲ್ಲವೇ?

ಇದೆ, ಖಂಡಿತಕ್ಕೂ ಇದೆ. ಇಲ್ಲಿ ಹಿಂದೆ ಕಮ್ಯೂನಿಸ್ಟ್ ಚಳುವಳಿ ಅತ್ಯಂತ ಪ್ರಬಲವಾಗಿದ್ದ ಪ್ರದೇಶವೂ ಹೌದು. ಆದರೆ ಕಾಲ ಸರಿದಂತೆ ಅದೆಲ್ಲಾ ಏನಾಯಿತು? ಕಮ್ಯೂನಿಸ್ಟ್ ಆಂದೋಲನದಿಂದ ಫಲ ಪಡೆದ ಕುಟುಂಬಗಳ ಮುಂದಿನ ಪೀಳಿಗೆ ಆ ನಕಾರಾತ್ಮಕ ಶಕ್ತಿಗಳಿಂದ ಭಾಧಿತವಾಗಲಿಲ್ಲವೇ? ಮೌಲ್ಯಗಳ ಮುಂದುವರಿಕೆ ಮತ್ತು ಬದುಕಿನ ಪಲ್ಲಟಗಳ ನಿಭಾವಣೆ ನಿರಂತರ ಜತನದಿಂದ ನಡೆಯಬೇಕಾದ ಕಠಿಣ ಪ್ರಯತ್ನ ಹಾಗೂ ಸಕಾರಾತ್ಮಕ ಸಂಘರ್ಷ.

ವೈಚಾರಿಕತೆ ಎಂಬುದು ಕೂಡ ಒಂದು ಚೌಕಟ್ಟಿನಲ್ಲಿರುವಂತಹುದು. ಈ ಚೌಕಟ್ಟನ್ನು ರೂಪಿಸುವವರು, ನಿರ್ಧರಿಸುವವರು, ನಿಯಂತ್ರಿಸು ವವರು ಯಾರು? ಅದೇ ಮನುವಾದಿ ಗಳೇ. ಹಾಗಾದರೆ ವೈಚಾರಿಕತೆ ಅಷ್ಟು ಸುಲಭವಾಗಿ ಬೆಳೆದೀತೆ? ಇಂದು ಅವರು ಎಲ್ಲಾ ರಂಗಗಳನ್ನೂ ಆವರಿಸಿಕೊಂಡಿದ್ದಾರೆ. ಹತ್ತಾರು ತರಹದ ಕಾರ್ಯಕ್ರಮಗಳ ಮೂಲಕ ಜನರನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿಕೊಂಡಿದ್ದಾರೆ. ಭಜನಾ ಮಂದಿರ, ಮಂಡಳಿಗಳನ್ನೂ, ಮನೆ, ಮನಗಳನ್ನೂ ಪ್ರವೇಶಿಸಿದ್ದಾರೆ. ಆದಿವಾಸಿಗಳನ್ನೂ ಬಿಟ್ಟಿಲ್ಲ. ನಿಸರ್ಗ, ನಿರಾಕಾರ ದೈವಗಳನ್ನು ಆರಾಧಿಸುವ ಅವರಿಗೂ ಈಗ ವಿವಿಧ ಅವತಾರಗಳ ದೇವರನ್ನು ಒಪ್ಪಿಸಿ ಬಿಟ್ಟಿದ್ದಾರೆ. ಇಲ್ಲಿಯೂ ನೋಡಿ.ತುಳುನಾಡಿನಲ್ಲಿ ದೈವಗಳುಂಟು.ದು ನಮ್ಮ ಪರಂಪರೆ. ಆದರೀಗ ಈ ಎಲ್ಲಾ ದೈವಗಳನ್ನು ಅಣ್ಣಪ್ಪನ ನಿಯಂತ್ರಣಕ್ಕೆ ಒಪ್ಪಿಸಿದ್ದಾರೆ. ಅಣ್ಣಪ್ಪ ಧರ್ಮಸ್ಥಳದ ಮಂಜುನಾಥನ ಕಂಟ್ರೋಲ್‌ನಲ್ಲಿ. ಶ್ರೀ ಮಂಜುನಾಥ ಹೆಗ್ಗಡೆಯವರ ಕಂಟ್ರೋಲ್‌ನಲ್ಲಿ ಎಂಬಂತಾಗಿದೆ. ಪಾಳೆಗಾರಿ ಶಕ್ತಿಗಳೇ ಮೇಲುಗೈ ಸಾಧಿಸುತ್ತಿರುವುದು ವಾಸ್ತವ.

ಪರ್ಯಾಯ ಹೇಗೆ?

ನಾವು ಕೆಲವು ನಿರ್ದಿಷ್ಟ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು. ಉದಾಹರಣೆಗೆ, ಧರ್ಮಸ್ಥಳದ ಪರಿಸರದಲ್ಲಿ ಹತ್ಯೆಯಾದ ಸೌಜನ್ಯ ಪ್ರಕರಣ ನಡೆದು 5 ವರುಷಗಳಾಗುತ್ತಿದೆ. ಕೇಂದ್ರ ಸರಕಾರದ ಸಿ.ಬಿ.ಐ. ತನಿಖೆಯಲ್ಲಿ ಪ್ರಗತಿಯೇ ಇಲ್ಲ. ನೆನೆಗುದಿಗೆ ಬಿದ್ದಿದೆ. ಹಿಂದೆ ಜನ ಭಾರೀ ಪ್ರಮಾಣದಲ್ಲಿ ಹೋರಾಟದಲ್ಲಿ ಭಾಗವಹಿಸಿದ್ದರು. ಜನರಲ್ಲಿ ಹೋರಾಡುವ ಕಿಚ್ಚಿದೆ. ಈಗಲೂ ಜನರ ಬದುಕಿನ ಹತ್ತಾರು ಪ್ರಶ್ನೆಗಳು ಇವೆ. ಅವನ್ನು ಎತ್ತಿ ಹೋರಾಟದಲ್ಲಿ ಒಗ್ಗಟ್ಟು ಸಾಧಿಸಬೇಕು.ಇಂದು ಎಲ್ಲಾ ಪ್ರಗತಿಪರರು, ಧರ್ಮನಿರಪೇಕ್ಷಿತ ಶಕ್ತಿಗಳು ಒಂದಾಗಿ ವಿಶಾಲ ವೇದಿಕೆಯಡಿ ಆಂದೋಲನ ನಡೆಸಬೇಕಿದೆ ಅನ್ನಿಸುತ್ತದೆ.ಸನ್ನಿವೇಶ ಕಠಿಣವಾದರೂ ನಿರಾಸೆಯಾಗುವ ಅಗತ್ಯವಿಲ್ಲ.

ಸಂದರ್ಶನ: ಎಸ್.ವೈ.ಗುರುಶಾಂತ್

JANASHAKTHI KANNADA VARA PATRIKE April 3-9, 2017 Price : Rs. 10/- Date of Publication : 31 March 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಭಾಸ್ಕರ ಗೌಡರಿಗೆ 'ಸಹಯಾನ ಸಮ್ಮಾನ' ಪ್ರದಾನ..



ಪರದೆಯ ಹಿಂದೆ ದುಡಿದ ಕಲಾವಿದರೊಬ್ಬರಿಗೆ ಸನ್ಮಾನ ನೀಡಿರುವುದು ಮಹತ್ವದ್ದಾಗಿದೆ– ಕಪ್ಪೆಕೆರೆ ಭಾಗವತರು.

ವಿಠಲ ಭಂಡಾರಿ

"ಯಕ್ಷಗಾನ ಇಂದು ಹಲವು ಬದಲಾವಣೆ ಕಾಣುತ್ತಿದೆ. ಈಗ ಯಕ್ಷಗಾನ ಅತಿ ತ್ವರಿತಗತಿಯಲ್ಲಿದೆ. ಭಾವನೆ ಬೇಡ, ಅಭಿನಯ ಬೇಡ, ಭಾವನಾತ್ಮಕ ಮಾತು ಬೇಡ, ಔಚಿತ್ಯಪೂರ್ಣ ಪಾತ್ರ ಚಿತ್ರಣ ಬೇಡ ಎನ್ನುವಂತಾಗಿದೆ. ಯಾರು ಮಂಡಿ ಹಾಕುತ್ತಾರೋ, ಕುಪ್ಪಳಿಸುತ್ತಾರೋ ಅವರೇ ದೊಡ್ಡ ಕಲಾವಿದರು ಎನ್ನಿಸಿಕೊಳ್ಳುತ್ತಿದ್ದಾರೆ. ಒಂದು ಪ್ರಸಂಗವನ್ನು ರಾತ್ರಿಯಿಡೀ ವಿವರವಾಗಿ, ಸೂಕ್ಷ್ಮವಾಗಿ ಆಡುತ್ತಿದ್ದ ಕಾಲ ಇತ್ತು. ಇಂದು 4–5 ಪ್ರಸಂಗಗಳನ್ನು ಒಂದೇ ರಾತ್ರಿ ಆಡಿ ಮುಗಿಸುವ ಕಾಲ ಬಂದಿದೆ. ಇಂಥ ಸಂದರ್ಭದಲ್ಲಿ ಕಲಾವಿದನಾಗಲೀ ಹಿಮ್ಮೇಳದವರಾಗಲೀ ಪ್ರೇಕ್ಷಕರಿಗೆ ಏನನ್ನು ಕೊಡಲು ಸಾಧ್ಯ? ಹಿಂದೆ ಒಂದು ಪದ್ಯಕ್ಕೆ ಇಂತಿಷ್ಟೇ ಕುಣಿತ, ಹಿತಮಿತವಾದ ಮಾತು ಅಭಿನಯಕ್ಕೆ ಆದ್ಯತೆ ಭಾಷೆಯ ಸ್ವರಾಘಾತವನ್ನೂ ಒಳಗೊಂಡಂತೆ ಶಬ್ದೋಚ್ಚಾರಕ್ಕೆ ಮಾನ್ಯತೆ ಇತ್ತು. ಈಗ ಅದ್ಯಾವುದೂ ಇಲ್ಲ. ಯಕ್ಷಗಾನದ ನಿಜವಾದ ಆಸಕ್ತರು ಇದರಿಂದ ದೂರವಾಗುತ್ತಿದ್ದಾರೆ." ಎಂದು ಹಿರಿಯ ಭಾಗವತರು, ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರೂ ಆದ ಕಪ್ಪೆರೆಕೆ ಸುಬ್ರಾಯ ಭಾಗವತರು ಹೇಳಿದರು. ಅವರು ಕೆರೆಕೋಣದ ಆರ್.ವಿ.ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ ಸಹಯಾನದಲ್ಲಿ ಚಿಂತನ ರಂಗ ಅಧ್ಯಯನ ಕೇಂದ್ರ, ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ನಡೆದ ಹೆಸರಾಂತ ಯಕ್ಷಗಾನ ಕಲಾವಿದರೂ ಶಿಕ್ಷಕರೂ ಆದ ದಿ. ಜಿ.ಎಸ್. ಭಟ್ ನೆನಪಿನಲ್ಲಿ ಪ್ರತಿ ವರ್ಷ ನೀಡುವ 5000–00 ರೂ ಹಮ್ಮಿಣಿ, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆಯನ್ನು ಒಳಗೊಂಡ ಸಹಯಾನ ಸಮ್ಮಾನವನ್ನು ಯಕ್ಷಗಾನದ ವೇಷಭೂಷಣ ಮತ್ತು ಪ್ರಸಾದನ ಕಲಾವಿದ ಭಾಸ್ಕರ ಗೌಡ, ಆಡುಕುಳ ಇವರಿಗೆ ನೀಡಿ ಮಾತನಾಡುತ್ತಿದ್ದರು.

ಮುಂದುವರಿದು "ನಾನು ಬಾಲ್ಯದಲ್ಲಿ ಯಾರೊಡನೆ ಬೆರೆತೆನೋ ಯಾರಿಂದ ರಂಗಕ್ಕೆ, ಕತೆಗೆ ಬೇಕಾದ ಮೌಲ್ಯಗಳನ್ನು ತಿಳಿದುಕೊಂಡೆನೋ ಅಂತಹ ಆರ್.ವಿ.ಭಂಡಾರಿ ಮತ್ತು ಜಿ.ಎಸ್.ಭಟ್ ಧಾರೇಶ್ವರ ಇವರ ನೆನಪಿನ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಖುಷಿಯ ಸಂಗತಿ. ಇವರಿಬ್ಬರೊಂದಿಗೆ ನಾನು ನನ್ನ 22 ನೇ ವಯಸ್ಸಿನಿಂದ ಸ್ನೇಹ ಗಳಿಸಿದ್ದೇನೆ. ಒಡನಾಡಿಯಾಗಿದ್ದೇನೆ. ಜಿ. ಎಸ್ ಭಟ್ ಅವರ ಹಲವು ನಾಯಕ, ಪ್ರತಿ ನಾಯಕ ಪಾತ್ರವನ್ನು ರಂಗದ ಮೇಲೆ ಕುಣಿಸಿದ್ದೇನೆ. ಹಿತಮಿತವಾದ ಕುಣಿತ, ಮಾತು, ಯಕ್ಷಗಾನಕ್ಕೆ ಒಗ್ಗುವ ದೇಹಸಿರಿ ನನಗೆ ಈಗಲೂ ನೆನಪಿನಲ್ಲಿದೆ. ಆರ್. ವಿ. ಭಂಡಾರಿಯವರಂತೆ ಕರ್ಣನ ಪಾತ್ರ ಕಟ್ಟಿಕೊಡುವವರು ಯಾರೂ ಇರಲಿಲ್ಲ. ಅದ್ಭುತ ಕಂಠ ಸಿರಿ ಅವರದು. ಪೌರಾಣಿಕ ಕತೆಯನ್ನು ಈಗಿನ ಹೊಸತನ ಸೇರಿಸಿ ಪಾತ್ರದ ಔಚಿತ್ಯಕ್ಕೆ ಚ್ಯುತಿ ಬರದಂತೆ ಜನಮೆಚ್ಚುಗೆ ಗಳಿಸಿದವರು. ದಿವಂಗತ ಜಿ. ಎಸ್. ಭಟ್ ಮತ್ತು ಆರ್. ವಿ. ಭಂಡಾರಿಯವರಲ್ಲಿ ಮಾತ್ರವಲ್ಲದೇ ಇಂದು ಸನ್ಮಾನ ಸ್ವೀಕರಿಸುತ್ತಿರುವ ಭಾಸ್ಕರ ಗೌಡರಲ್ಲಿಯೂ ಯಕ್ಷಗಾನದ ಪ್ರೀತಿ ಬದ್ಧತೆ, ಕಲ್ಮಶ ರಹಿತ ಪ್ರಾಮಾಣಿಕ ಮನೋಭಾವ ಇದೆ. ಎಲ್ಲರೂ ಹಿಮ್ಮೇಳ–ಮುಮ್ಮೇಳದವರಿಗೆ ಸನ್ಮಾನ ಮಾಡುತ್ತಾರೆ. ಆದರೆ ಪರದೆಯ ಹಿಂದೆ 40–45 ವರ್ಷಗಳ ಕಾಲ ದುಡಿದ ವೇಷಭೂಷಣ ಕಲಾವಿದರೊಬ್ಬರಿಗೆ ಸನ್ಮಾನ ನೀಡಿರುವುದು ಮಹತ್ವದ್ದಾಗಿದೆ. ವಸ್ತ್ರ ವಿನ್ಯಾಸ ನೋಡಿದೊಡನೆ ಆ ಪಾತ್ರ ಯಾವುದು ಎಂದು ಗುರುತಿಸುವ ರೀತಿಯಲ್ಲಿ (ಪ್ರತಿಯೊಂದು ಪಾತ್ರಕ್ಕೆ ಪ್ರತ್ಯೇಕ ವಸ್ತ್ರ ವಿನ್ಯಾಸ) ವೇಷ ಭೂಷಣ ಮತ್ತು ವಸ್ತ್ರ ವಿನ್ಯಾಸ ಮಾಡಿದರೆ ಭಾಸ್ಕರ ಗೌಡರವರು ಯಕ್ಷಗಾನದ ಚರಿತ್ರೆಯಲ್ಲಿ ಮೊದಲಿಗರಾಗಿ ಉಳಿಯುತ್ತಾರೆ. ಅವರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಸಿಗಲಿ" ಎಂದು ಅವರಿಗೆ ಶುಭ ಹಾರೈಸಿದರು.



ಅಕಾಡೆಮಿ ಪ್ರಶಸ್ತಿ ಪಡೆದ ಸುಬ್ರಾಯ ಭಾಗವತರನ್ನು ಸಹಯಾನದ ಪರವಾಗಿ ವಿಷ್ಣು ನಾಯ್ಕ ಮತ್ತು ಇಂದಿರಾ ಭಂಡಾರಿ ಶಾಲು ಹೊದೆಸಿ ಅಭಿನಂಧಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಭಾಸ್ಕರ ಗೌಡರವರು "ಹಿಂದೆ ತಲೆಯ ಮೇಲೆ ಪೆಟ್ಟಿಗೆ ಹೊತ್ತುಕೊಂಡು ಹೋಗುವ ಕಾಲದಿಂದ ಈವರೆಗೆ ನಾನು ಶ್ರದ್ಧೆಯಿಂದ ಈ ಕೆಲಸ ಮಾಡಿದ್ದೇನೆ. ರಾತ್ರಿಯಲ್ಲಿ ಮುವತ್ತು ನಲವತ್ತು ಪಾತ್ರಗಳಿಗೆ ಬಣ್ಣ ಹಚ್ಚಿದ್ದಿದೆ. ಮಕ್ಕಳಿಗೂ ಅವರವರ ದೇಹ ರಚನೆಗೆ ಅನುಗುಣವಾಗಿ ವಸ್ತ್ರ ವಿನ್ಯಾಸ ಮಾಡಿದ್ದಿದೆ. ಈ ಕೆಲಸವನ್ನು ಸುಮಾರು 45 ವರ್ಷಗಲಿಂದ ಮುಂದುವರೆಸುತ್ತಲೆ ಬಂದಿದ್ದೇನೆ." ಎಂದರು.

ಭಾಸ್ಕರ ಗೌಡರ ಕುರಿತು ಕಲಾವಿದ ಗಣೇಶ ಭಂಡಾರಿ ಅಭಿನಂದನಾ ಮಾತುಗಳನ್ನಾಡಿದರು. ಉದಯ ಜಿ. ಭಟ್ ಉಪಸ್ಥಿರಿದ್ದು ಮಾತನಾಡಿದರು. ಸಹಯಾನದ ಅಧ್ಯಕ್ಷರಾದ ಶಾಂತಾರಾಮ ನಾಯಕ ಹಿಚ್ಕಡ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತನ್ನ ಬಾಲ್ಯದಲ್ಲಿ ಯಕ್ಷಗಾನ ವೇಷವನ್ನು ನಿರ್ವಹಿಸಿದ ಪರಿಯನ್ನು ನೆನಪಿಸಿಕೊಂಡರು. ಚಿಂತನ ರಂಗ ಅಧ್ಯಯನ ಕೇಂದ್ರದ ಕಿರಣ ಭಟ್ ಸ್ವಾಗತಿಸಿದರು. ಕಾರ್ಯದರ್ಶಿ ದಾಮೋದರ ನಾಯ್ಕ ವಂದಿಸಿದರು. ವಿಠ್ಠಲ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು.

ಸಭಾ ಕಾರ್ಯಕ್ರಮದ ನಂತರ ವಿಶ್ವರಂಗಭೂಮಿ ದಿನದ ಭಾಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಂಜುಳಾ ಸುಬ್ರಹ್ಮಣ್ಯ ಅವರ ಅಭಿನಯದ "ರಾಧಾ" ನಾಟಕ ಅಭಿನಯಿಸಲ್ಪಟ್ಟಿತು. ಸುಧಾ ಆಡುಕಳ ಅವರು ರಚಿಸಿದ ನಾಟಕವನ್ನು ಡಾ. ಶ್ರೀಪಾದ ಭಟ್ ಅವರು ನಿರ್ದೇಶಿಸಿದ್ದರು. ವಿದ್ಯಾಧರ ಕಟತೋಕ ಅವರು ಸ್ವಾಗತಿಸಿದರೆ ಮಾಧವಿ ಭಂಡಾರಿ ನೆನಪಿನ ಕಾಣಿಕೆ ಕೊಟ್ಟು ವಂದಿಸಿದರು.

ಎಚ್.ಎಲ್. ಕೇಶವಮೂರ್ತಿ ಇನ್ನಿಲ್ಲ



ನಾಡಿನ ಪ್ರಗತಿಪರ ಚಳುವಳಿಗಳ ಒಡನಾಡಿ, ಚಿಂತಕ, ಸಾಹಿತಿ ಎಚ್.ಎಲ್. ಕೇಶವಮೂರ್ತಿಯವರು ಮಾರ್ಚ್ 30ರಂದು ನಿಧನ ಹೊಂದಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಪ್ರಗತಿಪರ ಚಳುವಳಿಯಲ್ಲಿ ತೊಡಗಿಸಿಕೊಂಡವರ ಮಾರ್ಗದರ್ಶಕರೂ, ಹಿತೈಷಿಯೂ ಆಗಿದ್ದ ಎಚ್ಎಲ್ಕೆಯವರ ನಿಧನದಿಂದ ಚಳುವಳಿಗಳು ಮಿತ್ರನೊಬ್ಬನ ಅಗಲಿಕೆಯಿಂದ ಬಡವಾಗಿವೆ.

ಕೇಶವಮೂರ್ತಿ ಅವರು ಇಂಜನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಮಂಡ್ಯದ ಪಿ.ಇ.ಎಸ್. ಇಂಜಿನಿಯರ್ ಕಾಲೇಜಿ ನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಇವರು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಮೂಲಕ ವಿಡಂಬನೆ, ಹಾಸ್ಯ ಬರಹಗಳನ್ನು ಬರೆಯುತ್ತಿದ್ದರು. ನಿನ್ನಾಕೋ ನಿನ್ನ ಹಂಗ್ಯಾಕೋ ಮಾವ?, ಎಂಗಾರ ಟಿಕೆಟ್ ಕೊಡಿ, ಗೌರವಾನ್ವಿತ ದಗಾಕೋರರು, ಇಸ್ಪೀಟು ನ್ಯಾಯ, ಜೆ–ಒಟ್ಸ್ ದ್ರೌಪದಿ ವಸ್ತ್ರಾಪಹರಣ ಪ್ರಕರಣವು ಇವರ ಕೃತಿಗಳು. 1972ರಲ್ಲಿ ಇವರ 'ನೀನ್ಯಾಕೊ ನಿನ್ನ ಹಂಗ್ಯಾಕೊ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಕಲಬುರ್ಗಿ : ಮಹಿಳೆಯರ ನಿರ್ಭೀತ ನಡಿಗೆ

"ಈ ರಸ್ತೆ ನಮ್ಮದು, ಈ ರಾತ್ರಿ ನಮ್ಮದು, ನಿರ್ಭಯದ ಬದುಕು ನಮ್ಮದು" ಎಂಬ ಘೋಷಣೆಯೊಂದಿಗೆ ಮಾರ್ಚ್ 25ರ ರಾತ್ರಿ ಎಲ್ಲಾ ಕಡೆಗಳಿಂದ ಮಹಿಳೆಯರು ಬಂದು ಭಾಗವಹಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದರೆ ಕೇವಲ ಭಾಷಣ ಮತ್ತು ಒಂದು ವೇದಿಕೆಗೆ ಮಾತ್ರ ಸೀಮಿತವಾಗಿರದೆ ಅದು ಒಂದು ಹೊಸ ಅರಿವನ್ನು ಮೂಡಿಸುವ ದಿನವಾಗಬೇಕು ಎಂಬ ದೃಷ್ಟಿಯಿಂದ ರಾತ್ರಿಯಲ್ಲಿ ಆಚರಿಸಬೇಕು ಎಂದು ನಿರ್ಧರಿಸಿದೆವು.

ಹಾಸ್ಟೆಲುಗಳು, ಸ್ಲಂಗಳು, ಹಳ್ಳಿಗಳಿಂದ 500ಕ್ಕೂ ಹೆಚ್ಚು ಮಹಿಳೆಯರು ಬಂದರು. ಮಹಿಳೇಯರ 5 ತಂಡಗಳನ್ನು ರಚಿಸಲಾಗಿತ್ತು. ರಂಗಮಂದಿರ, ಅಪ್ಪಾ ದೇವಾಲಯ, ಸೂಪರ್ ಮಾರ್ಕೆಟ್, ತೀರಂದಾಜ್ ಟಾಕೀಸ್ ಮತ್ತು ಜಿಲ್ಲಾ ಪಂಚಾಯತ್ ಕಚೇರಿಯಿಂದ ಮಹಿಳೆಯರ ತಂಡಗಳು ಹೊರಟು ಕಲಬುರ್ಗಿಯ ಬೀದಿಗಳಲ್ಲಿ ಮೇಣದ ಬತ್ತಿ ಹಿಡಿದುಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಮಾಡಿ ಜಗತ್ ವೃತ್ತಕ್ಕೆ ಬಂದು ಸೇರಿದರು. ನೆರೆದ ಮಹಿಳೆಯರನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘಟನೆ ನಾಯಕಿ ನೀಲಾ ಕೆ, ಮತ್ತು ಜಿಲ್ಲಾ ಸಿಇಒ ಹೆಪ್ಸಿಬಾ ರಾಣಿ ಕೊರ್ಲಪತಿ ಮಾತನಾಡಿದರು. ಸಭೆ ಮಧ್ಯರಾತ್ರಿ 1.30 ವರೆಗೆ ನಡೆಯಿತು.

ಹೆಚ್ಚಿನ ಮಹಿಳೆಯರು ರಾತ್ರಿ ಸಮಯದಲ್ಲಿ ಹೊರಗೆ ಬಂದದ್ದು ಮೊದಲ ಬಾರಿ ಆಗಿತ್ತು. ಅದರಲ್ಲೂ ವಿಶೇಷವೆಂದರೆ ಯಾವದೇ ಜಾತಿ ಭೇದ ಭಾವವಿಲ್ಲದೆ ಎಲ್ಲರೂ ಒಟ್ಟಾಗಿ ಸೇರಿದ ಸಮಯ ಆ ಘಳಿಗೆಯಾಗಿತ್ತು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು ಅರಿವಿನ ದಿನವಾಯಿತು.

ಇದು ನಿರ್ಭೀತ ನಡಿಗೆಯ ಝಲಕ್ ... ಮಾರ್ಚ್ 25ರ ರಾತ್ರಿ ಬಂದರು ಈ ಯುವತಿಯರು ಮಹಿಳೆಯರು ... ಅಂಜದೆ ಅಳುಕದೆ .. ದೀವಟಿಗೆ ಹಿಡಿದು ಬಂದರು. ಬೆಳಕು ಹೊತ್ತು ತಂದರು .. ನಿರ್ಭಯದ ದನಿಯೆತ್ತಿ ಮೊಳಗಿಸಿದರು ಘೋಷಣೆಗಳ 'ಈ ರಾತ್ರಿಗಳು ನಮ್ಮವು, ಈ ರಸ್ತೆಗಳು ನಮ್ಮವು, ನಾವು ಮಹಿಳೆಯರು, ನಿರ್ಭಯದ ಬದುಕು ನಮ್ಮದು'. ಜಗತ್ ವೃತ್ತಕ್ಕೆ ನಾಲ್ಕು ದಿಕ್ಕಿನಿಂದ ನಡೆದು ಬಂದರು .. 'ಒಂದಲ್ಲ ಒಂದು ದಿನ ಈ ನೆಲದ ಹೆಣ್ಣುಗಳು ಮೆರವಣಿಗೆ ಹೊರಡುತ್ತಾರೆ' ಹೊರಟೆ ಬಂದರು .. ನಿಜ ಹೇಳಲೇ ಈ ಎಲ್ಲರ ಹೃದಯದಲ್ಲಿ ಅಗ್ನಿ ಪರ್ವತವೇ ಇತ್ತು .. ನಿಯಂತ್ರಣ ಗಡಿ–ರೇಖೆಗಳ ಕಿತ್ತೆಸೆವ ಹುಮ್ಮಸ್ಸು .. ಹೆಜ್ಜೆ ಹಾಕಿದರು ಹಾಡಿಗೆ .. ಚಪ್ಪಾಳೆ ತಟ್ಟಿದರು ಗಾನಕ್ಕೆ

– ನೀಲಾ ಕೆ



JANASHAKTHIKANNADAVARAPATRIKE: Printed, Published by G.V.SRIRAMAREDDY, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027
Editor : G.V.SRIRAMA REDDY